ಐಕ್ಯರಂಗ

ವಿಶೇಷ ಸಂಚಿಕೆ

ನವೆಂಬರ್ 2001



ಕರ್ನಾಟಕ

ಏಕೀಕರಣ V/s ವಿಭಜನಾವಾದ

ಅಭಿವೃದ್ಧಿ V/s ಹಿಂದುಳಿದಿರುವಿಕೆ

ಐಕ್ಯರಂಗ

ವಾರಪತ್ರಿಕೆ

ದುಡಿವ ಜನರ ಪ್ರಾಣಮಿತ್ರ

ಸಂಪುಟ 23 ಸಂಚಿಕೆ 44-46 ನವೆಂಬರ್ 2001 ಬೆಲೆ ರೂ. 12.00



ಮುಖಪುಟ ಕಲೆ
ಕೃಷ್ಣಾ ರಾಯಚೂರು

ಅಕ್ಷರ ಜೋಡಣೆ:
ಅಕ್ಷರವಿನ್ಯಾಸ
ಸಂಪಂಗಿರಾಮನಗರ
ಬೆಂಗಳೂರು-27

ಪ್ರಸಾರ - ನಿರ್ವಹಣೆ
ಜಯರಾಮು

ಕೃತಜ್ಞತೆಗಳು:

- ಲೇಖಕರಿಗೆ
- ಜಾಹೀರಾತುದಾರರಿಗೆ
- ಕೆಲವು ಮಾಹಿತಿ ಹಾಗೂ ಚಿತ್ರ ಬಳಸಿಕೊಳ್ಳಲಾದ
  ನವಕರ್ನಾಟಕ ಪ್ರಕಾಶನ
  ಭಾವನಾ ಮಾಸಪತ್ರಿಕೆ
  ಕಸಾಪದ 'ಕನ್ನಡ ಬಾವುಟ'
  ಡೀಪ್ ಫೋಕಸ್
  ಕೃಷ್ಣಾ ರಾಯಚೂರು
  Students Struggle
- ಅಕ್ಷರ ವಿನ್ಯಾಸದ ರಾಮು, ಚಂದ್ರು, ರೇಖಾ ಹಾಗೂ ಕಾರ್ಮಿಕ ಬಂಧುಗಳಿಗೆ
- ಸಹಕರಿಸಿದ ಎಲ್ಲರಿಗೂ

ಶಾಂತಿಗೀಗ ಗುಂಡೇಟು



ನಮ್ಮ ನೆರೆಯ ಅಫಘಾನಿಸ್ತಾನದ ಮೇಲೆ ಕಳೆದ ಎಂಟು ವಾರಗಳಿಂದ ನಿಲ್ಲದ ಬಾಂಬ್‌ಗಳ ಸುರಿಮಳೆ, ಸಾವಿರ ಸಾವಿರ ನಾಗರೀಕರು, ಮಕ್ಕಳು, ಮುದುಕರು, ಮಹಿಳೆಯರು ಮಾರಣಹೋಮ ನೆಲ-ಜಲಕ್ಕೆ ವಿಷ. ಆಸ್ತಿ ಪಾಸ್ತಿ, ಆಹಾರ-ಔಷಧಿ ಧ್ವಂಸ.

ಅಮೇರಿಕಾ ಸಾರಿರುವ ಈ ಯುದ್ಧಕ್ಕೆ ಹೆಸರು 'ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ'. ಬಿತ್ತಿದ್ದನ್ನೇ ಬೆಳೆದು, ಸ್ವಲ್ಪವೇ ಉಂಡ ಅಮೇರಿಕಾದ ಪೂತ್ಕಾರ. ಇಡೀ ಮಾನವ ಜನಾಂಗಕ್ಕೆ ಮಾರಕವಾದ ಭಯೋತ್ಪಾದನೆಯ ನಿರ್ಮೂಲನಕ್ಕೆ ವಿಶ್ವ ಸಮುದಾಯ ನೀಡಿದ ಪರಿಹಾರೋಪಾಯಕ್ಕೆ ತಿರಸ್ಕಾರ. ಜಗತ್ತಿನಲ್ಲಿ ಹುಲುಕಡ್ಡಿ ಅಲುಗಾಡಬೇಕೆಂದರೂ ಈ ದೊಣ್ಣೆ ನಾಯಕನ ಅಪ್ಪಣೆಯೇ ಆಗಬೇಕೆಂತೆ. ಈ ಯುದ್ಧ ಇಷ್ಟಕ್ಕೆ ನಿಲ್ಲಲಾರದಂತೆ. ಇನ್ನಷ್ಟು ಇದು ದೀರ್ಘ, ಮನ ಹರಿದಷ್ಟು ವಿಸ್ತಾರ. ಭಯೋತ್ಪಾದಕರಾರು ಎಂದು ನಿರ್ಧರಿಸುವ ಅಧಿಕಾರವೂ ಅಮೆರಿಕಾಕ್ಕೆ. ಆದ್ದರಿಂದ ಇದು ಕೇವಲ ಸೆಪ್ಟೆಂಬರ್ 11 ರ ದುರ್ಘಟನೆಗೆ ಮಾತ್ರ ಅಲ್ಲ ಪ್ರತೀಕಾರ. ಅಮೇರಿಕಾದ ಜಾಗತಿಕ ಅಧಿಪತ್ಯದ್ದೇ ಹುನ್ನಾರ. ಇದಕ್ಕೆ ಎದುರಾಡಿದವರ ಎದೆ ಬಗೆವ ಬೆದರಿಕೆ. ಇಂತಹ ಸನ್ನಿವೇಶದಲ್ಲಿ ಭಾರತ ಅಮೇರಿಕಾದ ಅಡಿಯಾಳಾಗಲು ಹೆಣಗುತ್ತಿದೆ. ಸಾಮ್ರಾಜ್ಯಶಾಹಿ ಧಾಳಿಗಳಿಂದ ನಲುಗಿದ ಭಾರತ ಹಲವು ದಶಕಗಳ ಅಲಿಪ್ತ ವಿದೇಶಾಂಗ ನೀತಿ ಕೈ ಬಿಟ್ಟು ಅದರ ಗುಲಾಮನನ್ನಾಗಿಸಲು ವಾಜಪೇಯಿ ಸರ್ಕಾರ ಹೊರಟಿದೆ.

ಅಲ್ಲಿ ವಾಶಿಂಗ್ಟನ್‌ನಲ್ಲಿ 'ನೀವು ನನ್ನನ್ನು ಬೆಂಬಲಿಸಿ ಇಲ್ಲವಾದರೆ ಭಯೋತ್ಪಾದಕರು ನೀವು' ಎಂದು ಘರ್ಜಿಸುತ್ತಿರುವ ಜಾರ್ಜ್ ಡಬ್ಲ್ಯು ಬುಶ್‌ನಂತೆ, 'ನೀವು ಭಯೋತ್ಪಾದನಾ ವಿರೋಧಿ ಆಜ್ಞೆ (POTO) ಬೆಂಬಲಿಸಿ, ವಿರೋಧಿಸಿದರೆ ನೀವು ಭಯೋತ್ಪಾದಕರ ಜೊತೆ' ಎಂದು ಗೃಹ ಸಚಿವ ಅಡ್ವಾಣಿ ಇಲ್ಲಿ ಕಿರುಚುತ್ತಿದ್ದಾರೆ. ಭಯೋತ್ಪಾದನೆ ದಮನದ ಹೆಸರಲ್ಲಿ ನಾಗರೀಕರ, ದುಡಿವ ವರ್ಗದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರ್ದನ ಮಾಡುವುದಕ್ಕೆ ಬೆಂಬಲಿಸಿದರೆ ದೇಶಪ್ರೇಮಿಗಳಂತೆ, ಇಲ್ಲವಾದರೆ ದೇಶದ್ರೋಹಿಗಳಂತೆ.

ಉದಯವಾಗದ ನಮ್ಮ ಚೆಲುವ ಕನ್ನಡ ನಾಡು

'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಹಲವು ದಶಕಗಳು (ಸುಮಾರು 50 ವರ್ಷ) ಹಾಡಿ-ಕಾದಾಡಿದ್ದು ನಮ್ಮ ಇತಿಹಾಸದ ಭಾಗ. ಈ ಚಳುವಳಿ ಸ್ವಾತಂತ್ರ್ಯ ಸಂಗ್ರಾಮದೊಟ್ಟಿಗೆ ಜೊತೆಯಾಗಿ ಬೆಳೆದು ಬಂದಂದಹದ್ದು. ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ ಇಂದಿಗೆ 46 ವರ್ಷಗಳಾದವು.

ಹರಿದು ತುಂಡಾಗಿಹದು ಇಂದು ಕನ್ನಡ ನಾಡು
..... ನಾವೆಲ್ಲಾ ಒಂದೇ ಮನೆಯವರಣ್ಣ ತಮ್ಮದಿರು

ಎಂದು ಕೂಗಿ ಕರೆದು ಬೆಸುಗೆ ಹಾಕಿದ ನಾಡಿನಲ್ಲಿಂದು ಪ್ರತ್ಯೇಕತೆಯ ಕೂಗು ಕೇಳುತ್ತಿದೆ. ಕರ್ನಾಟಕವನ್ನು ಒಡೆದು ಕೊಡಗು, ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲಿ ಎಂದು ಚಳುವಳಿ ತಲೆ ಎತ್ತುತ್ತಿದೆ. ನಿಜ, ಸ್ವಾತಂತ್ರ್ಯದ ಆಶಯಗಳಂತೆಯೇ ಭಾಷಾವಾರು ಪ್ರಾಂತ್ಯಕ್ಕಾಗಿ ತ್ಯಾಗ ಬಲಿದಾನಗಳಿಂದ ಹೋರಾಡಿದ ನಮ್ಮ ಆಶಯಗಳು ಸಾಕಾರಗೊಳ್ಳಲಿಲ್ಲ. ಇಂದು ಕಾಣುವ ಅನಭಿವೃದ್ಧಿ, ಪ್ರಾದೇಶಿಕ ಅಸಮಾನತೆಗಳು, ಪ್ರತ್ಯೇಕತೆಯ ಭಾವನೆ ಬೆಳೆಯಲು ಕಾರಣ. ಆದರೆ ಪ್ರಶ್ನೆ ಇರುವುದು ಪ್ರತ್ಯೇಕ ರಾಜ್ಯವಾದರೆ ಎಲ್ಲಾ ಅಭಿವೃದ್ಧಿ ಸಾಧ್ಯವೇ? ಅಭಿವೃದ್ಧಿಯೊಂದಿಗೆ ವಿವಿಧ ರಾಜ್ಯಗಳು ಒಡಗೂಡಿದ ಒಕ್ಕೂಟ ವ್ಯವಸ್ಥೆಯ ಕೇಂದ್ರವಾಗಿರುವ ಭಾರತದ ಅಭಿವೃದ್ಧಿಯೊಂದಿಗೆ ರಾಜ್ಯಗಳೂ ಅಭಿವೃದ್ಧಿಯಾಗಲು ಸಾಧ್ಯವಿದೆ. ಕೇಂದ್ರದ ಪ್ರಭುತ್ವ ಅನುಸರಿಸುವ ಮೂಲಭೂತ ನೀತಿಗಳ ತೆಕ್ಕೆಗೆ ರಾಜ್ಯಗಳೂ ಒಳಗಾಗಿವೆ. ಹೀಗೆ ದೇಶದ ಅಭಿವೃದ್ಧಿಯಲ್ಲಿ ರಾಜ್ಯದ ಅಭಿವೃದ್ಧಿ ಇದೆ. ರಾಜ್ಯಗಳಿಗೇ ಒಂದು ಪ್ರತ್ಯೇಕವಾದ ಮೂಲಭೂತ ಅಭಿವೃದ್ಧಿ ಮಾರ್ಗ ಅನುಸರಿಸಲು ಇಂದು ಸಾಧ್ಯತೆಗಳು ಇಲ್ಲವಾಗಿವೆ. ಆದರೆ ಸಂವಿಧಾನಾತ್ಮಕವಾಗಿ ಸೀಮಿತ ಅವಕಾಶ-ಹಕ್ಕುಗಳನ್ನು ಬಳಸಿ ರಾಜ್ಯಗಳು ಪರ್ಯಾಯ ಜನಪರ ಹಾದಿಯಲ್ಲಿ ಸಾಗಲು ಅದಕ್ಕಾಗಿ ಹೋರಾಡಲು ಯತ್ನಿಸಿದರೆ ಕೊಂಚವಾದರೂ ಜನತೆಗೆ ಪರಿಹಾರ ನೀಡಲು ಸಾಧ್ಯವಿದೆ. ಪ.ಬಂಗಾಳ, ತ್ರಿಪುರಾ, ಕೇರಳದಂತಹ ಎಡರಂಗದ

ಇಲ್ಲಿ ಕವಿಯೊಬ್ಬರು
ಹೀಗೆ ಆತಂಕಿಸುತ್ತಾರೆ...

**ಅಲ್ಲೆಲ್ಲೊ ಒಂದು ಕಡೆ ಭೂಮಿ
ಗಡಗಡನೇ ನಡುಗುತ್ತಿದೆ, ಇಲ್ಲಿ
ನನ್ನ ಮನೆ, ನಿಂತ ನೆಲ,
ಬರೆವ ಟೇಬಲ್ ಅದುರುತ್ತಿದೆ
ಶಾಂತಿಗೀಗ ಗುಂಡೇಟು**

ಸರ್ಕಾರಗಳನ್ನು ಬಿಟ್ಟರೆ ಬಹುತೇಕ ರಾಜ್ಯಗಳು ಈ ದೆಶೆಯಲ್ಲಿ ಮುಂದಾಗುತ್ತಿಲ್ಲ. ಕಾರಣ ದೇಶದ ಅಧಿಕಾರದಂತೆಯೇ ಇಲ್ಲಿಯೂ ಭೂ ಏಕಸ್ವಾಮ್ಯ ಬಂಡವಾಳಗಾರರು ಭೂಮಾಲೀಕರ ಪ್ರಭುತ್ವ ಇರುವುದು, ದುಡಿವ ಜನತೆಯ ಪ್ರಜಾಸತ್ತಾತ್ಮಕ ಚಳುವಳಿ ಪ್ರಬಲವಾದ ಪರ್ಯಾಯ ರೂಪಗೊಳ್ಳದಿರುವುದು.

ಇಂದು ಪ್ರತ್ಯೇಕ ರಾಜ್ಯದ ಕೂಗು ಹಾಕುವವರಿಗೆ ಅನಭಿವೃದ್ಧಿ - ಪ್ರಾದೇಶಿಕ ಅಸಮಾನತೆಯ ಮೂಲಕಾರಣಗಳನ್ನು ಗಂಭೀರವಾಗಿ ಹುಡುಕುವ, ಪ್ರಜಾಸತ್ತಾತ್ಮಕ ಪರಿಹಾರ ಮಾರ್ಗ ರೂಪಿಸುವ ಇರಾದೆಯೂ ಇಲ್ಲ. ಅದೂ ಬೇಕಾಗಿಯೂ ಇಲ್ಲ. ಇಂತಹ ಕೆಲವರು ಪಾಳೇಗಾರಿ ಅರಸರ ಕನಸಿನ ವಿಕೃತ ಶಿಶುಗಳು. ಹೀಗಾಗಿ ಇಂತಹ ಚಳುವಳಿಗಳು ಜನಪರ ಪರ್ಯಾಯದ ಅಭಿವೃದ್ಧಿಯ ಹೋರಾಟದಲ್ಲಿ ಎಲ್ಲಾ ಜನರೂ ಒಗ್ಗೂಡಬೇಕಾದ ಐಕ್ಯತೆಯನ್ನು ಮುರಿಯಲ್ಲಷ್ಟೇ ಸಾಧ್ಯವಾಗುವುದು. ಇಂತಹ ಹೋರಾಟಗಳನ್ನು ದುರ್ಬಲಗೊಳಿಸುವುದು. ಜನರ ಗಮನ ಬೇರೆಡೆ ಸೆಳೆಯುವುದು. ಅದೂ ಜಾಗತೀಕರಣದ ಕ್ರೂರ ಧಾಳಿಗಳನ್ನು ಹಿಮ್ಮೆಟ್ಟಿಸಲು ಇಡೀ ವಿಶ್ವದ ಜನರೇ ಒಂದಾಗಿ ಹೋರಾಡಲು ಮುಂದಡಿ ಇಡುತ್ತಿರುವಾಗ...

ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ವಿಭಜನಾ ರಾಜಕೀಯ ಕ್ರಮಗಳು ಈ ಪ್ರತ್ಯೇಕತಾವಾದಿಗಳಿಗೆ ಮತ್ತೆ ಗರಿ ಕೆದರಿಸಿವೆ. ಹೇಳಿಕೇಳಿ ಈ ಸಂಘ ಪರಿವಾರ ಒಕ್ಕೂಟದ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ವಿರೋಧಿ. ಕೇಂದ್ರದ ಹೆಚ್ಚು ಹೆಚ್ಚು ಸರ್ವಾಧಿಕಾರದ ಸಮರ್ಥಕ. ಪ್ರಬಲ ಕೇಂದ್ರದ ಬಗ್ಗೆ ಸದಾ ವಾದಿಸುವ, ರಾಜ್ಯಗಳನ್ನು ಇನ್ನಷ್ಟು ದುರ್ಬಲಗೊಳಿಸಬಯಸುವ ಸಿದ್ಧಾಂತಿ. ಮೊದಲಿನಿಂದಲೂ ಭಾಷಾವಾರು ಪ್ರಾಂತ್ಯಗಳ ರಚನೆಗೆ, ಭಾರತ ಬಹುಭಾಷೆ-ಬಹುಸಂಸ್ಕೃತಿಯ ನಾಡು ಎಂಬುದನ್ನು ಒಪ್ಪದ ಕಡು ವಿರೋಧಿ. ಕೇಂದ್ರ-ರಾಜ್ಯ ಸಂಬಂಧಗಳು ಪುನರ್‌ರೂಪುಗೊಂಡು ಬಲಿಷ್ಠ ರಾಜ್ಯಗಳಿದ್ದರೆ ಮಾತ್ರವೇ ಬಲಿಷ್ಠ ಕೇಂದ್ರ ರೂಪುಗೊಳ್ಳಲು ಸಾಧ್ಯ. ಆದ್ದರಿಂದ ಕೇಂದ್ರವೇ ಎಲ್ಲವನ್ನೂ ಬಾಚುವ, ಅಧಿಕಾರ ಹಿಡಿದಿಟ್ಟುಕೊಳ್ಳುವುದಕ್ಕೆ ಭಿನ್ನವಾಗಿ ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ಅಧಿಕಾರ ನೀಡಲು ಇಂದಿನ - ಹಿಂದಿನ ಆಳುವವರು ನಿಕಾರಿಸಿದ ರಾಜಕೀಯ ವ್ಯವಸ್ಥೆಯೇ ಇದಕ್ಕೆ ಕಾರಣ. 'ಒಂದು ಭಾಷೆ-ಒಂದೇ ಧರ್ಮ, ಒಂದೇ ದೇಶ' ಎನ್ನುವ ಆರ್.ಎಸ್.ಎಸ್. ನ ನೀತಿಯಂತೆಯೇ 'ಚಿಕ್ಕ ರಾಜ್ಯ ಚೊಕ್ಕ ರಾಜ್ಯ' ಎಂದು ಆಕರ್ಷಕ ಘೋಷಣೆ ನೀಡಿ ರಾಜ್ಯಗಳನ್ನು ವಿಭಜಿಸಲು ಮುಂದಾಗುತ್ತಿದೆ. ಉತ್ತರಾಂಚಲ, ಝರ್‌ಖಂಡ್, ಛತ್ತೀಸ್‌ಘಡ್‌ಗಳಂತಹ ರಾಜ್ಯಗಳ ರಚನೆ, ಮತ್ತೆ ಇನ್ನೂ ಇಂತಹವುಗಳ ರಚಿಸುವ ಇಚ್ಛೆಯು ದೇಶದಲ್ಲೆಲ್ಲಾ




ವಿಭಜಕವಾದಿಗಳಿಗೆ ಕುಮ್ಮಕ್ಕು ನೀಡಿದೆ. ಚಿಕ್ಕ ರಾಜ್ಯಗಳು ಸಂಪನ್ಮೂಲದ ಕೊರತೆಯಿಂದ ಬಳಲಿ, ಹೆಚ್ಚಿನ ಸಂಪನ್ಮೂಲಕ್ಕಾಗಿ ಹೋರಾಡದೇ ಬಲಿಷ್ಠ ಕೇಂದ್ರದ ಎದುರು ಸದಾ ಮಂಡಿಯೂರಿ ಪ್ರಾರ್ಥಿಸುವ ದುರ್ಬಲ ಸ್ಥಿತಿಯೇ ಇಂದು ಕೇಂದ್ರಕ್ಕೆ ಬೇಕಾಗಿರುವುದು. ಇದು ದೊಡ್ಡ ಸವಾಲು.

ಈಗೀಗಲಂತೂ ಎಲ್ಲಾ ಕಡೆ ಅಭಿವೃದ್ಧಿಯದ್ದೇ ಮಾತು. ವಾಜಪೇಯಿ, ಎಸ್.ಎಂ.ಕೃಷ್ಣ, ಚಂದ್ರಬಾಬು ನಾಯ್ಡು.... ತಮ್ಮನ್ನು ಬಣ್ಣಿಸಿಕೊಳ್ಳುವುದು ಅಭಿವೃದ್ಧಿಯ ಹರಿಕಾರೆಂದೇ. ಆದರೆ ಇವರಿಗೆ ಅಭಿವೃದ್ಧಿ ಎಂದರೆ ಭೂಸುಧಾರಣೆ ಅಲ್ಲ. ಕೈಗಾರಿಕಾ ಬೆಳವಣಿಗೆಗಳಲ್ಲ. ಉದ್ಯೋಗ ಸೃಷ್ಟಿಸುವ ಯೋಜನೆಗಳಲ್ಲ, ಶಿಕ್ಷಣವಲ್ಲ ಅಥವಾ ಅಭಿವೃದ್ಧಿ ಸಾಧಿಸಲು ಆಂತರಿಕ ಸಂಪನ್ಮೂಲಗಳನ್ನು ಸೃಷ್ಟಿಸುವ, ಕ್ರೋಢೀಕರಿಸುವುದು ಅಲ್ಲವೇ ಅಲ್ಲ. ಅಭಿವೃದ್ಧಿ ಎಂದರೆ ರಸ್ತೆ, ಸೇತುವೆಗಳ ನಿರ್ಮಾಣ. ಇದಕ್ಕೆ ವಿಶ್ವಬ್ಯಾಂಕ್, ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಯಥೇಚ್ಛ ಸಾಲಕ್ಕೆ ಮೊರೆ. ಈ ಸಾಲ ನೀಡಿದ ಸಂಸ್ಥೆಗಳು ವಿಧಿಸುವ ಅಸಹನೀಯ ಶರತ್ತುಗಳಿಗೆ ತಲೆಬಾಗಿರುವ ಈ ಸರ್ಕಾರಗಳು, ಜನರನ್ನು, ರಾಜ್ಯವನ್ನು ಸುಲಿಗೆಖೋರರ ಕಬಂಧ ಬಾಹುಗಳಿಗೆ ಒಪ್ಪಿಸುತ್ತಿದ್ದಾರೆ. ವಿದ್ಯುತ್, ನಾಗರೀಕ ಸೇವೆ, ಕೃಷಿರಂಗ, ಆರೋಗ್ಯ, ನೈರ್ಮಲ್ಯ, ಶಿಕ್ಷಣ, ಗ್ರಾಮೀಣ ಅಭಿವೃದ್ಧಿ ಹೀಗೆ ಎಲ್ಲವನ್ನು ವಿಶ್ವಬ್ಯಾಂಕ್ ಅಣತಿಯಂತೆ ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳು ನಾಡಿನ ಜನರ ಏಕೀಕರಣ ಹೋರಾಟದ ಕನಸುಗಳನ್ನು ಸೊರಗಿಸುತ್ತವೆ, ನಾಡನ್ನು ಹಿಂಡುತ್ತವೆ. ಇಂತಹ ವಿದೇಶಿ ಸಂಸ್ಥೆಗಳು, ದೇಶೀಯ ಸುಲಿಗೆಕೋರರ ಹಿಡಿತದಿಂದಾಗಿ ಚೆಲುವ ಕನ್ನಡನಾಡು ಉದಯವಾಗದು.

● ● ●

ರಾಜ್ಯೋತ್ಸವದ ಇಂದಿನ ಸಂದರ್ಭದಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆ, ಎದ್ದಿರುವ ವಿಭಜಕವಾದಗಳು - ನಾಡಿನ ಜನರ ಆಶಯಗಳು ಅಭಿವೃದ್ಧಿ ಕುರಿತಂತೆ ವಿಶೇಷ ಲೇಖನಗಳನ್ನು ಈ ಸಂಚಿಕೆ ಒಳಗೊಂಡಿದೆ. ಏಕೀಕರಣ ಆಶಯಗಳು, ಅದರ ಸೈದ್ಧಾಂತಿಕ ಪ್ರಶ್ನೆಗಳ ಬಗೆಗೂ ವಿಶ್ಲೇಷಣೆ ಇಲ್ಲಿದೆ. ಪ್ರತಿಯೊಂದು ವಿಶೇಷ ಸಂಚಿಕೆಗಳೂ ವಿಶಿಷ್ಟತೆ ಹೊಂದಿದಂತೆ ಈ ಸಂಚಿಕೆಯೂ ಸಮಕಾಲೀನ ಸವಾಲುಗಳಿಗೆ ಸ್ಪಂದಿಸಿದೆ. ಮಾತ್ರವಲ್ಲ, ಜಾಗತೀಕರಣ ಮತ್ತು ಸಂಸ್ಕೃತಿ, ಪುಟ್ಟ ದೇಶವಾದರೂ ದಿಟ್ಟ ಹೋರಾಟದ ದನಿಯಾಗಿರುವ 'ಕ್ಯೂಬಾ' ದ ಕುರಿತು ವಿಭಿನ್ನ ಲೇಖನಗಳಿವೆ. ಹಾಗೆ ದೇಶ ವಿಭಜನೆಯ ಕಥಾವಸ್ತುವುಳ್ಳ ಸಿನಿಮಾಗಳು ಈಗೀಗ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅವುಗಳ ಹೂರಣದ ಬಿಡಿಸಿದ ಸಿನಿಮಾ ವಿಮರ್ಶಾ ಲೇಖನ ಸಹ ಸಂಚಿಕೆಯನ್ನು ವೈವಿಧ್ಯಗೊಳಿಸಿದೆ. ಈ ಸಂಚಿಕೆಯನ್ನು ಇನ್ನೂ ಸಕಾಲಿಕವಾಗಿ, ಉತ್ತಮವಾದ ಲೇಖನ ಗಳೊಂದಿಗೆ ನೀಡುವ ಇಚ್ಛೆ ಇದ್ದರೂ ದುಡಿವ ಜನರ ಪ್ರಾಣಮಿತ್ರನಿಗೆ ಇರುವ ಹಲವು ಮಿತಿಗಳಿಂದಾಗಿ ಆಗಲಿಲ್ಲ. ಎಲ್ಲವುಗಳ ನಡುವೆಯೂ ಸಂಚಿಕೆ ಹೊರತರಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.




ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳು ನಾಡಿನ ಜನತೆಯ ಏಕೀಕರಣ ಹೋರಾಟದ ಕನಸುಗಳನ್ನು ಸೊರಗಿಸುತ್ತವೆ. —— **ಎಸ್.ವೈ.ಗುರುಶಾಂತ್**

ಭಾಷಾವಾರು ಪ್ರಾಂತ್ಯಗಳ ರಚನೆ ಮತ್ತು ವಿಭಜನಾ ವಾದಗಳು


ಪ್ರಕಾಶ್ ಕೆ.

ಸಮೃದ್ಧ ಕನ್ನಡ ನಾಡಾಗಿ ಬಾಳಿ ಬೆಳಗಲು ಇರುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಹೋಗಬೇಕಾದ ಗಂಭೀರ ಸವಾಲು ಎದುರಿರುವಾಗಲೇ ನಾಡಿನ ವಿಭಜನೆಯ ಮಾತು ಎದ್ದಿದೆ. ನಾಡು ಒಂದಾಗಲು ನಡೆದ ಧೀರ ಹೋರಾಟ ಮತ್ತು ವಿಭಜನೆಯ ಅಪಾಯಗಳತ್ತ ಲೇಖನ ಗಮನ ಸೆಳೆಯುತ್ತದೆ



ಹರಿದು ಹಂಚಿಹೋಗಿದ್ದ ಕನ್ನಡ ಭಾಷಾ ಜನಾಂಗವು ಏಕೀಕರಣಗೊಂಡು ಈ ನವೆಂಬರ್ 1 ಕ್ಕೆ 46ನೇ ವರ್ಷ ಆರಂಭವಾಗುತ್ತದೆ. ಇದೇ ದಿನ ಹೈದರಾಬಾದ್ ಕರ್ನಾಟಕ ಪ್ರದೇಶದ 5 ಜಿಲ್ಲೆಗಳಲ್ಲಿ ಪ್ರತ್ಯೇಕ ರಾಜ್ಯ ಬೇಕೆಂದು ಬಂದ್ ಆಚರಿಸಲು ಕ್ರಿಯಾಸಮಿತಿಯೊಂದು ಕರೆ ಕೊಟ್ಟಿದೆ. ಇದೇ ರೀತಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆಗಳು ಸೃಷ್ಟಿಯಾಗಿವೆ. ಈಗಾಗಲೇ ಕೊಡಗು ಪ್ರತ್ಯೇಕ ರಾಜ್ಯಕ್ಕೆ ಕೆಲವರು ಹೋರಾಟ ನಡೆಸಿದ್ದಾರೆ.

ಒಂದು ಕಡೆ ರಾಜ್ಯ ಪುನರ್ ವಿಂಗಡಣೆ ಸರಿಯಾಗಿ ಆಗಿಲ್ಲ, ಕರ್ನಾಟಕ ಏಕೀಕರಣ ಪೂರ್ಣಗೊಂಡಿಲ್ಲ ಎಂಬ ಕೂಗು ಕೇಳುತ್ತಿರುವಾಗಲೇ ಕರ್ನಾಟಕವನ್ನು ತುಂಡು ಮಾಡುವ ಘೋಷಣೆಗಳು ಹುಟ್ಟುತ್ತಿವೆ. ಹುಟ್ಟಿ 50 ವರ್ಷಗಳಾಗುವ ಮೊದಲೇ ಕರ್ನಾಟಕ ಹೋಳಾಗುವ ಬೇಡಿಕೆಗಳು ಬೆಳೆಯುತ್ತಿವೆ.



ಭಾಷಾವಾರು ಪ್ರಾಂತ್ಯ ರಚನೆಯಾಗುತ್ತಿದ್ದಂತೆ ವಿಛಿದ್ರಕಾರಿಗಳ ಆಕ್ರಮಣಕ್ಕೆ ಬಲಿಯಾದ ಹೋರಾಟಗಾರ ಬಳ್ಳಾರಿಯ ರಂಜಾನ್‌ಸಾಬ್

ನಾಗರೀಕತೆಯ ಬೆಳವಣಿಗೆಯಲ್ಲಿ ಭಾಷಾ ರಾಷ್ಟ್ರೀಯತೆಯ ಪ್ರಶ್ನೆಯು ಆಧುನಿಕ ಪ್ರಕ್ರಿಯೆಯಾಗಿದೆ. ಬ್ರಿಟಿಷರ ವಿರುದ್ಧ ನಡೆದ ಸಾಮ್ರಾಜ್ಯವಾದಿ ವಿರೋಧಿ ಹೋರಾಟದ ಪ್ರಶ್ನೆಯ ಭಾಗವಾಗಿ ಭಾಷಾವಾರು ರಾಜ್ಯಗಳಾಗಬೇಕೆಂಬ ಬೇಡಿಕೆಯು ಭಾರತದಲ್ಲಿ ರೂಪುಗೊಂಡಿದೆ. ಇದು ಪ್ರಜಾಪ್ರಭುತ್ವದ ಬೆಳವಣಿಗೆಯ ಭಾಗವೂ ಹೌದು. ಈ ಬೆಳವಣಿಗೆಯು ಮತ್ತಷ್ಟು ಗಟ್ಟಿಗೊಳ್ಳಬೇಕಾಗಿದೆ. ಆದರೆ ಕೇವಲ 50 ವರ್ಷಗಳಲ್ಲೇ ಒಡಕಿನ ದನಿಗಳು, ಪ್ರತ್ಯೇಕತೆಯ ಕೂಗುಗಳು ವ್ಯಾಪಿಸುತ್ತಿರುವುದು ಮಾತ್ರ ಪ್ರಜಾಪ್ರಭುತ್ವದ ಬೆಳವಣಿಗೆಯ ಹಾದಿಯಲ್ಲಿ ಸವಾಲುಗಳಾಗಿವೆ.

ಭಾಷಾ ರಾಷ್ಟ್ರೀಯತೆಯ ಬೆಳವಣಿಗೆ

ಕನ್ನಡ ಭಾಷೆ ಹುಟ್ಟಿ ಸುಮಾರು 2 ಸಾವಿರ ವರ್ಷಗಳೇ ಕಳೆದಿವೆ. ಆದರೆ ಕನ್ನಡ ಮಾತನಾಡುವವರೆಲ್ಲಾ ಒಂದೇ ಆಡಳಿತಕ್ಕೊಳಪಡಬೇಕೆಂಬ ಏಕೀಕರಣದ ಘೋಷಣೆ 20ನೇ ಶತಮಾನದಲ್ಲೇ ಹುಟ್ಟಿದ್ದು. ಇದಕ್ಕೆ ಮೊದಲು ಕನ್ನಡನಾಡು ಒಂದಾಗಬೇಕು ಎಂದಾಗಲೀ, ಕನ್ನಡಿಗರೆಲ್ಲಾ ಒಂದೇ ಆಡಳಿತದಡಿ ಬರಬೇಕೆಂದಾಗಲಿ ಘೋಷಣೆ ಹುಟ್ಟಲಿಲ್ಲ.

ಇಂತಹ ಒಂದು ಪ್ರಕ್ರಿಯೆಯ ಬಗ್ಗೆ ಲೆನಿನ್‌ರವರು ಹೀಗೆ ವಿವರಿಸಿದ್ದಾರೆ.

"ಜಗತ್ತಿನೆಲ್ಲೆಡೆಯಲ್ಲಿಯೂ ಬಂಡವಾಳಶಾಹಿ ವ್ಯವಸ್ಥೆಯು ಪಾಳೇಗಾರಿ ವ್ಯವಸ್ಥೆಯ ಮೇಲೆ ತನ್ನ ಅಂತಿಮ ವಿಜಯವನ್ನು ಸಾಧಿಸಿದ ಅವಧಿ ಭಾಷಾಜನಾಂಗಗಳ ಆಂದೋಲನಗಳೊಂದಿಗೆ ಬೆಸೆಯಲ್ಪಟ್ಟಿದೆ. ಸರಕು ಉತ್ಪಾದನೆ ಮತ್ತು ವ್ಯಾಪಾರ ಪೂರ್ಣ ವಿಜಯವನ್ನು ಸಾಧಿಸಬೇಕಾದರೆ ಬಂಡವಾಳಶಾಹಿ ವರ್ಗ ಆಂತರಿಕ ಮಾರುಕಟ್ಟೆಯನ್ನು ಕೈವಶ ಮಾಡಿಕೊಳ್ಳಬೇಕು. ದೇಶೀಯ ಭಾಷಾ ಜನಾಂಗಗಳ ಚಳುವಳಿಗಳ ಆರ್ಥಿಕ ತಳಹದಿ ಇಲ್ಲಿದೆ. ಮನುಷ್ಯ ಮನುಷ್ಯರ ನಡುವಿನ ವ್ಯವಹಾರದಲ್ಲಿ ಭಾಷೆ ಅತ್ಯಂತ ಮಹತ್ವದ ಸಾಧನ. ಈ ಭಾಷೆಯ ಅಭಿವೃದ್ಧಿಗೆ, ಸಾಹಿತ್ಯದ ಬೆಳವಣಿಗೆಗೆ ಇರುವ ಎಲ್ಲಾ ಅಡ್ಡಿ ಆತಂಕಗಳೂ ನಿವಾರಿಸಲ್ಪಡಬೇಕು.

ಆಧುನಿಕ ಉತ್ಪಾದನಾ ವ್ಯವಸ್ಥೆಯ ಪ್ರಮಾಣಕ್ಕೆ ಸರಿಯಾದಷ್ಟು ಮುಕ್ತ ವಾಣಿಜ್ಯಕ್ಕೆ ವಿವಿಧ ವರ್ಗಗಳಿಗೆ ಸೇರಿದ ಜನತೆಯನ್ನು ಒಂದು ವಿಶಾಲವಾದ ಪ್ರದೇಶಗಳಲ್ಲಿ ಒಗ್ಗೂಡಿಸುವುದಕ್ಕೆ, ಮಾರುಕಟ್ಟೆ ಮತ್ತು ಸಣ್ಣ/ದೊಡ್ಡ ಮಾಲೀಕರ ನಡುವೆ, ಕೊಳ್ಳುವವರ ಮತ್ತು ಮಾರುವವರ ನಡುವೆ ನಿಕಟ ಸಂಬಂಧವೇರ್ಪಡಿಸುವುದಕ್ಕೆ ಭಾಷೆಯು ಅನಿರ್ಬಂಧಿತವಾದ ಬೆಳವಣಿಗೆ ಹಾಗೂ ಐಕ್ಯತೆ ಇಲ್ಲದೆ ಸಾಧ್ಯವಿಲ್ಲ."

ಹೀಗೆ, ಸ್ವಾತಂತ್ರ್ಯೋತ್ತರ ಭಾರತದ ಒಂದು ಮಹತ್ತರ ಬೆಳವಣಿಗೆಯಾಗಿ ಮೂಡಿ ಬಂದ ರಾಜ್ಯಗಳ ಪುನರ್ ವಿಂಗಡಣೆ ಮತ್ತು ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸುವ ಘಟನೆಯು ಬಹುಮುಖ್ಯವಾದ ಪ್ರಜಾಸತ್ತಾತ್ಮಕ ಬೆಳವಣಿಗೆಯಾಗಿದೆ. ಇಂತಹ ಘಟನೆಯು ತಂತಾನೆ ಸಂಭವಿಸಿದ್ದಲ್ಲ. ಕಾಂ। ಜಿ.ಎನ್. ನಾಗರಾಜ್‌ರವರು ವಿವರಿಸುವಂತೆ "ಕರ್ನಾಟಕವು ಪಾಳೆಯಗಾರಿ ಸಮಾಜದ ಬಸಿರಲ್ಲಿ ಇನ್ನೂ ಇರುವಾಗಲೇ ಇಲ್ಲಿ ಬ್ರಿಟಿಷರ ಸಂಪರ್ಕದೊಡನೆ ಹುಟ್ಟಿದ ಬಂಡವಾಳಶಾಹಿಯು ಅಗತ್ಯಗಳಿಗೆ ಅನುಗುಣವಾಗಿ ಕನ್ನಡ ಮಾತನಾಡುವವರೆಲ್ಲರೂ ಒಂದೇ ರಾಜಕೀಯ ಆಡಳಿತದಲ್ಲಿರಬೇಕೆಂಬ ಕೂಗು ಸಣ್ಣದಾಗಿ ಹುಟ್ಟಿ ಬರಬರುತ್ತಾ ಬೆಳವಣಿಗೆ, ಶಿಕ್ಷಣದ ಪ್ರಗತಿ, ಸಾಹಿತ್ಯದ ನವೋದಯ, ಹಲವು ಹಂತಗಳಲ್ಲಿ ಒಂದರ ಹಿಂದೆ ಒಂದು ಹೆಜ್ಜೆಯಿಟ್ಟು, ಒಂದು ಮತ್ತೊಂದಕ್ಕೆ ಕಾರಣವಾಗಿ ಕೊನೆಯಲ್ಲಿ ಕರ್ನಾಟಕ ಏಕೀಕರಣದ ಕೂಗಿಗೆ ಕಾರಣವಾದವು".

"ಕರ್ನಾಟಕವು ಪಾಳೆಯಗಾರಿ ಸಮಾಜದ ಬಸಿರಲ್ಲಿ ಇನ್ನೂ ಇರುವಾಗಲೇ ಇಲ್ಲಿ ಬ್ರಿಟಿಷರ ಸಂಪರ್ಕದೊಡನೆ ಹುಟ್ಟಿದ ಬಂಡವಾಳಶಾಹಿಯ ಅಗತ್ಯಗಳಿಗೆ ಅನುಗುಣವಾಗಿ ಕನ್ನಡ ಮಾತನಾಡುವವರೆಲ್ಲರೂ ಒಂದೇ ರಾಜಕೀಯ ಆಡಳಿತದಲ್ಲಿರಬೇಕೆಂಬ ಕೂಗು ಸಣ್ಣದಾಗಿ ಹುಟ್ಟಿ ಬರಬರುತ್ತಾ ಬೆಳವಣಿಗೆ, ಶಿಕ್ಷಣದ ಪ್ರಗತಿ, ಸಾಹಿತ್ಯದ ನವೋದಯ, ಹಲವು ಹಂತಗಳಲ್ಲಿ ಒಂದರ ಹಿಂದೆ ಒಂದು ಹೆಜ್ಜೆಯಿಟ್ಟು, ಒಂದು ಮತ್ತೊಂದಕ್ಕೆ ಕಾರಣವಾಗಿ ಕೊನೆಯಲ್ಲಿ ಕರ್ನಾಟಕ ಏಕೀಕರಣದ ಕೂಗಿಗೆ ಕಾರಣವಾದವು".

ಏಕೀಕರಣದ ದೀರ್ಘ ಪಯಣ

ಭಾರತದೆಲ್ಲೆಡೆ ಇದ್ದಂತೆ ಕರ್ನಾಟಕದ ಪ್ರದೇಶವೂ ಕೂಡಾ ಹಲವು ರಾಜರು, ಸಂಸ್ಥಾನಿಕರು ಮತ್ತು ಪಾಳೆಯಗಾರರ ನಡುವೆ ಹಂಚಿಹೋಗಿತ್ತು. ವ್ಯಾಪಾರಕ್ಕಾಗಿ ಬಂದ ಯೂರೋಪಿಯನ್ನರು ಮುಖ್ಯವಾಗಿ ಬ್ರಿಟಿಷರು ಈ ಪರಿಸ್ಥಿತಿಯ ಲಾಭ ಪಡೆದು ಹಣ ಮತ್ತು ಭೂಮಿ ಎರಡೂ ರೂಪದಲ್ಲಿ ವಿವಿಧ ಭಾಗಗಳನ್ನು ವಶಪಡಿಸಿಕೊಂಡರು. ವಾಣಿಜ್ಯ ವ್ಯವಹಾರ, ಕೈಗಾರಿಕೆ, ಕಾಫಿ ತೋಟಗಳು ಮುಂತಾದ ಕಡೆ ಬಂಡವಾಳ ಹೂಡಿಕೆ ಪ್ರಾರಂಭವಾಯಿತು. ಕನ್ನಡ ಮಾತನಾಡುವ ಜನರಲ್ಲಿ ಶಿಕ್ಷಣ ಪ್ರಸಾರಕ್ಕೆ ಪ್ರೋತ್ಸಾಹಿಸುವ ಉದ್ದೇಶದಿಂದ 1890ರಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, 1916ರಲ್ಲಿ ಕನ್ನಡಸಭಾ ಪ್ರಾರಂಭವಾದವು. ಇದೇ ಕಾಲದಲ್ಲಿ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನ ಮತ್ತು ಬಂದರಿಗೆ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಭಟ್ಕಳದಿಂದ ಜೋಗಕ್ಕೆ ರಸ್ತೆ ನಿರ್ಮಾಣ ಮಾಡಿಸಿದರು. ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಗೆ ಬಂದ ನಂತರ ನಡೆದ ಅಸಹಕಾರ ಚಳುವಳಿಗೆ ಸಾಮಾನ್ಯ ಜನರ ಬೆಂಬಲ ಬೇಕಾಗಿತ್ತು. ಆಗ ಕಾಂಗ್ರೆಸ್ ಭಾಷೆಯಾಧಾರದಲ್ಲಿ ಪ್ರಾಂತೀಯ ಸಮಿತಿಗಳನ್ನು ರಚಿಸಲು ತೀರ್ಮಾನಿಸಿತು. 1928ರಲ್ಲಿ ಮೋತಿಲಾಲ್ ನೆಹರೂ ಸಮಿತಿ ಕರ್ನಾಟಕ ಪ್ರಾಂತ ರಚನೆಗೆ ಪೂರಕವಾಗಿ ವರದಿ ನೀಡಿತು. ಹಲವಾರು ಸಭೆ, ಸಮ್ಮೇಳನಗಳು ನಡೆದವು. ಹಲವಾರು ವ್ಯಕ್ತಿಗಳು, ಸಂಘ-ಸಂಸ್ಥೆಗಳು ದುಡಿದವು. ದೇಶಕ್ಕೆ ಸ್ವಾತಂತ್ರ್ಯ ಬಂತು. ಆದರೆ ಏಕೀಕರಣದ ಕನಸು ಕೈಗೂಡಲಿಲ್ಲ. ಇದೇ ಸಂದರ್ಭದಲ್ಲಿ ಏಕೀಕರಣಕ್ಕೆ ಸಂಬಂಧಿಸಿ ಕೂಗು ದೊಡ್ಡದಾಯಿತು. 1948ರಲ್ಲಿ ಧರ್ ಆಯೋಗವನ್ನು ಸಂವಿಧಾನ ಸಮಿತಿಯು ನೇಮಿಸಿತು. ಇದು ಭಾಷಾವಾರು ರಾಜ್ಯಗಳ



ಪ್ರತ್ಯೇಕವಾದದ ಕೂಗು ಏಕೆ?

ಪ್ರತ್ಯೇಕವಾದದ ಕೂಗು ಕರ್ನಾಟಕವೂ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಎದ್ದಿದೆ. ಇವೆಲ್ಲವೂ ಒಂದೋ ಪ್ರಾದೇಶಿಕ ಅಸಮಾನತೆಯ ವಿರುದ್ಧ ಅಥವಾ ಪ್ರತ್ಯೇಕ ಸ್ಥಾನಮಾನಕ್ಕಾಗಿ ಹುಟ್ಟಿಕೊಂಡಿವೆಯೇ ಹೊರತು ಭಾಷಾ ಜನಾಂಗಗಳ ಆಧಾರದಲ್ಲಲ್ಲ. ಕಾಂ. ಬಿ.ಟಿ.ಆರ್. ರವರು ಗುರುತಿಸಿರುವ ರೀತಿಯಲ್ಲಿ ಇಂತಹ ಬೇಡಿಕೆಗಳ ನಿರ್ಮಾಣಕ್ಕೆ ಕಾರಣವಾದ ಅಂಶಗಳನ್ನು ವಿಸ್ತರಿಸಿ ಗಮನಿಸಬೇಕಾಗಿದೆ.

1. ವಿವಿಧ ಭಾಷಾ ಜನಾಂಗಗಳನ್ನು ಪ್ರತಿನಿಧಿಸುವ 18 ಭಾಷೆಗಳನ್ನು ಸಂವಿಧಾನದಲ್ಲಿ ಒಪ್ಪಲಾಗಿದೆ. ಇವೆಲ್ಲವೂ ತಮ್ಮ ಭಾಷೆಯ ಬೆಳವಣಿಗೆಯನ್ನು ಬಯಸುತ್ತವೆ. ಈ ಎಲ್ಲಾ ಭಾಷೆಗಳಿಗೂ ಸಮಾನವಾದ ಅವಕಾಶವಿಲ್ಲದಿರುವುದು ಮತ್ತು ಅಧಿಕೃತ ಭಾಷೆಯ ನೆಪದಲ್ಲಿ ಒಂದು ಭಾಷೆಯನ್ನು ಹೇರುವುದು ಭಾರತದ ಐಕ್ಯತೆಗೆ ಈಗಾಗಲೇ ಧಕ್ಕೆ ಮಾಡಿವೆ. ಹಿಂದಿಗೆ ವಿಶೇಷ ಅಧಿಕೃತ ಭಾಷಾ ಸ್ಥಾನಮಾನ ಇರಬೇಕೆನ್ನುವವರು ಇಂಗ್ಲೀಷ್‌ಗೆ ಅವಕಾಶ ಮಾಡಿಕೊಡಲು ಸಿದ್ಧರಾಗಿದ್ದಾರೆ. ಮತ್ತು ಹಿಂದಿಯ ವಿರೋಧಿಗಳೂ ಕೂಡಾ ತಾವು ಪ್ರತಿನಿಧಿಸುವ ಜನಗಳ ಭಾಷೆಗಳಿಗೆ ಸಮಾನ ಸ್ಥಾನಮಾನ ಬೇಕೆನ್ನುವ ಬದಲಿಗೆ ಇಂಗ್ಲೀಷ್‌ಗೆ ಸಮಾನ ಸ್ಥಾನಮಾನ ಒಪ್ಪಿದ್ದಾರೆ ಮತ್ತು ತಮ್ಮ ಭಾಷೆಗಳಿಗೆ ವಂಚನೆ ಮಾಡಿದ್ದಾರೆ. ಈಗಂತೂ ಉದಾರೀಕರಣ, ಖಾಸಗೀಕರಣದ ಪಠನೆಯ ಕಾಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದುವರೆಗೂ ಅನುಸರಿಸಿದ ಮತ್ತು ಈಗ ಅನುಸರಿಸುತ್ತಿರುವ ನೀತಿಗಳಿಂದಾಗಿ ಇಂಗ್ಲೀಷ್ ಓದಿದರೆ ಮಾತ್ರ ಬದುಕು ಎಂಬ ವಾತಾವರಣ, ಶ್ರೀಮಂತ ಮೇಲ್ವರ್ಗದ ಕನ್ನಡಿಗರಿಗೆ ಇದೊಂದು ಬಹುಮುಖ್ಯ ಸಮಸ್ಯೆಯಾಗಿರಲಾರದು. ಆದರೆ ಶಿಕ್ಷಣದ ವ್ಯಾಪಾರವನ್ನು ಎಂದೂ ಸಮರ್ಥಿಸಲಾರದ ಕೋಟ್ಯಂತರ ಸಾಮಾನ್ಯ ಕನ್ನಡಿಗರು ಇಂತಹ ವಾತಾವರಣವನ್ನು ಎದುರಿಸಲಾರರು. ಶಿಕ್ಷಣ ಮತ್ತು ಉದ್ಯೋಗದಲ್ಲಿ ಅವಕಾಶಗಳೇ ಇಲ್ಲ ಎನ್ನುವುದರಿಂದ ಅಭದ್ರತೆ ಮತ್ತು ಪರಕೀಯತೆ ಉಂಟಾಗುತ್ತಿದೆ. ಇಂತಹ ಸ್ಥಿತಿಯನ್ನು ಭಾಷಾಂಧರು ಮತ್ತು ಪ್ರತ್ಯೇಕವಾದಿಗಳು ಬಳಸುತ್ತಿದ್ದಾರೆ.

ಬ್ರಿಟಿಷ್ ಕರ್ನಾಟಕ ಮತ್ತು ಸಂಸ್ಥಾನಗಳು



2. ಈಗಿರುವ ಕೇಂದ್ರ-ರಾಜ್ಯಗಳ ಸಂಬಂಧವು ರಾಜ್ಯಗಳ ವಿಸ್ತೃತ ಪ್ರಜಾಪ್ರಭುತ್ವ ಅಥವಾ ಆರ್ಥಿಕ ಸ್ವಾತಂತ್ರ್ಯದ ಮೇಲೆ ನಿಂತಿಲ್ಲ. ರಾಜ್ಯಗಳು ಕೇಂದ್ರಕ್ಕೆ ಸಂಪೂರ್ಣ ವಿಧೇಯರಾಗಿರುವ ಅಂಶದ ಮೇಲೆ ನಿಂತಿದೆ. ಸಂವಿಧಾನವು ಹೆಸರಿಗೆ ಒಕ್ಕೂಟವಾಗಿದೆ, ವಾಸ್ತವದಲ್ಲಿ ಕೇಂದ್ರೀಕೃತವಾಗಿದೆ. ರಾಜ್ಯಗಳು ಪಡೆಯುವ ಸಾರ್ವಜನಿಕ ಸಾಲ, ಬ್ಯಾಂಕಿಂಗ್ ಸಾಲ ಎಲ್ಲದರಲ್ಲೂ ಕೇಂದ್ರ ಅಧಿಪತ್ಯ ಹೊಂದಿದೆ. ರಾಜ್ಯಗಳ ತೆರಿಗೆಯ ಸಿಂಹಪಾಲು ಕೇಂದ್ರಕ್ಕೆ ಹೋಗುತ್ತದೆ. ರಾಜ್ಯಗಳ ಯೋಜನೆಯನ್ನು ಕೇಂದ್ರದ ಯೋಜನೆ ರೂಪಿಸುವ ಏಕಸ್ವಾಮ್ಯ ಕಂಪನಿಗಳ ಅನುಕೂಲಕ್ಕೆ ತಕ್ಕಂತೆ ತೀರ್ಮಾನಿಸಲಾಗುತ್ತದೆ. ಕೇಂದ್ರ ಮತ್ತು ರಾಜ್ಯಗಳು ಸಮಾನತೆಯ ಆಧಾರದಲ್ಲಿ ಪಾಲುದಾರರಾಗದಿರುವುದರಿಂದ ಎಲ್ಲಾ ರಾಜ್ಯಗಳ ಸಮಾನ ಅಭಿವೃದ್ಧಿ ಸಾಧ್ಯವಾಗಿಲ್ಲ. ಕೇಂದ್ರದಲ್ಲಿ ಅಧಿಕಾರ ಕೇಂದ್ರೀಕರಣಗೊಂಡಿರುವ ರೀತಿಯಲ್ಲೇ ರಾಜ್ಯಗಳೊಳಗೆ ರಾಜ್ಯ ಸರ್ಕಾರ ಮತ್ತು ವಿವಿಧ ಜಿಲ್ಲೆಗಳ ನಡುವೆ ಸಮಾನತೆಯ ಆಧಾರದಲ್ಲಿ ರಾಜಕೀಯ ಮತ್ತು ಆರ್ಥಿಕ ಸಮಾನ ಪಾಲುದಾರಿಕೆಯಿಲ್ಲದೆ ಪ್ರಾದೇಶಿಕ ಅಸಮತೋಲನಗಳು ಹೆಚ್ಚುತ್ತಿವೆ.


3. ಆರ್ಥಿಕ ಬೆಳವಣಿಗೆ ಎಂಬುದು ಬ್ರಿಟಿಷ್ ಆಡಳಿತದಲ್ಲಿ ಕೆಲವು ಪ್ರಾಂತ್ಯಗಳ ಕೆಲವು ನಗರಗಳಿಗೆ ಸೀಮಿತವಾಗಿತ್ತು. ಸ್ವಾತಂತ್ರ್ಯಾನಂತರವೂ ನಮ್ಮ ಸರ್ಕಾರಗಳು ಅನುಸರಿಸಿದ ಪಥದಿಂದ ಅಸಮಾನ ಬೆಳವಣಿಗೆ ಮುಂದುವರಿದಿದೆ. ಅಖಿಲಭಾರತ ಮಟ್ಟದಲ್ಲಿ ಒಂದು ಭಾಷಾ ಜನಾಂಗವನ್ನು ಮತ್ತೊಂದು ಭಾಷಾ ಜನಾಂಗದ ವಿರುದ್ಧ ಎತ್ತಿಕಟ್ಟಲು ಇದು ಸುಲಭ ಅಸ್ತ್ರವಾಗಿದೆ. ಆದರೆ ಇದು ಒಂದೇ ಭಾಷಾ ಜನಾಂಗದ ನಡುವೆ ಅಸಮಾನ ಬೆಳವಣಿಗೆಯ ಪ್ರಶ್ನೆ ಬಂದಾಗ ಪ್ರತ್ಯೇಕತೆಯ ಕೂಗಾಗಿ ಮಾರ್ಪಾಟಾಗುತ್ತದೆ. ಕರ್ನಾಟಕದಲ್ಲಿ ಇಂತಹುದೇ ಪರಿಸ್ಥಿತಿ ಬಂದಿದೆ.

ರಚನೆಯನ್ನು ತಳ್ಳಿಹಾಕಿತು. ನಂತರ ತೀವ್ರಗೊಂಡ ಚಳುವಳಿಯನ್ನು ಸಮಾಧಾನ ಮಾಡಲು ಜೆ.ವಿ.ಪಿ. ಸಮಿತಿಯನ್ನು ರಚಿಸಲಾಯ್ತು. ಆದರೆ ಇದೂ ಕೂಡಾ ಕನ್ನಡಿಗರಿಗೆ ನಿರಾಸೆಯನ್ನೇ ತಂದಿತು. ಆಂಧ್ರದಲ್ಲಿ ಪೊಟ್ಟಿ ಶ್ರೀರಾಮುಲು ಉಪವಾಸ ಮಾಡಿ ಹುತಾತ್ಮರಾದ ನಂತರ ಆಂಧ್ರ ರಾಜ್ಯ ರಚನೆಗೆ ಸರ್ಕಾರ ಮುಂದಾಯಿತು. ಇದೇ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕೆ.ಪಿ.ಸಿ.ಸಿ. ಸಭೆಗೆ ಮುತ್ತಿಗೆ ಹಾಕಲಾಯ್ತು. ಗೋಲೀಬಾರ್ ನಡೆಯಿತು. ಏಕೀಕರಣ ಹೋರಾಟವು ಜನಚಳುವಳಿ ರೂಪ ಪಡೆಯಿತು. ಏಕೀಕರಣದ ಪರವೆಂದು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮುಖಂಡರು ಮತ್ತು ಜನತೆ ಮುಖಾಮುಖಿಯಾದರು. ಆಂಧ್ರ ಪ್ರಾಂತ ರಚನೆಯ ನಿರ್ಧಾರ, ಕರ್ನಾಟಕ ರಾಜ್ಯ ರಚನೆಯ ವಿಳಂಬ, ಎರಡು ಕರ್ನಾಟಕ ಸ್ಥಾಪನೆಗೆ ಹುನ್ನಾರ, ನಾಯಕರ ಮತ್ತು ಸರ್ಕಾರದ ವಿಳಂಬ ಧೋರಣೆ, ಹುಬ್ಬಳ್ಳಿ ಗೋಲೀಬಾರ್ ಇತ್ಯಾದಿಗಳಿಂದ ಪ್ರೇರಿತರಾಗಿ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳವರು ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು(ಅಕರಾನಿ) ಸ್ಥಾಪಿಸಿದರು. ಇದು ನಿರಂತರ ಹೋರಾಟಗಳನ್ನು ನಡೆಸಿತು. ಇಂತಹದೊಂದು ಹೋರಾಟದ ದೀರ್ಘ ಪಯಣದಲ್ಲಿ ನವೆಂಬರ್ 1,1956ರಲ್ಲಿ ಮೈಸೂರು ರಾಜ್ಯ ಉದಯವಾಯಿತು.

ಆದರೆ ರಾಜ್ಯ ಪುನರ್‌ವಿಂಗಡಣೆಯಲ್ಲಿ ಹಳ್ಳಿಯನ್ನು ಒಂದು ಘಟಕವಾಗಿ ಪರಿಗಣಿಸುವುದರ ಬದಲಿಗೆ ತಾಲ್ಲೂಕನ್ನು ಘಟಕವಾಗಿ ಪರಿಗಣಿಸಿದ್ದರಿಂದ ವಿವಾದಕ್ಕೆ ಕಾರಣವಾದ ಹಲವಾರು ಗಡಿ ಪ್ರದೇಶಗಳು ಏಕೀಕರಣದ ಭಾಗವಾಗಲಿಲ್ಲ.

ಭಾಷಾವಾರು ರಾಜ್ಯಗಳ ರಚನೆಯ ವಿಷಯದಲ್ಲಿ ಗಮನಿಸಬೇಕಾದ ಒಂದಂಶ ಏನೆಂದರೆ ನಮ್ಮ ದೇಶದ ಕಾಂಗ್ರೆಸ್‌ನ ನಿಲುವು. ಸ್ವಾತಂತ್ರ್ಯ ಬರುವವರೆಗೂ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಜನಗಳ ಬೆಂಬಲ ಅಗತ್ಯವಾಗಿದ್ದಾಗ ಭಾಷಾ ಪ್ರಾಂತ್ಯಗಳಿಗೆ ಕಾಂಗ್ರೆಸ್ ಬೆಂಬಲ ಸೂಚಿಸಿತು. ಸ್ವಾತಂತ್ರ್ಯಗಳಿಸಿ ಅಧಿಕಾರ ಹಿಡಿದಾಗ ವಿರೋಧಿಸಿತು. ಕಾಂಗ್ರೆಸ್ ಈ ರೀತಿ ಮಾಡಿದ್ದೇಕೆ?

ಗಳಿಗೆಗೊಂದು ಮಾತುಗಳು....



"ನಮ್ಮ ರಾಜಕಾರಣಿಗಳು ಗಳಿಗೆಗೊಂದು ತೆರನಾಗಿ ಮಾತನಾಡುತ್ತಿದ್ದಾರೆ. ಕನ್ನಡ ಏಕೀಕರಣ ವಿಚಾರ ಬಂದಾಗಲೆಲ್ಲಾ 'ಆಡಳಿತೆಯ ಸೌಕರ್ಯ'ದ ಮಾತು ಹೇಳುತ್ತಾರೆ. 'ಹಣ ಕಾಸಿನ ಭಯ' ತೋರಿಸುತ್ತಾರೆ. ಜಾತಿಕೋಮುಗಳ ಭೂತ ದೆವ್ವಗಳನ್ನು ಎತ್ತಿ ಹಿಡಿಯುತ್ತಾರೆ. ಎರಡು ಕನ್ನಡ ನಾಡಾಗಲಿ ಎನ್ನುವ ಪ್ರಭೃತಿಗಳುಂಟು ಈ ದೇಶದಲ್ಲಿ. 'ಮಂತ್ರಿ'ಗಳಾಗುವ ಹೆಬ್ಬಯಕೆಯೊಂದೇ ರಾಜಕೀಯದಲ್ಲಿ ತಾಂಡವವಾಡುವಂತಿದ್ದರೆ, ಎರಡಲ್ಲ, ಮಂತ್ರಿ ಪದಾಕಾಂಕ್ಷಿಗಳಿಗೆ ಸಮನಾದ ಸಂಖ್ಯೆಯಲ್ಲಿ ಬಹುಖಂಡ ಕರ್ನಾಟಕವಾಗಬೇಕಾದೀತು".

ದಿ. ಡಾ| ಶಿವರಾಮ ಕಾರಂತರು.

ಅಧ್ಯಕ್ಷರು, ಸಾಹಿತ್ಯ ಸಮ್ಮೇಳನ, ಮೈಸೂರು. 1955.

ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಹೇಳುವುದಾದರೆ, ಭಾಷಾವಾರು ಪ್ರಾಂತಗಳಿಂದ, ಒಂದು ಭಾಷೆಯನ್ನು ಮಾತನಾಡುವ ಪ್ರದೇಶದಲ್ಲಿರುವ ಬಂಡವಾಳದಾರರಿಗೆ ತಮ್ಮ ಮಾರುಕಟ್ಟೆಯನ್ನು ವಿಸ್ತರಿಸುವುದಕ್ಕೆ ಅಂದರೆ ತಮ್ಮ ವಸ್ತುಗಳನ್ನು ಮಾರುವುದಕ್ಕೆ ಅನುಕೂಲವಾಗುತ್ತದೆ. ಆದರೆ ಬಹುಭಾಷಾ ಜನಾಂಗಗಳಿರುವ ಭಾರತದ ಮೇಲೆ ಪೂರ್ಣ ತಮ್ಮ ಹಿಡಿತವಿರಬೇಕು ಮತ್ತು ಭಾರತದೆಲ್ಲೆಡೆ ತಮ್ಮ ಉತ್ಪನ್ನಗಳೇ ಮಾರಾಟವಾಗಬೇಕು, ಯಾರಿಂದಲೂ ಪೈಪೋಟಿ ಇರಬಾರದೆಂದು ಬಯಸುವ ಏಕಸ್ವಾಮ್ಯ ಬಂಡವಾಳದಾರರಿಗೆ ಭಾಷಾವಾರು ಪ್ರಾಂತಗಳಿಂದ ಹಾನಿಯಾಗುತ್ತದೆ ಎಂಬುದು. ಕಾಂಗ್ರೆಸ್‌ನ ಈ ವಿರುದ್ಧಾತ್ಮಕ ನಿಲುವುಗಳಿಗೆ ಕಾರಣವಾಗಿದೆ.

ಇದೇನಿದ್ದರೂ ಜನರ ಆಕಾಂಕ್ಷೆಗಳಿಗೆ ಕಾಂಗ್ರೆಸ್ ಅಂತಿಮವಾಗಿ ಮಣಿಯಬೇಕಾಯ್ತು. ಆದರೆ ಈ ರೀತಿ ಭಾಷಾವಾರು ರಾಜ್ಯಗಳನ್ನು ರಚಿಸಲೇಬೇಕೆಂದಾಗ ದೇಶದ ಅತಿ ಶ್ರೀಮಂತ ವರ್ಗಗಳಿಗೆ ಅನುಕೂಲವಾಗುವ ರೀತಿಯಲ್ಲಿ ದೇಶದ ಆರ್ಥಿಕ ಬೆಳವಣಿಗೆ, ಕೇಂದ್ರ ರಾಜ್ಯಗಳ ಸಂಬಂಧ, ಭಾಷಾ ನೀತಿ ಮುಂತಾದವುಗಳನ್ನು ರೂಪಿಸಿದರು. ಇಂತಹ ದೋಷಪೂರಿತ, ಅತಿ ಕೇಂದ್ರೀಕೃತ ನೀತಿಗಳು ಇಂದು ಭಾಷಾವಾರು ರಾಜ್ಯಗಳ ಬುಡಗಳನ್ನೇ ಅಲುಗಾಡಿಸುತ್ತಿವೆ.

ಕರ್ನಾಟಕದ ಒಟ್ಟು ಕೈಗಾರಿಕಾ ಬೆಳವಣಿಗೆಯನ್ನು ಗಮನಿಸಿದರೆ ರಾಜ್ಯದ ಶೇ. 30ಕ್ಕೂ ಹೆಚ್ಚು ಹಾಗೂ ಕಾರ್ಮಿಕರಲ್ಲಿ ರಾಜ್ಯದ ಶೇ. 40ಕ್ಕೂ ಹೆಚ್ಚು ಬೆಂಗಳೂರಿನಲ್ಲೇ ಕೇಂದ್ರೀಕರಣವಾಗಿದೆ. ರಾಜ್ಯದ ಒಟ್ಟು ಕೈಗಾರಿಕಾ ಬಂಡವಾಳದ

1956 ರಲ್ಲಿ ಏಕೀಕೃತ ರಾಜ್ಯದಲ್ಲಿ ವಿಲೀನಗೊಂಡ ಪ್ರದೇಶಗಳು

ಪ್ರದೇಶ	ಜಿಲ್ಲೆಗಳು	ವಿಸ್ತೀರ್ಣ ಚ.ಕಿ.ಮೀ.	ಜನಸಂಖ್ಯೆ 1957 ರ ಜನಗಣತಿ (ಲಕ್ಷಗಳಲ್ಲಿ)
ಮೈಸೂರು ಸಂಸ್ಥಾನ (ಬಳ್ಳಾರಿ ಜಿಲ್ಲೆ ಸೇರಿ)	9	86273	98.48
ಮುಂಬಯಿ ಪ್ರಾಂತ	4	54464	51.35
ಹೈದರಾಬಾದ್ ಸಂಸ್ಥಾನ	3	35687	27.18
ಮದ್ರಾಸ್ ಪ್ರಾಂತ	2	11223	14.70
ಕೊಡಗು	1	4110	2.29

ಇವಲ್ಲದೆ ಜಮಖಂಡಿ, ಮುಧೋಳ, ರಾಮದುರ್ಗ, ಜತ್ತ, ಸರ್ವಬಾರು, ಸೊಂಡೂರು, ಕುರಂದವಾಡ(ಹಿರಿ), ಕುರಂದವಾಡ(ಕಿರಿ), ಆನೇಗುಂದಿ ಮೊದಲಾದ ಸಣ್ಣಪುಟ್ಟ ಸಂಸ್ಥಾನಗಳು.

ಸುಮಾರು ಶೇ. 55 ರಷ್ಟು ಬೆಂಗಳೂರಿನಲ್ಲಿದೆ. ಒಟ್ಟು ಕೈಗಾರಿಕಾ ವಿದ್ಯುತ್ ಬಳಕೆಯ ಶೇ. 75ರಷ್ಟು ಬೆಂಗಳೂರೇ ಬಳಸುತ್ತದೆ. ಇಂತಹ ಬೆಳವಣಿಗೆಗೆ ಹಳೆ ಮೈಸೂರು ಸಂಸ್ಥಾನದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ಕಾರಣವಾಗಿದ್ದರೂ, ಏಕೀಕರಣದ ನಂತರದ ವಿವಿಧ ಸರ್ಕಾರಗಳ ನೀತಿಗಳು ಇಷ್ಟೊಂದು ವ್ಯತ್ಯಾಸವನ್ನು ಸೃಷ್ಟಿಸಿವೆ.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಎರಡು ಭಿನ್ನ ಧ್ರುವಗಳಾಗಿರುವ ದಕ್ಷಿಣ ಕನ್ನಡ ಮತ್ತು ಗುಲ್ಬರ್ಗ ಜಿಲ್ಲೆಗಳನ್ನೇ ಗಮನಿಸಿ. ದ.ಕ.ದಲ್ಲಿ ಸಾಕ್ಷರತೆ ಶೇ. 85 ಇದ್ದರೆ, ಗುಲ್ಬರ್ಗದಲ್ಲಿ ಶೇ. 44.5, ದ.ಕ.ದಲ್ಲಿ ಬಡತನ ರೇಖೆಗಿಂತ ಕೆಳಗಿರುವವರು ಶೇ. 8.91 ಇದ್ದರೆ ಗುಲ್ಬರ್ಗದಲ್ಲಿ ಶೇ. 45.54, ದ.ಕ.ದಲ್ಲಿ ದಿನಪತ್ರಿಕೆ ಓದುವವರು ಸುಮಾರು 1.2 ಲಕ್ಷ ಇದ್ದರೆ ಗುಲ್ಬರ್ಗದಲ್ಲಿ 15 ಸಾವಿರ ಮಾತ್ರ. ಇಷ್ಟೊಂದು ವ್ಯತ್ಯಾಸ ಏಕೆ? ಕರ್ನಾಟಕದಲ್ಲಿ ಭೂಸುಧಾರಣೆಯ ಕಾನೂನು ಬಂದು ಗೇಣಿದಾರರು ಅರ್ಜಿಗಳನ್ನು ಹಾಕಿದರು. ದಕ್ಷಿಣ ಕನ್ನಡದಲ್ಲಿ 83935 ಅರ್ಜಿಗಳನ್ನು ಪುರಸ್ಕರಿಸಿದರೆ ಗುಲ್ಬರ್ಗದಲ್ಲಿ 5816 ಅರ್ಜಿಗಳನ್ನು ಮಾತ್ರ ಪುರಸ್ಕರಿಸಿ ಗೇಣಿದಾರರ ಪರವಾಗಿ ತೀರ್ಪು ನೀಡಲಾಯ್ತು. ದ.ಕ.ದಲ್ಲೋ ಅಥವಾ ಸ್ವಲ್ಪಮಟ್ಟಿಗೆ ಹಳೆ ಮೈಸೂರು ಭಾಗದಲ್ಲೊ ಆದಂತೆ ಗುಲ್ಬರ್ಗ ಮತ್ತು ಬಹುತೇಕ ಉತ್ತರಕರ್ನಾಟಕದ ಭಾಗದಲ್ಲಿ ಭೂಸುಧಾರಣೆಗಳು ಆಗಲಿಲ್ಲ ಎಂಬುದು ಸ್ಪಷ್ಟವಾಗಿದೆ. ಇದು ಅನಭಿವೃದ್ಧಿ ಮತ್ತು ಅಸಮತೋಲನವನ್ನು ಹೆಚ್ಚಿಸಲಿಕ್ಕೆ ಮೂಲ ಕಾರಣಗಳಲ್ಲೊಂದಾಗಿದೆ. ಆಶ್ಚರ್ಯವೆಂದರೆ ಸರ್ಕಾರವಾಗಲೀ, ಅಸಮಾನತೆಯಿದೆ ಎಂದು ವಾದಿಸುವರಾಗಲೀ ಇದರ ಬಗ್ಗೆ ಪ್ರಸ್ತಾಪಿಸದಿರುವುದು.


ಐಕ್ಯತೆಯ ಆಧಾರದಲ್ಲಿ ಅಭಿವೃದ್ಧಿಯ ಹೋರಾಟಗಳು ನಡೆಯುವಂತಾಗಬೇಕು. ಆಗ ಯಾಂತ್ರಿಕವಾದ, ಅಸಂಬದ್ಧವಾದ, ವೈಭವೀಕರಣಗಳಿಗೆ ಬದಲಾದಂತಹ ರಾಜ್ಯೋತ್ಸವಕ್ಕೊಂದು ಅರ್ಥ ಬರುತ್ತದೆ.

ಪ್ರತ್ಯೇಕತಾವಾದ ಸಮಸ್ಯೆಗೆ ಪರಿಹಾರವಲ್ಲ

ಇಂತಹ ಪರಿಸ್ಥಿತಿಯಲ್ಲಿ ಈಗಿರುವ ದೊಡ್ಡ ಭಾಷಾವಾರು ರಾಜ್ಯಗಳನ್ನು ಪ್ರತ್ಯೇಕ ಸಣ್ಣ ರಾಜ್ಯಗಳನ್ನಾಗಿ ಮಾಡಿದರೆ ಪ್ರತ್ಯೇಕತೆಯ ಹಿಂದಿರುವ ಸಮಸ್ಯೆಗಳು ಪರಿಹಾರವಾಗುತ್ತದೆಯೇ? ಭಾರತದೊಳಗಿನ ವಿಭಿನ್ನ ರಾಜ್ಯಗಳ ಅನುಭವ ಈ ರೀತಿಯಲ್ಲಿಲ್ಲ. ಅನಭಿವೃದ್ಧಿ, ಅಸಮಾನತೆ, ಅತೃಪ್ತಿಯಂತಹ ಪ್ರಶ್ನೆಗಳು ಪರಿಹಾರವಾಗುವುದರ ಬದಲಿಗೆ ಮತ್ತಷ್ಟು ಬಿಗಡಾಯಿಸುತ್ತವೆ. ರಾಜ್ಯಗಳ ಗಡಿಗಳನ್ನು ಮಾತ್ರ ಬದಲಾವಣೆ ಮಾಡಿ ಈಗಿನ ಸರ್ಕಾರಗಳ ಧೋರಣೆಗಳು ಬದಲಾಗದಿದ್ದರೆ ಯಾವ ಸಮಸ್ಯೆ ಪರಿಹಾರವಾಗುತ್ತದೆ? ಹಾಗೇನಾದರೂ

ಏಕೀಕರಣ ಚಳುವಳಿ ಜನತಾ ಚಳುವಳಿಯಾದದ್ದು

ಕರ್ನಾಟಕ ಏಕೀಕರಣ ಇತಿಹಾಸದಲ್ಲಿ 19-4-1953 ಬಹುಮುಖ್ಯ ದಿನ, ಹುಬ್ಬಳ್ಳಿ ಹತ್ತಿರವಿರುವ ಅದರಗುಂಚಿಯ ಶಂಕರಗೌಡ ಪಾಟೀಲರು ಉಪವಾಸ ಕೂತು 23 ದಿನಗಳಾಗಿದ್ದವು. ಉಪವಾಸ ನಿಲ್ಲಿಸಲು ಕಾಂಗ್ರೆಸ್ ನಾಯಕರು ಏಕೀಕರಣದ ಬಗ್ಗೆ ಖಚಿತ ಭರವಸೆ ನೀಡಬೇಕಾಗಿತ್ತು. ಕಾಂಗ್ರೆಸ್ ನಾಯಕರಿಂದ ರಾಜೀನಾಮೆ ಪತ್ರಗಳನ್ನು ಪಡೆಯಬೇಕೆಂದು ಜನರು ತೀರ್ಮಾನಿಸಿದ್ದರು. ಹಳ್ಳಿಹಳ್ಳಿಗಳಿಂದ ಗಾಡಿಗಳಲ್ಲಿ ಬಂದ 25 ಸಾವಿರಕ್ಕೂ ಹೆಚ್ಚು ಜನ ಹುಬ್ಬಳ್ಳಿಯ ಗುಳಕವ್ವನ ಕಟ್ಟಿ (ಈಗಿನ ನೆಹರೂ ಮೈದಾನ)ಯಲ್ಲಿ ಜಮಾಯಿಸಿದ್ದರು. ಮೈದಾನದ ಎದುರಿನ ಪುರಭವನದಲ್ಲಿ ಕೆ.ಪಿ.ಸಿ.ಸಿ ಸಭೆ ಸೇರಿತ್ತು. ಕಾಂಗ್ರೆಸ್ ನಾಯಕರು ಆಗಮಿಸುತ್ತಿದ್ದಂತೆ ಜನರು ಧಿಕ್ಕಾರ ಕೂಗಿದರು. ನಾಯಕರ ಆಶ್ವಾಸನೆಗಳನ್ನು ಜನರು ನಂಬಲಿಲ್ಲ. ವೇದಿಕೆಗೇ ನುಗ್ಗಿದರು. ಕೆಲವು ನಾಯಕರಿಗೆ ಬಳೆ ತೊಡಿಸಿದರು. ಹರಿಶಿನ ಕುಂಕುಮ ಹಚ್ಚಿದರು. ರಾಜೀನಾಮೆ ಪತ್ರಗಳನ್ನು ಕೇಳಿದರು. ಹಿಂದಿನ ಬಾಗಿಲಿನಿಂದ ಹೋಗಲು ಕೆಲವರು ಪ್ರಯತ್ನಿಸಿದರು. ಕಾಂಗ್ರೆಸ್ ಮುಖಂಡ ಹಳ್ಳಿಕೇರಿ ಗುದ್ಲೆಪ್ಪನವರ ಜೀಪಿಗೆ ಬೆಂಕಿ ಹಚ್ಚಿದರು. ಗಲಭೆ ಹೆಚ್ಚಾಯಿತು. ಪೊಲೀಸರು ಲಾಠಿಚಾರ್ಜ್ ಮಾಡಿದರು. ಪ್ರಯೋಜನವಾಗಲಿಲ್ಲ. ನಂತರ ಗೋಲಿಬಾರ್ ನಡೆಸಿದರು. ಜನರು ಓಡಲು ಪ್ರಾರಂಭಿಸಿದಾಗ ಹಲವರನ್ನು ಬಂದಿಸಿದರು. ಅದರಲ್ಲಿ ಇಪ್ಪತ್ತು ಜನರನ್ನು ಹುಬ್ಬಳ್ಳಿ ಗೋಲಿಬಾರ್ ಹಾಗೂ ದಾಂಧಲೆಯ ಹಿನ್ನೆಲೆಯಲ್ಲಿ ಸ್ಥಾನಬದ್ಧತಾ ಶಾಸನದಲ್ಲಿ ಬಂಧಿಸಿ ಜೈಲಿಗೆ ಕಳುಹಿಸಲಾಯಿತು. ಈ ಇಪ್ಪತ್ತು ಜನರಲ್ಲಿ ಹದಿಮೂರು ಜನ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದರು. ಇದರಲ್ಲಿ ಎನ್.ಕೆ. ಉಪಾಧ್ಯಾಯ, ಎ.ಜೆ. ಮುಧೋಳ್, ಬಿ.ಎನ್. ಮುನವಳ್ಳಿ ಮೊದಲಾದವರು ಮುಖ್ಯವಾಗಿದ್ದರು. ಈ ಬಂಧಿತರ ಪರವಾಗಿ ವಾದಿಸಿದವರು ಎಸ್.ಆರ್.ಬೊಮ್ಮಾಯಿ. ನ್ಯಾಯಾಲಯದಲ್ಲಿ ವಿಚಾರಣೆ ನಡೆದಾಗ ಸರ್ಕಾರದ ಪರವಾಗಿ ಎಸ್. ನಿಜಲಿಂಗಪ್ಪನವರು, ಹಳ್ಳಿಕೇರಿ ಗುದ್ಲೆಪ್ಪನವರು ಸಾಕ್ಷಿದಾರರಾಗಿದ್ದರು. ಆಶ್ವಾಸನೆಗಳನ್ನು ಮರೆತ ಸರ್ಕಾರ ಮತ್ತು ಜನತೆ ಮುಖಾಮುಖಿಯಾದ ಸಂದರ್ಭ ಇದಾಗಿತ್ತು. ಮೂರು ವರ್ಷದ ನಂತರ ಮೊಕದ್ದಮೆ ವಜಾ ಆಯಿತು.



ಎಸ್. ಕೆ. ಉಪಾಧ್ಯಾಯ




ಎ. ಜೆ. ಮುಧೋಳ್

ಆದರೆ ಮಧ್ಯಮ ವರ್ಗವನ್ನು ಸ್ವಲ್ಪ ತೃಪ್ತಿಪಡಿಸಬಹುದಾದ ಕೆಲವು ಆಡಳಿತಾತ್ಮಕ ಉದ್ಯೋಗಗಳ ಸೃಷ್ಟಿ ಅಷ್ಟೆ. ರಾಜ್ಯಗಳು ಸಣ್ಣದಾಗುತ್ತಾ ಹೋದಂತೆಲ್ಲಾ ಇಂದಿನ ಒಕ್ಕೂಟ ವ್ಯವಸ್ಥೆಯಲ್ಲಿ ಅವು ತಮ್ಮ ಶಕ್ತಿಯನ್ನು ಮತ್ತಷ್ಟು ಕಳೆದುಕೊಳ್ಳುತ್ತವೆ. ಈಗಾಗಲೇ ರಾಜಕೀಯ ಮತ್ತು ಆರ್ಥಿಕ ಸಂಪನ್ಮೂಲಗಳ ಕೊರತೆಗಳಿಂದ ಬಳಲುತ್ತಿರುವ ರಾಜ್ಯಗಳು ಮತ್ತಷ್ಟು ದುರ್ಬಲವಾಗಿ ಕೇಂದ್ರ ಸರ್ಕಾರದ ಮುಂದೆ ಮತ್ತಷ್ಟು ಮಂಡಿಯೂರಲು ಕಾರಣವಾಗುತ್ತದಷ್ಟೆ. ಆಡಳಿತಾತ್ಮಕ ದೃಷ್ಟಿಯಿಂದ ರಾಜ್ಯಗಳನ್ನು ವಿಭಜಿಸಿ ಸಣ್ಣದಾಗಿ ಮಾಡಬೇಕೆಂದು ಬಿಜೆಪಿಯ ವಾದಿಸುತ್ತದೆ. ಇದು ಹೆಚ್ಚು ಕೇಂದ್ರೀಕೃತವಾದ ಅಧಿಕಾರಯುತ ಕೇಂದ್ರವನ್ನು ಮತ್ತು ಭಾಷಾ ರಾಷ್ಟ್ರೀಯತೆಗಳ ಸ್ಥಾನಮಾನವಿಲ್ಲದ ದುರ್ಬಲ ರಾಜ್ಯಗಳನ್ನು ಸೃಷ್ಟಿಸುವ ಸಿನಿಕತನದ ವಾದವಾಗಿದೆ. ಭಾಷಾವಾರು ರಾಜ್ಯಗಳ ರಚನೆಯ ಮೂಲಕ ಗಟ್ಟಿಗೊಂಡ ಪ್ರಜಾಪ್ರಭುತ್ವದ ಬೆಳವಣಿಗೆಯನ್ನು ಹಿಮ್ಮುಖದಲ್ಲಿ ನಡೆಸುವ ಹುನ್ನಾರ ಬಿಜೆಪಿ ವಾದದಲ್ಲಿದೆ. 'ಹಿಂದಿ, ಹಿಂದು, ಹಿಂದೂಸ್ತಾನ' ಎಂಬ ಸಂಘ ಪರಿವಾರದ ಘೋಷಣೆಗೆ ಪೂರಕವಾಗಿ ಹೆಚ್ಚು ಅಧಿಕಾರಶಾಹಿ ಕೇಂದ್ರದ ವಾದವಿದಾಗಿದೆ. ಜೊತೆಗೆ ಸಾಂಸ್ಕೃತಿಕ ಸರ್ವಾಧಿಕಾರವನ್ನು, ಭಾಷಾ ಏಕತಾನತೆಯನ್ನು ಬಯಸುವುದರಿಂದ ರಾಜ್ಯಗಳು ದುರ್ಬಲವಾಗಿರಬೇಕೆಂದು ಬಿಜೆಪಿ ಬಯಸುತ್ತದೆ.

ಜೊತೆಗೆ ಜಾಗತೀಕರಣ ನೀತಿಯಿಂದಾಗಿ ಸಡಿಲಗೊಂಡ ಆರ್ಥಿಕ ನಿಯಂತ್ರಣ ಮತ್ತು ಶಿಕ್ಷಣ, ಆರೋಗ್ಯ ಮುಂತಾದ ಚಟುವಟಿಕೆಗಳಿಂದ ಸರ್ಕಾರದ ಹಿಂತೆಗೆತ ಇವು ಪ್ರಾದೇಶಿಕ ಅಸಮತೋಲನವನ್ನು ಮತ್ತಷ್ಟು ಹೆಚ್ಚು ಮಾಡುತ್ತಿವೆ. ಜಾಗತಿಕ ಬಂಡವಾಳವನ್ನು ಎಲ್ಲೆಂದರಲ್ಲಿ ತಂದು, ಹೇಗೆಂದರೆ ಹಾಗೆ ಕೊಳ್ಳೆಹೊಡೆದು ಯಾವುದೇ ನಿಯಂತ್ರಣವಿಲ್ಲದೆ ಹಾರಿಹೋಗಲು ರಾಜ್ಯಗಳು ದುರ್ಬಲವಾಗಿರಬೇಕೆಂದು ಸಾಮ್ರಾಜ್ಯವಾದಿ ಶಕ್ತಿಗಳು ಬಯಸುತ್ತವೆ. ಅದಕ್ಕಾಗಿ ಪ್ರತ್ಯೇಕತಾವಾದವನ್ನು ಎಲ್ಲೆಡೆ ಬೆಂಬಲಿಸುತ್ತವೆ. ಕಾಶ್ಮೀರ, ಅಸ್ಸಾಂ, ಪಂಜಾಬ್ ಸೇರಿದಂತೆ ಎಲ್ಲ ಕಡೆಯ ಪ್ರತ್ಯೇಕತಾವಾದಿಗಳಿಗೆ ಈ ಶಕ್ತಿಗಳು ಸಹಾಯ ಮಾಡಿರುವುದನ್ನು ಮರೆಯುವುದು ಹೇಗೆ? ಈಶಾನ್ಯ ಭಾರತದಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳನ್ನು ಗುರುತಿಸಿ ಅವರಿಗೆ ಹಣ ಒದಗಿಸಿ ಸಣ್ಣ ಸ್ವತಂತ್ರ ರಾಜ್ಯಗಳಿಗಾಗಿ ಹೋರಾಟ ಮಾಡುವಂತೆ ಮಾಡಿದ "ಪ್ರಾಜೆಕ್ಟ್ ಬ್ರಹ್ಮಪುತ್ರ" ಎಂಬ ಅಮೇರಿಕದ ಸಿಐಎ ಪಿತೂರಿಯನ್ನು ದೇಶ ಈಗಾಗಲೇ ಅನುಭವಿಸಿದೆ. ಇಂತಹ ಮತ್ತಷ್ಟು ಪಿತೂರಿಗಳಿಗೆ ನಾವು ಬಲಿಯಾಗದಿರುವ ಎಚ್ಚರಿಕೆ ಬೇಕಾಗಿದೆ.

ಆದ್ದರಿಂದಾಗಿ ರಾಜ್ಯಗಳಿಗೆ ಹೆಚ್ಚು ರಾಜಕೀಯ ಆರ್ಥಿಕ ಅಧಿಕಾರಗಳನ್ನು ಒದಗಿಸುವಂತೆ ಕೇಂದ್ರ ರಾಜ್ಯಗಳ ಸಂಬಂಧ ಪುನರ್ ರಚನೆಯಾಗಬೇಕಾಗಿದೆ. ಅದೇ ರೀತಿ ರಾಜ್ಯದೊಳಗಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕಾಗಿದೆ. ಪಂಚಾಯತ್‌ಗಳವರೆಗೆ ಆರ್ಥಿಕ ಸಂಪನ್ಮೂಲಗಳನ್ನು ವಿಕೇಂದ್ರೀಕರಿಸಬೇಕಾಗಿದೆ. ಎಲ್ಲಾ ಭಾಷೆಗಳ ಸಮಾನತೆಯ ಆಧಾರದಲ್ಲಿ ಒಂದು ಪ್ರಜಾಸತ್ತಾತ್ಮಕ ಭಾಷಾ ನೀತಿಯನ್ನು ರೂಪಿಸಬೇಕಾಗಿದೆ. ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡಿದರೆ ಭವಿಷ್ಯವಿದೆ ಎಂಬ ವಾತಾವರಣ ನಿರ್ಮಿಸಬೇಕಾಗಿದೆ. ಜನರ ಭೌತಿಕ ಸ್ಥಿತಿಗತಿಗಳಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವಂತಹ ರೀತಿಯಲ್ಲಿ ಪಾಳೇಗಾರಿ ಭೂ ಸಂಬಂಧಗಳನ್ನು ಒಡೆದು ಹಾಕಿ ಸಮಗ್ರ ಭೂಸುಧಾರಣೆಯನ್ನು ಜಾರಿಗೆ ತರಬೇಕಾಗಿದೆ. ಹೆಚ್ಚಿನ ಲಾಭ ಮತ್ತು ಮಾರುಕಟ್ಟೆ ಹಿಡಿಯುವ ಪೈಪೋಟಿಯಲ್ಲಿ, ಅಧಿಕಾರದ ಆಸೆಯಲ್ಲಿ ವಿವಿಧ ಬಂಡವಾಳಶಾಹಿ ಮತ್ತು ಭೂಮಾಲಿಕ ಶಕ್ತಿಗಳು ಜಾತಿ, ಪ್ರದೇಶ, ಧರ್ಮದ ಆಧಾರದಲ್ಲಿ ಭಾವನಾತ್ಮಕ ಹುಚ್ಚನ್ನು ಸೃಷ್ಟಿಸಿ ಜನರನ್ನು ಪರಸ್ಪರ ಎತ್ತಿಕಟ್ಟುವ ಹುನ್ನಾರ ತಡೆಯಬೇಕಾಗಿದೆ. ಇವೆಲ್ಲವುಗಳಿಗೂ ದುಡಿಯುವ ಜನರ ಐಕ್ಯತೆಯನ್ನು ಕಾಪಾಡಬೇಕಿದೆ. ದುಡಿಯುವ ವರ್ಗದ ಭವಿಷ್ಯದ ದೃಷ್ಟಿಯಿಂದ ಪ್ರತ್ಯೇಕತಾವಾದವನ್ನು ದೂರಮಾಡಬೇಕು. ಐಕ್ಯತೆಯ ಆಧಾರದಲ್ಲಿ ಅಭಿವೃದ್ಧಿಯ ಹೋರಾಟಗಳು ನಡೆಯುವಂತಾಗಬೇಕು. ಆಗ ಯಾಂತ್ರಿಕವಾದ, ಅಸಂಬದ್ಧವಾದ, ವೈಭವೀಕರಣಗಳಿಗೆ ಬದಲಾದಂತಹ ರಾಜ್ಯೋತ್ಸವಕ್ಕೊಂದು ಅರ್ಥ ಬರುತ್ತದೆ.


ಪ್ರಬಲ ನಂಬಿಕೆ



"ಕಮ್ಯುನಿಸ್ಟ್ ಪಕ್ಷದ ವಿನಹ ಮತ್ತಾರಿಗೂ ಮೊದಲಿಗೆ ಕರ್ನಾಟಕದ ಐಕ್ಯತೆಯ ಬಗೆಗೆ ಪ್ರಬಲವಾದ ನಂಬಿಕೆ ಇರಲಿಲ್ಲ. ಕಮ್ಯುನಿಸ್ಟ್ ಪಕ್ಷವು ಬ್ರಿಟಿಷ್ ಕರ್ನಾಟಕ, ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯಗಳು ಸೇರಿ ಹಾಗೂ ಮೈಸೂರು ಸಂಸ್ಥಾನಗಳು ಸೇರಿದ ಕರ್ನಾಟಕದ ರಚನೆಗೆ ಆಸಕ್ತಿ ವಹಿಸಿತ್ತು.'


ಶ್ರೀ ನಿಟ್ಟೂರು ಶ್ರೀನಿವಾಸರಾವ್
ನಿವೃತ್ತ ಶ್ರೇಷ್ಠ ನ್ಯಾಯಮೂರ್ತಿಗಳು, ಕರ್ನಾಟಕ ರಾಜ್ಯ

ಈ ಲೇಖನದಲ್ಲಿ ಬಳಸಲಾದ ಚಿತ್ರಗಳು, ನಕಾಶೆ ಹಾಗೂ ಬಾಕ್ಸ್‌ಗಳಲ್ಲಿನ ಮಾಹಿತಿಗಳನ್ನು 'ಕರ್ನಾಟಕ ಏಕೀಕರಣ ಇತಿಹಾಸ' ಗ್ರಂಥದಿಂದ ಪಡೆಯಲಾಗಿದೆ.
ಪ್ರಕಟಣೆ: ನವಕರ್ನಾಟಕ ಪ್ರಕಾಶನ - ಬೆಂಗಳೂರು
ಸಂಪಾದನೆ-ರಚನೆ: ಡಾ|| ಎಚ್.ಎಸ್.ಗೋಪಾಲರಾವ್ ಇವರಿಗೆ ಕೃತಜ್ಞತೆಗಳು



ಇದೇನಿದ್ದರೂ ಜನರ ಆಕಾಂಕ್ಷೆಗಳಿಗೆ ಕಾಂಗ್ರೆಸ್ ಅಂತಿಮವಾಗಿ ಮಣಿಯಬೇಕಾಯ್ತು. ಆದರೆ ಈ ರೀತಿ ಭಾಷಾವಾರು ರಾಜ್ಯಗಳನ್ನು ರಚಿಸಲೇಬೇಕೆಂದಾಗ ದೇಶದ ಅತಿ ಶ್ರೀಮಂತ ವರ್ಗಗಳಿಗೆ ಅನುಕೂಲವಾಗುವ ರೀತಿಯಲ್ಲಿ ದೇಶದ ಆರ್ಥಿಕ ಬೆಳವಣಿಗೆ, ಕೇಂದ್ರ-ರಾಜ್ಯಗಳ ಸಂಬಂಧ, ಭಾಷಾ ನೀತಿ ಮುಂತಾದವುಗಳನ್ನು ರೂಪಿಸಿದರು. ಇಂತಹ ದೋಷಪೂರಿತ, ಅತಿ ಕೇಂದ್ರೀಕೃತ ನೀತಿಗಳು ಇಂದು ಭಾಷಾವಾರು ರಾಜ್ಯಗಳ ಬುಡಗಳನ್ನೇ ಅಲುಗಾಡಿಸುತ್ತಿವೆ.

— ಕೆ.ಪ್ರಕಾಶ್




ಏಕೀಕರಣ ಚಳುವಳಿ ಮತ್ತು ದುಡಿಯುವ ವರ್ಗ

ದಿ. ಎನ್.ಎಲ್.ಉಪಾಧ್ಯಾಯರ ಸಂದರ್ಶನದಿಂದ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರವೇನಿತ್ತು?

ಏಕೀಕರಣ ಚಳುವಳಿ ಹಿಂದಿನಿಂದಲೇ(30ರ ದಶಕದಿಂದಲೇ) ಆರಂಭವಾಗಿತ್ತು. ಅದಕ್ಕೆ ನಾವು ಬೆಂಬಲ ನೀಡುತ್ತಲೇ ಬಂದಿದ್ದೇವೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಇದು ಗರಿಗೆದರಿಕೊಂಡಿತು. 1952 ರ ನಂತರದ ಅವಧಿಯಲ್ಲಿ ಅದನ್ನು ಪ್ರಮುಖ ರಾಜಕೀಯ ಪ್ರಶ್ನೆಯಾಗಿ ಎತ್ತಿಕೊಂಡೆವು. ಕರ್ನಾಟಕ ಕಾಂಗ್ರೆಸ್ ಸಹ ಏಕೀಕರಣಕ್ಕೆ ಬೆಂಬಲ ನೀಡಿತ್ತು. ಆದರೆ ಕಾಂಗ್ರೆಸ್ ಪಕ್ಷದೊಳಗೆ ತನ್ನ ಕೇಂದ್ರೀಯ ನಾಯಕರ ಮೇಲೆ ಒತ್ತಡ ಹೇರಲು ಹಿಂಜರಿಯುತ್ತಿತ್ತು. ಇದಕ್ಕೆ ವಿರುದ್ಧವಾಗಿ ಕಮ್ಯುನಿಸ್ಟ್ ಪಕ್ಷ ಭಾಷೆಯ ಆಧಾರದ ಮೇಲೆ ಪುನರ್ವಿಂಗಡಣೆ ಮಾಡಬೇಕೆಂದು ಬಲವಾದ ಒತ್ತಾಯ ತಂದಿತು.



ಎನ್.ಎಲ್.ಉಪಾಧ್ಯಾಯ

ಸಾರ್ವಜನಿಕ ಒತ್ತಾಯದ ಮೇರೆಗೆ ಕೇಂದ್ರ ಸರ್ಕಾರದಿಂದ ನೇಮಿತವಾದ ರಾಜ್ಯ ಪುನರ್ವಿಂಗಡಣಾ ಆಯೋಗ ಮುಂದೆ ಪಕ್ಷ ಪುನರ್ವಿಂಗಡಣೆಗೆ ಆಧಾರಗಳನ್ನು ಮನವಿ ರೂಪದಲ್ಲಿ ಮಂಡಿಸಿತು. ಗ್ರಾಮವನ್ನು ಒಂದು ಘಟಕವಾಗಿ ತೆಗೆದುಕೊಳ್ಳುವುದು ಭಾಷಾ ಪ್ರದೇಶಗಳ ನಿರಂತರತೆ(ಅಂದರೆ ಒಂದು ಭಾಷಾ ಪ್ರದೇಶದ ಮಧ್ಯೆ ಕೆಲವು ಗ್ರಾಮಗಳ ಅನ್ಯ ಭಾಷೀಯವಾದರೆ ಅವು ಬಹುಮತ ಭಾಷೆಯ ರಾಜ್ಯದಲ್ಲಿ ಉಳಿಯುವುದು) ಮತ್ತು ಅಲ್ಪಸಂಖ್ಯಾತ ಭಾಷೀಯರಿಗೆ ಸೂಕ್ತ ರಕ್ಷಣೆ ಈ ಮನವಿಯ ಮುಖ್ಯ ಅಂಗಗಳಾಗಿದ್ದವು. ಇದನ್ನು ಆಯೋಗವಾಗಲಿ, ಕೇಂದ್ರ ಸರ್ಕಾರವಾಗಲಿ ಕಾಂಗ್ರೆಸ್ ಪಕ್ಷವಾಗಲಿ ಒಪ್ಪಲಿಲ್ಲ. ತಾಲೂಕು ಘಟಕವಾಗಿತ್ತು. ಹಲವೊಮ್ಮೆ ನಿಖರವಾದ ವೈಜ್ಞಾನಿಕ ನೀತಿಯಿಲ್ಲದೆ ಆಯೋಗ ಕೆಲಸ ಮಾಡಿತು. ಇದರಿಂದಾಗಿ ಕಾಸರಗೋಡು, ಬೆಳಗಾಂ ಸಮಸ್ಯೆ ಉಂಟಾಯಿತು.

ಏಕೀಕರಣ ಚಳುವಳಿಗೆ ಕಮ್ಯುನಿಸ್ಟ್ ಪಕ್ಷದ ವಿಶಿಷ್ಟ ಕೊಡುಗೆ ಏನು?

ಹಿಂದೆ ಜವಾಬ್ದಾರಿ ಸರಕಾರ ಚಳುವಳಿಯ ಹಾಗೆ, ರೈತ-ಕಾರ್ಮಿಕರನ್ನು ಏಕೀಕರಣ ಚಳುವಳಿ ಯಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಹೊಸರೂಪ ಕೊಟ್ಟಂತಾಯಿತು. ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿ ದುಡಿಯುವ ವರ್ಗ ತನ್ನ ಪಾತ್ರವನ್ನು ನಿರ್ವಹಿಸಿದ್ದರಿಂದ ಬಲಗೊಂಡಿತು. ನಾವು ರೈತ ಕಾರ್ಮಿಕರ ಮುಂದೆ ಈ ಪ್ರಶ್ನೆ ಇಟ್ಟೆವು. ದುಡಿಯುವ ವರ್ಗ ತನ್ನ ಪಾತ್ರವನ್ನು ನಿರ್ವಹಿಸಿದ್ದರಿಂದ ಬಲಗೊಂಡಿತು. ನಾವು ರೈತ ಕಾರ್ಮಿಕರ ಮುಂದೆ ಈ ಪ್ರಶ್ನೆ ಇಟ್ಟೆವು. ದುಡಿಯುವ ಜನರಿಗೆ ಏಕೀಕರಣ ಏಕೆ ಬೇಕು ಎಂದು. ಬಾಂಬೆ ಕರ್ನಾಟಕದಲ್ಲಿ, ಮೈಸೂರು ಸಂಸ್ಥಾನದಲ್ಲಿ ಮದ್ರಾಸು ಮತ್ತು ಹೈದರಾಬಾದ್ ಕರ್ನಾಟಕಗಳಲ್ಲಿ ಬೇರೆ ಬೇರೆ ರೀತಿಯ ಒಕ್ಕಲುತನ ಕಾನೂನುಗಳು ಜಾರಿಯಲ್ಲಿವೆ. ಗೇಣಿ ದರ ಸಹ ಬೇರೆ ಬೇರೆಯಾಗಿದೆ. ಹೀಗಿರುವಾಗ ಕನ್ನಡ ಭಾಷೆ ಮಾತಾಡುವ ರೈತರ ಐಕ್ಯಚಳುವಳಿ ನಡೆಸುವುದು ಹೇಗೆ? ಬೇಡಿಕೆಗಳಿಗೆ ಹೋರಾಟ ನಡೆಸುವುದು ಹೇಗೆ? ಕನ್ನಡ ಪ್ರದೇಶಗಳ ಏಕೀಕರಣದಿಂದ ಮಾತ್ರ

ಕನ್ನಡ ಪ್ರದೇಶಗಳ ಏಕೀಕರಣದಿಂದ ಮಾತ್ರ ಇದು ಸಾಧ್ಯ. ಆಗ ಒಂದೇ ಥರದ ಒಕ್ಕಲುತನ ಕಾನೂನಿನಗೆ ಪ್ರಬಲ ಒತ್ತಾಯ ತರಬಹುದು ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಸಹ ಕಾನೂನುಗಳಲ್ಲಿ ವಿಷಮತೆ ಇದೆ. ದುಡಿಯುವ ವರ್ಗದ ಹಿತಾಸಕ್ತಿಗಳ ರಕ್ಷಣೆಗೆ ಅಗತ್ಯವಾದ ಐಕ್ಯ ಪ್ರಬಲ ಸಂಘಟನೆ ಕಟ್ಟಲು ಏಕೀಕರಣದ ಅಗತ್ಯವನ್ನು ರೈತ-ಕಾರ್ಮಿಕರಿಗೆ ಮನವರಿಕೆ ಮಾಡಿಕೊಟ್ಟೆವು.

ಇದು ಸಾಧ್ಯ. ಆಗ ಒಂದೇ ಥರದ ಒಕ್ಕಲುತನ ಕಾನೂನಿನಗೆ ಪ್ರಬಲ ಒತ್ತಾಯ ತರಬಹುದು ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಸಹ ಕಾನೂನುಗಳಲ್ಲಿ ವಿಷಮತೆ ಇದೆ. ದುಡಿಯುವ ವರ್ಗದ ಹಿತಾಸಕ್ತಿಗಳ ರಕ್ಷಣೆಗೆ ಅಗತ್ಯವಾದ ಐಕ್ಯ ಪ್ರಬಲ ಸಂಘಟನೆ ಕಟ್ಟಲು ಏಕೀಕರಣದ ಅಗತ್ಯವನ್ನು ರೈತ-ಕಾರ್ಮಿಕರಿಗೆ ಮನವರಿಕೆ ಮಾಡಿಕೊಟ್ಟೆವು.

(ದಿವಂಗತ ಸಂಗಾತಿ ಎನ್.ಎಲ್.ರವರ ಈ ಸಂದರ್ಶನದ ಭಾಗವನ್ನು ಐಕ್ಯರಂಗ ವಿಶೇಷ ಸಂಚಿಕೆ 1986 ರಿಂದ ಪುನರ್ ಮುದ್ರಿಸಲಾಗಿದೆ.)


ಏಕೀಕರಣದ ಚಳುವಳಿಯ ಸೈದ್ಧಾಂತಿಕ ಕೊರತೆಗಳು

ಜಿ.ಎನ್. ನಾಗರಾಜ್

ಪಾಳೆಯಗಾರಿ ಸಂಸ್ಥೆಗಳು, ಮೌಲ್ಯಗಳನ್ನು, ಭೂ ಪದ್ಧತಿಯನ್ನು ಬೇರು ಸಮೇತ ಕಿತ್ತು ಹಾಕದೆ ಅವರೊಡನೆ ಹೊಂದಾಣಿಕೆ, ಸಖ್ಯತೆಯಿಂದ ಮೂಡಿಬಂದ ಭಾರತದ ಸ್ವಾತಂತ್ರ್ಯ ಚಳುವಳಿಯ ಹಾಗೆಯೇ ಏಕೀಕರಣದ ಚಳುವಳಿಯ ಅನೇಕ ಸೈದ್ಧಾಂತಿಕ ಕೊರತೆಗಳು ಇಂದಿಗೂ ಕನ್ನಡ ಭಾಷಿಕರ ಜನಮನದ ಮೇಲೆ ಪರಿಣಾಮ ಬೀರುತ್ತಾ ಅನೇಕ ವಿಭಜಕ ಪ್ರವೃತ್ತಿಯ ಚಳುವಳಿಗಳಿಗೆ ಕಾರಣವಾಗಿ ಎಡ ಶಕ್ತಿಗಳ ಪ್ರಗತಿಗೆ ಆತಂಕವಾಗಿದೆ. ಅದರಲ್ಲಿ ಬಹಳ ಮುಖ್ಯವಾದವು ಮೂರು ಅಂಶಗಳು

1. ಕರ್ನಾಟಕದ ಗತ ವೈಭವದ ಸ್ಮರಣೆ

ಬ್ರಿಟಿಷರ ಕಾಲ್ತುಳಿತಕ್ಕೆ ಸಿಕ್ಕಿ ನುಗ್ಗಾಗಿದ್ದ ಭಾರತದಲ್ಲಿ ಭಾರತದ ಹಿಂದಿನ ಚರಿತ್ರೆಯನ್ನು ವೈಭವೀಕರಿಸುವುದು - ಹಿಂದೂ ಚರಿತ್ರಕಾರರು ಮೌರ್ಯರ, ಗುಪ್ತರ ಕಾಲದ ಚರಿತ್ರೆಯನ್ನು; ಮುಸಲ್ಮಾನ ಚರಿತ್ರಾಕಾರರು ಮೊಗಲರ ಕಾಲದ ಚರಿತ್ರೆಯನ್ನು ವೈಭವೀಕರಿಸುವುದು. ಜೊತೆಗೆ ಹಿಂದೂ ಚರಿತ್ರಕಾರರು ಪರಕೀಯರ ಧಾಳಿಯಿಂದ ಹಿಂದೂ ಸ್ಥಾನವೂ ನಾಶವಾಯಿತೆನ್ನುತ್ತಾ ಮುಸಲ್ಮಾನರನ್ನೇ ಎಲ್ಲಾ ಅನಿಷ್ಟಕ್ಕೂ ಗುರಿ ಮಾಡುವುದೂ ನಡೆದಿತ್ತು. ಅದೇ ರೀತಿಯಲ್ಲಿ ತಿಲಕರು ಆರಂಭಿಸಿದ ಗಣಪತಿ ಪೂಜಾ ಇತ್ಯಾದಿಗಳು ನಡೆದಿದ್ದವು. ನಮ್ಮ ರಾಜ್ಯದಲ್ಲಿಯೂ, ಕರ್ನಾಟಕ ಕುಲ ಪುರೋಹಿತರೆಂದು ಹೆಸರಾದ ಆಲೂರು ವೆಂಕಟರಾಯರ ಮೊದಲ ಪುಸ್ತಕದ ಹೆಸರೇ 'ಕರ್ನಾಟಕ ಗತ ವೈಭವ' ಕರ್ನಾಟಕದ ಮೊದಲ ಕಾದಂಬರಿಗಳೂ ಕೂಡ. ಬಂಕಿಮಚಂದ್ರರ 'ದುರ್ಗೇಶ ನಂದಿನಿ'ಗಳ ನಾಥರ್ ಮರಾಠ ಅಭ್ಯುದಯ ಇತ್ಯಾದಿ ಮುಸಲ್ಮಾನರ ವಿರುದ್ಧ, ರಾಷ್ಟ್ರ ಪ್ರೇಮದ (?) ಚರಿತ್ರೆಗಳು, ಬಹುಮನಿ ಸುಲ್ತಾನರೊಂದಿಗೆ ಹೋರಾಡಿ ಹಿಂದೂ ರಾಜ್ಯವನ್ನು ಕಾಯ್ದುಕೊಂಡ ರೆಂಬುದಕ್ಕಾಗಿ ವಿಜಯನಗರದ ಚರಿತ್ರೆಯನ್ನು ಪುನಃ ಪುನಃ ಪಠಣ ಮಾಡಿದ್ದೇನು; ಮೆಲುಕು ಹಾಕಿದ್ದೇನು? ಗಳಗನಾಥರ ಕಾದಂಬರಿಗಳು 'ಕನ್ನಡಿಗರ ಕರ್ಮ ಕಥೆ' 'ಮಾಧವ ಕರುಣಾವಿಲಾಸ', 'ಕುಮುದಿನಿ' ಇವು ವಿಜಯನಗರ ಕಾಲದ ಚರಿತ್ರೆಯ ಬಗ್ಗೆ ಕಾದಂಬರಿಗಳು.



'ನಿದ್ದೆ ಬಾರದು ಇನ್ನು ಈ ಜನ್ಮಕ್ಕೆ
ಬಿದ್ದ ಹಂಪೆಯ ಕಂಡು ಕೆಂಗೆಟ್ಟನು'

- ಹೊಯ್ಸಳ

'ಚಾಳುಕ್ಯ ರಾಷ್ಟ್ರ ಕೂಟರೆಲ್ಲಿ
ಗಂಗಾ ಕಂದಬರೆಲ್ಲಿ
ಹೊಯ್ಸಳ ಕಳಚುರ್ಯರೆಲ್ಲಿ
ವಿಜಯನಗರ ಭೂಪರು'

- ಗೋವಿಂದ ಪೈ

ಎಂಬಂತಹ ಅನೇಕ ಕವನಗಳನ್ನು ನೋಡಿ.

ಇದು ಅಂದಿನ ಬಹಳಷ್ಟು ಸಾಹಿತ್ಯದಲ್ಲಿ ಮೂಡಿರುವ ಧ್ವನಿ. ಜೊತೆಗೆ 'ಎಚ್ಚಮನಾಯಕ' ದಂತಹ ನಾಟಕಗಳಲ್ಲಿ ಹಂಪೆಯನ್ನು ಕಂಡು ಕೊರಗುವ ದೃಶ್ಯಕ್ಕೆ 'ಒನ್ಸ್‌ಮೋರ್'ಗಳು. ಈ ಕವನಗಳನ್ನು ಹಾಡುವ, ಈ ನಾಟಕಗಳನ್ನು ನೋಡುವುದರ ಜೊತೆಗೆ ಇದೇ ಮಾದರಿಯ ಭಾಷಣಗಳನ್ನುಳ್ಳ 'ನಾಡಹಬ್ಬ'ಗಳು. ಇದೆಲ್ಲಕ್ಕೂ ಕಿರೀಟವಿದ್ದಂತೆ ವಿಜಯನಗರದ ಸ್ಥಾಪನೆಯ 600ನೇ ವರ್ಷದ ಜಯಂತಿ 1936 ರಲ್ಲಿ ದೊಡ್ಡ ಪ್ರಮಾಣದಲ್ಲಿ ಆಚರಿಸಲ್ಪಟ್ಟಿತು.

ಈ ಏಕೀಕರಣ ಕಾರ್ಯದಲ್ಲಿ ಚರಿತ್ರೆ ಮಾತ್ರವೇ ಅಲ್ಲ ಗೀತೆ, ಕುರುಕ್ಷೇತ್ರಗಳೂ ಉಪಯೋಗಕ್ಕೆ ಬಂದವು. ಅಷ್ಟೇ ಅಲ್ಲ; ಏಕೀಕರಣವನ್ನು ಪ್ರತಿಪಾದಿಸಿದ ಈ ಜನರು 'ಮೈಸೂರಸರ ಮೊದಲಿಗ ನೋಡು, ಇಂತಹ ದೊರೆಗಳ ಸೇರಿದ ನಾಡು, ಸಿಂಗರದಾ ಸಿರಿಗನ್ನಡ ನಾಡು' ಎಂದು ರಾಜಮಹಾರಾಜರನ್ನು ಹೊಗಳುತ್ತಾ ನಡೆದಿದ್ದರಲ್ಲಿ ಪಾಳೆಯಗಾರಿ ವ್ಯವಸ್ಥೆಯನ್ನು ಪೂಜಿಸಿದ್ದಲ್ಲಿ ಆಶ್ಚರ್ಯವೇನಿದೆ!

ಇದೇ ಪ್ರತಿಗಾಮೀ ವಿಚಾರಗಳ ಮುಂದುವರಿಕೆಗಾಗಿ ಮಾತ್ರವಲ್ಲ ಭಾಷಾಂಧತೆಯ ಮಾರ್ಗದಲ್ಲಿ ಭಾಷೆ-ಭಾಷೆಗಳ ನಡುವೆ ದ್ವೇಷವನ್ನು ಹಚ್ಚುವ ಮಾರ್ಗದಲ್ಲಿ ಇಂದು ಕೂಡ ನೃಪತುಂಗ ಮಂಟಪ, ಪುಲಕೇಶಿ ಮಂಟಪಗಳಲ್ಲಿ ತಿಂಗಳುಗಟ್ಟಲೆ ರಾಜ್ಯೋತ್ಸವಗಳು ನಡೆಯುತ್ತಿಲ್ಲವೇ?" ಗಲ್ಲಿಗಲ್ಲಿಗಳಲ್ಲಿ ಕನ್ನಡ ಇತಿಹಾಸದ ವೈಭವೀಕರಣ ನಡೆಯುವುದಿಲ್ಲವೇ?

2. ಕನ್ನಡಿಗರಲ್ಲಿ ಕೀಳರಿಮೆ : ಏಕೀಕರಣ ಚಳುವಳಿಯ ಅಧ್ವರ್ಯಗಳಲ್ಲಿ ರಾಜಕೀಯ, ಸಾಂಸ್ಕೃತಿಕ ನಾಯಕರಲ್ಲಿ

'ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ
ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆ ಬಿದ್ದು
ಯಾವ ಮಂಕೊ ಕವಿದು ಹುದುಗಿರುವೆವಲ್ಲ

(ತೀ.ನಂ.ಶ್ರೀಕಂಠಯ್ಯ)


ಹೊಸಹೊಮ್ಮು ಹಮುತ್ತ ಎಲ್ಲರೂ
ನನ್ನಕ್ಕ ತಂಗಿಯರು ಚಿಗುರಿ
ಆ ಕಡೆಗೆ-ಈ ಕಡೆಗೆ ತೂಗುವರು ತೊನೆ
ಯುವರು ಆ ಪೊಂಕ ಬಿಂಕ
ಅವರ ಮಕ್ಕಳು ಬೆಳೆದು ಕಳೆಗೂಡಿ
ಮನೆ ಬೆಳಗಿ ಹಬ್ಬ ಮಾಡುವರು

ಎನ್ನುವ ಕರುಬು ಕೂಡ ಸ್ಪಷ್ಟವಾಗಿ ಒಡೆದು ಕಾಣುತ್ತದೆ. ಇಂಥಹದೇ ಹಲವು ಉದಾಹರಣೆಯನ್ನು ನೀಡಬಹುದು.

ಕನ್ನಡ ಭಾಷೆಯಂತಹ ದುಸ್ಥಿತಿಗೆ ನಮ್ಮ ದೇಶದ ಹತ್ತು ಹಲವು ಭಾಷೆಗಳು ಈಡಾಗಿದ್ದರೂ ನೆರೆಯ ಕೇರಳ, ಆಂಧ್ರ, ಒರಿಸ್ಸಾ, ಗುಜರಾತ್ ಕೂಡ ಹರಿದು ಹಂಚಿ ಹೋಗಿದ್ದರೂ ಕೂಡ ಕನ್ನಡವೊಂದೇ ಇದಕ್ಕೆ ತುತ್ತಾಗಿದೆಯೆನ್ನುವ ಈ ಭಾವನೆ ಅನೇಕ ಕಡೆ ಅನೇಕ ರೀತಿಯಲ್ಲಿ ವ್ಯಕ್ತವಾಗಿದೆ. ಇಂದಿಗೂ ಮುಂದುವರಿದಿದೆ.

ಕಾಂ. ಬಿ.ಟಿ.ಆರ್.ರವರು ರಾಷ್ಟ್ರೀಯ ಪ್ರಶ್ನೆಯ ಬಗ್ಗೆ ವಿಶ್ಲೇಷಣೆ ಮಾಡುತ್ತಾ

"ಕೈಗಾರಿಕೆಗಳ ಬೆಳವಣಿಗೆ ಕೆಲವೇ ಬಂದರುಗಳಿಗೆ, ಕೆಲವೇ ಪ್ರಾಂತಗಳ ಕೆಲವೇ ನಗರಗಳಿಗೆ ಸೀಮಿತವಾಗಿದ ಬ್ರಿಟಿಷರ ಆಡಳಿತದಲ್ಲಿ ಪ್ರಾಂತಗಳ ನಡುವಿನ ಅಸಮಾನ ಬೆಳವಣಿಗೆ ವಿವಿಧ ದೇಸೀ ಜನಾಂಗಗಳ ನಡುವೆ ಅಸಮಾನತೆಯ ಭಾವನೆ ಮೂಡುವುದಕ್ಕೆ ಆಧಾರವಾದ ಒಂದು ಅಂಶವಾಯಿತು. ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಅಸಮಾನ



ಬೆಳವಣಿಗೆ ಮುಂದುವರೆದಾಗ ಈ ಭಾವನೆ ಪ್ರಬಲವಾಗುತ್ತಾ ನಡೆದಿದೆ" ಎನ್ನುತ್ತಾರೆ. ಬಂಡವಾಳಶಾಹಿ ಪಥವನ್ನು ತುಳಿದಿದ್ದರ ಫಲವಾದ ಈ ಅಸಮಾನ ಬೆಳವಣಿಗೆಯನ್ನು ಪ್ರಾದೇಶಿಕತಾವಾದಿಗಳು; ಪ್ರತಿಗಾಮಿಗಳು, ಒಂದು ದೇಸೀಯ ಜನಾಂಗದ ಬೇಡಿಕೆಗಳನ್ನು ಮತ್ತೊಂದು ದೇಸೀಯ ಜನಾಂಗದ ವಿರುದ್ಧ ತಿರುಗಿಸಿ ಸಮಾನತೆಗೆ ನಡೆಯುತ್ತಿರುವ ಐಕ್ಯ ಹೋರಾಟವನ್ನು ಕಂಗೆಡಿಸಲು ಉಪಯೋಗಿಸುತ್ತಿದ್ದಾರೆ ಎನ್ನುತ್ತಾರೆ.

3. ಭಾಷಾ ಕಲಿಕೆಯ ಬಗ್ಗೆ ನಿಲುವು

ಹೀಗೆ ಕನ್ನಡ ಸೊರಗಿದೆ ಅಕ್ಕ ತಂಗಿಯರೆಲ್ಲ ಮುಂದು ಮುಂದಾಗಿದ್ದಾರೆ ಎಂದುಕೊರಗುತ್ತ ಪ್ರಾಚೀನ ವೈಭವದ ಪಾಳೆಯಗಾರಿ ವ್ಯವಸ್ಥೆಯ ಕೀರ್ತನೆಗೆ ತೊಡಗಿದ ನಮ್ಮ 'ಏಕೀಕರಣ ಪ್ರಶ್ನೆಯಲ್ಲಿ ಅತಿ ಕೌತುಕವಾದ ನಡವಳಿಕೆಯೆಂದರೆ ಕನ್ನಡವನ್ನು ಕಲಿತು ಕನ್ನಡದಲ್ಲಿಯೇ ಎಲ್ಲವನ್ನೂ ಕಲಿಸಬಲ್ಲ ಭಾಷೆಯಾಗಿ ಕನ್ನಡವನ್ನು ಬೆಳೆಸುವ ಭಾವನೆ ಕರ್ನಾಟಕ ಏಕೀಕರಣವನ್ನು ಪ್ರತಿಪಾದಿಸಿದ ನಾಯಕರಲ್ಲಿ, ಜನತೆಯಲ್ಲಿ ಮೂಡದಿದ್ದದು.

ಬಿ.ಎಂ.ಶ್ರೀಯವರು, ಆಲೂರು ವೆಂಕಟರಾಯರಂತಹವರು, ಎ.ಆರ್.ಕೃಷ್ಣಶಾಸ್ತ್ರಿಗಳು ಕರ್ನಾಟಕದ ಕಾಂಗ್ರೆಸ್ ನಾಯಕರು ಮೂರು ಭಾಷೆಗಳ ಕಲಿಕೆಯನ್ನು ಪ್ರತಿಪಾದಿಸಿದರು. ಅದು ಅನಿವಾರ್ಯ ಎಂದವರ ಭಾವನೆ.

ಬಿ.ಎಂ.ಶ್ರೀಯವರ ಪ್ರಕಾರ


"ಇಂಡಿಯಾದಲ್ಲಿ ವಿದ್ಯಾವಂತನೆನ್ನುವ ಪ್ರತಿಯೊಬ್ಬನೂ ಇಂಗ್ಲಿಷ್, ಸಂಸ್ಕೃತ, ತನ್ನ ಕಡೆಯ ದೇಶಭಾಷೆ ಈ ಮೂರನ್ನೂ ಚೆನ್ನಾಗಿ ತಿಳಿದಿರಬೇಕು. ತನಗೆ ಹರ್ಷವೂ ಲಾಭವೂ ದೇಶಕ್ಕೆ ಉನ್ನತಿಕೆಯೂ ಸೌಲಭ್ಯವೂ ಬರುವಂತೆ ಶ್ರಮ ಪಡಬೇಕೆನ್ನುವವನಿಗೆ ಈ ಮೂರು ಬಂದೇ ತೀರಬೇಕು"

ಇದಕ್ಕೆ ಕೃಷ್ಣಶಾಸ್ತ್ರಿಗಳು ಒಂದು ಸಣ್ಣ ತಿದ್ದುಪಡಿ ಸೂಚಿಸುತ್ತಾರೆ. ಮಾತೃಭಾಷೆಗೆ ಮೊದಲ ಸ್ಥಾನ, ದೇಶದ ಭಾಷೆ ಎರಡನೆಯದು, ಇಂಗ್ಲೀಷ್ ಮೂರನೆಯದು ಮಾತೃಭಾಷೆಯೇ ದೇಶ ಭಾಷೆಯಾಗಿದ್ದರೆ ಅವರು ಮಾತ್ರ ಸಂಸ್ಕೃತವನ್ನು ಎರಡನೆಯ ಭಾಷೆಯಾಗಿ ಓದಬೇಕು. ಕೊನೆಗೆ ಅವರೂ ಮೂರು ಭಾಷೆ ಕಲಿಯಿರಿ ಎನ್ನುವವರೇ.

ಇದು ಸಾಂಸ್ಕೃತಿಕ ರಂಗದವರ ಅಭಿಪ್ರಾಯವಾದರೆ ಕಾಂಗ್ರೆಸ್‌ನಲ್ಲಿದ್ದ ಹಲಜನರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಹಿಂದಿಯ ಪ್ರಚಾರ ಮಾಡುತ್ತಾ ಕನ್ನಡ, ಇಂಗ್ಲೀಷ್‌ಗಳ ಜೊತೆಯಲ್ಲಿ ಹಿಂದಿಯನ್ನು ಕಲಿಯಬೇಕು ಎಂದು ಪ್ರತಿಪಾದಿಸತೊಡಗಿದರು.

ಒಟ್ಟಾರೆಯಾಗಿ ಕನ್ನಡಕ್ಕೆ ಹಿಂದಿ ಮೊದಲಾದ ವೈಜ್ಞಾನಿಕ ಪ್ರಜ್ಞೆ ಏಕೀಕರಣದ ಮೊದಲಾಗಲಿ ನಂತರವಾಗಲಿ ಕನ್ನಡಿಗರ ಸಾಮಾಜಿಕ ಪ್ರಜ್ಞೆ ಭಾಗವಾಗಲಿಲ್ಲ ಎಂಬುದು ಗಮನಾರ್ಹ.

ಪಾಳೆಯಗಾರಿ ಸಂಸ್ಕೃತಿಗಳು, ಮೌಲ್ಯಗಳನ್ನು, ಭಾಷಾ ಶ್ರೇಷ್ಠತೆಯನ್ನು
ಬೇರು ಸಮೇತ ಕಿತ್ತೊಗೆಯದೆ ಅವುಗಳೊಡನೆ ಹೊಂದಾಣಿಕೆಯಿಂದ
ಮೂಡಿಬಂದ ಏಕೀಕರಣ ಚಳುವಳಿಯ ಸೈದ್ಧಾಂತಿಕ
ಕೊರತೆಗಳು ಇಂದಿನ ಅನೇಕ ವಿಭಜಕ ಪ್ರವೃತ್ತಿಯ
ಚಳುವಳಿಗಳಿಗೆ ಕಾರಣವಾಗಿವೆ. ——— ಜಿ.ಎನ್.ನಾಗರಾಜ್



ಉತ್ತರ ಕರ್ನಾಟಕದಲ್ಲಿ ಅಸಮಾನತೆ ಪ್ರತ್ಯೇಕ ರಾಜ್ಯದ ರಾಜಕೀಯ

ನಿತ್ಯಾನಂದ ಸ್ವಾಮಿ

ಅಪಾರ ಪ್ರಾಕೃತಿಕ ಸಂಪನ್ಮೂಲಗಳಿಂದ ತುಂಬಿ ಬೀಗುತ್ತಿರುವ ಉತ್ತರ ಕರ್ನಾಟಕ ಹಿಂದುಳಿದಿದೆ. ಇದರ ಆರ್ಥಿಕ, ರಾಜಕೀಯ ಕಾರಣಗಳನ್ನು ಗುರುತಿಸುತ್ತಲೇ ಸರ್ವತೋಮುಖ ಅಭಿವೃದ್ಧಿ ಸಾಧಿಸುವ ಮಾರ್ಗಗಳನ್ನು ಇಲ್ಲಿ ಚರ್ಚಿಸಿದ್ದಾರೆ.

ಉತ್ತರ ಕರ್ನಾಟಕಕ್ಕೆ, ಅದರಲ್ಲೂ ಹೈದ್ರಾಬಾದ್ ಕರ್ನಾಟಕಕ್ಕೆ ಅಭಿವೃದ್ಧಿ ವಿಷಯದಲ್ಲಿ ಅನ್ಯಾಯವೆಸಗಲಾಗಿದೆ ಎಂದು ಹೇಳಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ನಿರ್ಮಾಣದ ಕೂಗು ಎಬ್ಬಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಪ್ರತ್ಯೇಕ ರಾಜ್ಯ ನಿರ್ಮಾಣದ ಚಳುವಳಿಗೆ ಮತ್ತೊಮ್ಮೆ ಚಾಲನೆ ನೀಡಲಾರಂಭಿಸಲಾಗುತ್ತಿದೆ. ಕರ್ನಾಟಕ ಏಕೀಕರಣದ ದಿನ ನವೆಂಬರ್ ಒಂದರಂದು ಕರಾಳದಿನ ಆಚರಿಸುವ ಕರೆಯನ್ನು ಸಹ ನೀಡಲಾಗಿದೆ.

ಹರಿದು ಹಂಚಿಹೋಗಿದ್ದ ಕನ್ನಡ ನಾಡನ್ನು ಅಪಾರ ತ್ಯಾಗ ಬಲಿದಾನಗಳ ಮೂಲಕ ಒಂದುಗೂಡಿಸಲಾಗಿತ್ತು. ಒಂದೇ ದೇಶೀಯತೆಯನ್ನು ಹೊಂದಿರುವ ಕನ್ನಡಿಗರೆಲ್ಲರೂ ಒಂದಾಗಿ ಸಮಸ್ತ ಕನ್ನಡಿಗರ ಅಭಿವೃದ್ಧಿಗಾಗಿ ಶ್ರಮಿಸುವಂತಾಗಲಿ ಎನ್ನುವುದೇ ಕರ್ನಾಟಕ ಏಕೀಕರಣದ ಉದ್ದೇಶವಾಗಿತ್ತು. ಒಂದೆಡೆ ನವಾಬರು, ಇನ್ನೊಂದೆಡೆ ಸಂಸ್ಥಾನಿಕರು, ಮತ್ತೊಂದೆಡೆ ಬ್ರಿಟಿಷರು ಕನ್ನಡದ ನೆಲವನ್ನು ಹಂಚಿಕೊಂಡಿದ್ದಾಗ ಕನ್ನಡಿಗರ ದೇಶೀಯತೆ ಛಿದ್ರವಾಗಿತ್ತು, ಆಳರಸರ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ವೈವಿಧ್ಯಮಯವಾದ ಕನ್ನಡಿಗರ ಸಂಸ್ಕೃತಿಯನ್ನು ಬೆಳೆಸಿ ಪೋಷಿಸುವುದು ಅವರಿಗೆ ಬೇಕಾಗಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕನ್ನಡಿಗರು ತಾವೆಲ್ಲಾ ಒಂದಾಗಬೇಕೆಂಬ ಕನಸು ಕಂಡಿದ್ದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂದು ಕನವರಿಸಿದ್ದರು.

ಹೀಗೆ ಒಂದಾದ ನಾಡನ್ನು ಈಗ ತುಂಡರಿಸಲು ಹೊರಟವರು ಉತ್ತರ ಕರ್ನಾಟಕಕ್ಕೆ ದಕ್ಷಿಣ ಕರ್ನಾಟಕದವರಿಂದ ಅನ್ಯಾಯವಾಗಿದೆ ಎಂದು ಆರೋಪಿಸುತ್ತಾರೆ. ನಗರಗಳ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆ, ರಸ್ತೆಗಳ ನಿರ್ಮಾಣ, ಕಛೇರಿಗಳ ಸ್ಥಾಪನೆ ಇತ್ಯಾದಿಗಳ ವಿಷಯದಲ್ಲಿ ತಾರತಮ್ಯ ಮಾಡಲಾಗಿದೆ ಎಂದು ವಾದಿಸುತ್ತಾರೆ. ಉತ್ತರ ಕರ್ನಾಟಕ ಪ್ರದೇಶವು ದಕ್ಷಿಣ ಕರ್ನಾಟಕ ಪ್ರದೇಶದಷ್ಟು ಅಭಿವೃದ್ಧಿ ಆಗಿಲ್ಲ ಎಂಬ ವಿಷಯದಲ್ಲಿ ಅನುಮಾನವಿಲ್ಲ. ದಕ್ಷಿಣ ಕರ್ನಾಟಕದವರೂ ಅದನ್ನು ಒಪ್ಪುತ್ತಾರೆ. ಆದರೆ ಉತ್ತರ ಕರ್ನಾಟಕದ ಹಿಂದುಳಿಯುವಿಕೆಗೆ



ದಕ್ಷಿಣ ಕರ್ನಾಟಕದ ಜನತೆಯೇ ಕಾರಣ ಎಂದು ತಿಳಿಯುವುದು ತಪ್ಪು. ದಕ್ಷಿಣ ಕರ್ನಾಟಕವು ಉತ್ತರ ಕರ್ನಾಟಕಕ್ಕಿಂತ ಹೆಚ್ಚು ಅಭಿವೃದ್ಧಿಯಾಗಲು ಐತಿಹಾಸಿಕ ಕಾರಣಗಳಿವೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಕಾಣಲಾಗುತ್ತಿರುವ ಅಭಿವೃದ್ಧಿಯು ಕೈಗಾರೀಕರಣ ಹಾಗೂ ವ್ಯಾಪಾರ ವಾಣಿಜ್ಯದ ಬೆಳವಣಿಗೆಯೊಂದಿಗೆ ಬಂದಿರುವ ಅಭಿವೃದ್ಧಿ. ಬೇರೆ ಶಬ್ದಗಳಲ್ಲಿ ಈ ಬೆಳವಣಿಗೆಯನ್ನು ಬಂಡವಾಳಶಾಹಿ ಬೆಳವಣಿಗೆ ಎಂದು ವಿವರಿಸಬಹುದು. ಇಲ್ಲಿ ಬಂಡವಾಳಶಾಹಿ ಪದ್ಧತಿ ಬೆಳೆದುಬಂದ ಬಗೆಯೂ ವಿಶಿಷ್ಟವಾಗಿದೆ. ಮೈಸೂರು ಪ್ರಾಂತ್ಯದಲ್ಲಿ ಹೈದರಾಲಿ, ಟಿಪ್ಪು ಅವರ ಕಾಲದಲ್ಲೇ ಒಂದು ರೀತಿಯ ಭೂಸುಧಾರಣೆಗಳು ಜಾರಿಗೆ ಬಂದಿದ್ದವು. ರೈತನಿಗೂ ರಾಜನಿಗೂ ನಡುವೆ ಮಧ್ಯವರ್ತಿಗಳಿರಲಿಲ್ಲ. ರೈತ ನೇರವಾಗಿ ರಾಜನಿಗೆ ಭೂಕಂದಾಯ ಸಂದಾಯ ಮಾಡುತ್ತಿದ್ದ, ಅಷ್ಟರ ಮಟ್ಟಿಗೆ ಇಲ್ಲಿನ ಭೂಸಂಬಂಧಗಳು ಪ್ರಗತಿಪರವಾಗಿದ್ದವು. ಅನಂತರದ ಮೈಸೂರು ಒಡೆಯರು ಸಹ ಪಾಶ್ಚಾತ್ಯ ಬಂಡವಾಳಶಾಹಿ ಪ್ರಗತಿಯಿಂದ ಆಕರ್ಷಿತರಾಗಿದ್ದರು. ಸರ್ ವಿಶ್ವೇಶ್ವರಯ್ಯನವರಂತಹ ಆಧುನಿಕ ತಂತ್ರಜ್ಞ ಮಾರ್ಗದರ್ಶನವನ್ನು ಅವರು ಬಳಸಿಕೊಂಡರು, ಕೈಗಾರೀಕರಣ ಹಾಗೂ ನಗರಾಭಿವೃದ್ಧಿಗೆ ಈ ಧೋರಣೆಯೇ ಕಾರಣವಾಯಿತು.

ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ಅಲ್ಲಿ ಜಾರಿಗೆ ಬಂದ ಭೂಸುಧಾರಣಾ ಕ್ರಮಗಳೇ ಕಾರಣ. ಗೇಣಿದಾರರ ಹೋರಾಟ ಪ್ರತಿಗಾಮಿ ಭೂಮಾಲಕ ಪದ್ಧತಿಗೆ ಬಲವಾದ ಏಟು ಕೊಡುವುದರಲ್ಲಿ ಯಶಸ್ವಿಯಾಯಿತು. ಇದು ಮುಂದೆ ಕೈಗಾರೀಕರಣ ಹಾಗೂ ವ್ಯಾಪಾರ ವಾಣಿಜ್ಯದ ಬೆಳವಣಿಗೆಗೆ ಪ್ರೋತ್ಸಾಹ ನೀಡಿತು. ಈ ತರಹದ ಬೆಳವಣಿಗೆ ಉತ್ತರ ಕರ್ನಾಟಕದಲ್ಲಿ, ಮುಖ್ಯವಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ಜರುಗಲಿಲ್ಲ. ಕಾಂಗ್ರೆಸ್ ಭೂಸುಧಾರಣೆಗಳು ಜಾರಿಗೆ ಬರುತ್ತಿರುವುದು ಕಾಂಗ್ರೆಸ್ಸನ್ನು ಬೆಂಬಲಿಸುತ್ತಾ ಬಂದಿದ್ದ ಈ ಪ್ರದೇಶದ ಭೂಮಾಲಿಕರಿಗೆ ಮೊದಲೇ ತಿಳಿಯಿತು. ಅವರು ಕಾನೂನಿನಲ್ಲಿ ಒದಗಿಸಲಾಗಿದ್ದ ತೂತುಗಳನ್ನು ಬಳಸಿಕೊಂಡು ತಮ್ಮ ಭೂಮಿ ಭೂಸುಧಾರಣೆಗಳ ದಾಳಿಗೆ ಸಿಲುಕಿ ಕೈತಪ್ಪಿ ಹೋಗುವುದನ್ನು ಯಶಸ್ವಿಯಾಗಿ ತಡೆದರು. ಮೇಲ್ನೋಟಕ್ಕೆ ಭೂಸುಧಾರಣೆ ಗಳು ಜಾರಿಗೆ ಬಂದಂತೆ ಕಾಣುತ್ತಿದ್ದರೂ, ಭೂಮಿಯ ಮೇಲೆ ಭೂಮಾಲಿಕರ ಹಿಡಿತ ಸಡಿಲಾಗಲಿಲ್ಲ. ಗೇಣಿದಾರರಿಗೆ ಅರ್ಜಿಗಳನ್ನು ಹಾಕಲಿಕ್ಕೇ ಬಿಡಲಿಲ್ಲ. ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ವೀಕೃತವಾದ ಕೇವಲ 10 ಸಾವಿರ ಅರ್ಜಿಗಳಲ್ಲೇ ಸುಮಾರು 1000 ಅರ್ಜಿಗಳನ್ನು ತಿರಸ್ಕರಿಸಲಾಯಿತು. ಹೀಗಾಗಿ ಗೇಣಿದಾರರಿಗೆ ಭೂಮಿ ಸಿಗಲಿಲ್ಲ. ಅವರನ್ನು ಬಲವಂತದಿಂದ ಹೊರದಬ್ಬಲಾಯಿತು. ಹೀಗೆ ಭೂಮಿಯ ಹಕ್ಕನ್ನು ಕಳೆದುಕೊಂಡ ಗೇಣಿದಾರರು ಕೃಷಿ ಕೂಲಿಕಾರರಾಗಿ ಊರೂರು ಅಲೆಯುವಂತಾಯಿತು. ಇದು ಉತ್ತರ ಕರ್ನಾಟಕ ಹಿಂದುಳಿಯಲು ಮೂಲಕಾರಣ. ಇದಕ್ಕಾಗಿ ದಕ್ಷಿಣ ಕರ್ನಾಟಕದ ಜನತೆಯನ್ನು ದೂಷಿಸುವುದು ಸರಿಯಲ್ಲ.

ಉತ್ತರ ಕರ್ನಾಟಕದ ಹಿಂದುಳಿಯುವಿಕೆಗೆ ಇಲ್ಲಿ ಇನ್ನೂ ಜೀವಂತವಾಗಿರುವ, ಪ್ರಬಲವಾಗಿರುವ ಭೂಮಾಲಿಕ ಪದ್ಧತಿಯೇ ಕಾರಣ. ಭೂಸುಧಾರಣಾ ಕಾನೂನಿನ ಕಣ್ಣಿಗೆ ಮಣ್ಣೆರಚಿದ ಈ ಪಾಳೆಗಾರಿ ಭೂಮಾಲಕರು ಈ ಪ್ರದೇಶದ ರಾಜಕೀಯವನ್ನು ನಿಯಂತ್ರಿಸುತ್ತಾ ಬಂದಿದ್ದಾರೆ. ಇವರೇ ಶಾಸಕರಾಗಿದ್ದಾರೆ, ಇವರೇ ಮಂತ್ರಿಗಳಾಗಿದ್ದಾರೆ. ಇವರೇ ಬ್ಯಾಂಕುಗಳ ಚೇರ್‌ಮನ್ ಆಗಿದ್ದಾರೆ. ಇವರೇ ಸರ್ಕಾರಿ ಗುತ್ತಿಗೆದಾರರಾಗಿದ್ದಾರೆ. ಸರ್ಕಾರದಿಂದ ಹರಿದು ಬರುವ ಹಣ ಇವರ ನೆಲವನ್ನು ಅಭಿವೃದ್ಧಿ ಆಗದೆ ಉಳಿದಿದ್ದರೆ ಇದಕ್ಕೆ ಈ 'ಪುಣ್ಯವಂತರೆ' ಕಾರಣ. ಇವರ ಪ್ರಾಬಲ್ಯ ಇರುವುದರಿಂದಲೇ ಈ ಪ್ರದೇಶದಲ್ಲಿ ಧಾರ್ಮಿಕ ಮೂಢನಂಬಿಕೆಗಳು, ಜಾತಿ ಅಸ್ಪೃಶ್ಯತೆ, ಮಹಿಳೆಯರ ಮಾನಭಂಗ, ಬಾಲ್ಯವಿವಾಹ, ದೇವದಾಸಿ ಪದ್ಧತಿಯಂತಹ ಅನಿಷ್ಟಗಳು ಇಲ್ಲಿ ವಿಜೃಂಭಿಸುತ್ತವೆ.

ಇಂದು ಉತ್ತರ ಕರ್ನಾಟಕವನ್ನು ಪ್ರತ್ಯೇಕಿಸಬೇಕೆಂಬ ಕೂಗು ಇವರೇ ಹುಟ್ಟುಹಾಕಿದ್ದಾರೆ. ಕಾಂಗ್ರೆಸ್ ಆಳ್ವಿಕೆಯ ಲಾಭ ಪಡೆದ ಇಲ್ಲಿಯ ಪಾಳೆಗಾರಿ ಭೂಮಾಲಕರು ಈಗ ಬಂಡವಾಳಶಾಹಿ ಭೂಮಾಲಕರಾಗಿ ಪರಿವರ್ತನೆಯಾಗಿದ್ದಾರೆ. ಇದರಿಂದ ಅವರ ಪಾಳೆಗಾರಿ ಮನೋಭಾವದಲ್ಲಿ ಬದಲಾವಣೆ ಆಗಿಲ್ಲ. ಆದರೆ ಅವರು ರಾಜ್ಯ ಪ್ರಭುತ್ವದ ಹೆಚ್ಚಿನ ಲಾಭವನ್ನು ದಕ್ಕಿಸಿಕೊಳ್ಳಲು ಪ್ರತ್ಯೇಕ ರಾಜ್ಯವನ್ನು ಕೇಳಲು ಆರಂಭಿಸಿದ್ದಾರೆ. ಅವರ ಮೇಲೆ ಅನುಗ್ರಹಿಸಲ್ಪಟ್ಟ ಬಂಡವಾಳಶಾಹಿ ಆಕಾಂಕ್ಷೆಗಳಿಂದಾಗಿ ಅವರು ನಗರಗಳ ಅಭಿವೃದ್ಧಿ, ರಸ್ತೆಗಳ ಅಭಿವೃದ್ಧಿ, ಕಚೇರಿಗಳ ನಿರ್ಮಾಣ, ಕೈಗಾರಿಕೆಗಳ ನಿರ್ಮಾಣ ಎಂದು ಬಡಬಡಿಸತೊಡಗಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ನಿರ್ಮಾಣ ಮಾಡುವುದೆಂದರೆ ಉತ್ತರ ಕರ್ನಾಟಕದ ಜನತೆಯನ್ನು ಈ ತೋಳಗಳ ಬಾಯಿಗೆ ಕೊಟ್ಟಂತೆ. ಇದರಿಂದಾಗಿ ಇಲ್ಲಿನ ಪಾಳೆಗಾರಿ ಬೆಳೆಯಲು ಹೆಚ್ಚು ಅನುಕೂಲವಾಗುತ್ತದೆ.

ಒಂದು ಪ್ರದೇಶದ ಅಭಿವೃದ್ಧಿ ಆ ಪ್ರದೇಶದ ಜನತೆಯ ಅಭಿವೃದ್ಧಿ ಎನ್ನುವುದಾದರೆ, ಉತ್ತರ ಕರ್ನಾಟಕದಲ್ಲಿ ಇನ್ನೂ ಪ್ರಬಲವಾಗಿರುವ ಪ್ರತಿಗಾಮಿ ಭೂಮಾಲಕ ಪದ್ಧತಿ ನಾಶವಾಗಬೇಕು. ಈ ಪ್ರದೇಶದ ಭೂಸಂಬಂಧಗಳು ಬದಲಾಗದೆ ಇಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ. ಇಲ್ಲೊಂದು ಪ್ರಬಲವಾದ ಜನ ಚಳುವಳಿ ಬೆಳೆದುಬರಬೇಕು. ಆ ಚಳುವಳಿಗೆ ಇಡೀ ಕರ್ನಾಟಕದ ಜನತೆಯ ಬೆಂಬಲ ಬೇಕು. ಕರ್ನಾಟಕವನ್ನು ಎರಡು ಮಾಡುವುದರಿಂದ ಅನಿಷ್ಟ ಭೂಮಾಲಕ ಪದ್ಧತಿಯ ವಿರುದ್ಧದ ಹೋರಾಟ ದುರ್ಬಲವಾಗುತ್ತದೆ. ಭೂಮಾಲಕ ಶಕ್ತಿಗಳ ಕೈ ಮೇಲಾಗುತ್ತದೆ. ಒಂದು ಪ್ರದೇಶದ ಅಭಿವೃದ್ಧಿಗೆ ರಸ್ತೆಗಳು, ರೈಲುಗಳು ಬೇಕು. ಕಛೇರಿಗಳು, ಕೋರ್ಟ್‌ಗಳು ಬೇಕು. ಇವುಗಳ ನಿರ್ಮಾಣಕ್ಕೆ ಹಣವೂ ಬೇಕು. ಉತ್ತರ ಕರ್ನಾಟಕದ ಅಭಿವೃದ್ಧಿಗೆ ದಕ್ಷಿಣ ಕರ್ನಾಟಕದಿಂದ ಸಂಪನ್ಮೂಲಗಳು ಹರಿದುಬರಬೇಕು. ಬಂಡವಾಳಶಾಹಿ ಪದ್ಧತಿ ಬಯಸದ ಸಮಾನ ಬೆಳವಣಿಗೆಗಾಗಿ ಪ್ರಜ್ಞಾಪೂರ್ವಕ ಒತ್ತಾಯಬೇಕು. ದಕ್ಷಿಣ ಕರ್ನಾಟಕವನ್ನು ಉತ್ತರ ಕರ್ನಾಟಕದಿಂದ ಬೇರ್ಪಡಿಸುವುದೆಂದರೆ ಉತ್ತರ ಕರ್ನಾಟಕದ

ಅಭಿವೃದ್ಧಿಯನ್ನು ಮುಂದೂಡಿದಂತೆ.

★★★

'ದೋಣಿ ತುಂಬಿ ಹರಿದರೆ ಓಣಿ ತುಂಬಾ ಜೋಳ'

1956 ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಹರಿದು ಹಂಚಿಹೋಗಿದ್ದ ಕನ್ನಡಗಿರೆಲ್ಲ ಒಂದು ಗೂಡಿದಾಗ ನಮ್ಮ ಚೆಲುವ ಕನ್ನಡ ನಾಡು ಉದಯವಾಗಿತ್ತು. ಹೈದರಾಬಾದ್, ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಿಂದ ಹೊರಬಂದ ಕನ್ನಡಿಗರು ಅಂದಿನ ಮೈಸೂರು ರಾಜ್ಯವನ್ನುಸೇರಿದಾಗ ಏಕೀಕೃತ ಕರ್ನಾಟಕ ನಿರ್ಮಾಣವಾಗಿತ್ತು. ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳು ಉತ್ತರ ಕರ್ನಾಕವೆಂತಲೂ ಮಂಗಳೂರು, ಕೊಡಗು ಮತ್ತು ಹಳೆಯ ಮೈಸೂರಿನ ಒಂಭತ್ತು ಜಿಲ್ಲೆಗಳು ಸೇರಿ ದಕ್ಷಿಣ ಕರ್ನಾಟಕವೆಂದು ಗುರತಿಸಲ್ಪಡುತ್ತವೆ. ನೂರಾರು ಕನಸುಗಳನ್ನು ಹೊತ್ತು ಬಂದಿದ್ದ ಉತ್ತರ ಕರ್ನಾಟಕದ ಜನತೆ ಇಂದು, ಕರ್ನಾಟಕ ಏಕೀಕರಣವಾಗಿ 45 ವರ್ಷಗಳ ನಂತರ, ದಕ್ಷಿಣ ಕರ್ನಾಟಕದವರೊಂದಿಗೆ ನಮ್ಮ ಹಿಂದಿನ ಪರಿಸ್ಥಿತಿಯನ್ನು ಹೋಲಿಸಿ ನೋಡುತ್ತಿದ್ದಾರೆ. ***ಅಂದು ತಾಯ್ನಾಡಿನ ಮಡಿಲಿಗೆ ಬಂದು ಸೇರ್ಪಡೆಯಾದಾಗ ಉತ್ತರ ಕರ್ನಾಟಕದ ಜನತೆ ವನವಾಸ ಕಳೆಯಿತೆಂದು ಖುಷಿ ಪಟ್ಟಿತ್ತು. ಆದರೆ ಇಂದು ಅವರು ಭ್ರಮನಿರಸನಗೊಂಡಿದ್ದಾರೆ. ಅಂದು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಇವರು ಇಂದು ತಮ್ಮ ಅಭಿವೃದ್ಧಿಗಾಗಿ ಹೋರಾಡಬೇಕಾದ ಪರಿಸ್ಥಿತಿ ಉಂಟಾಗಿದೆ.*** ಪ್ರತ್ಯೇಕತೆಯ ಛಿದ್ರಕಾರಿ ಕೂಗು ಆಗೀಗೊಮ್ಮೆ ಕೇಳಿ ಬರುತ್ತಿರುವುದು ಕಳವಳಕಾರಿಯಾಗಿದೆ. ಮುಂಬೈ ಕರ್ನಾಟಕ ಎಂದು ಗುರುತಿಸಲ್ಪಡುತ್ತಿರುವ ಉತ್ತರ ಕರ್ನಾಟಕ(ಹಳೆಯ ಧಾರವಾಡ, ಬೆಳಗಾಂವ, ಉತ್ತರ ಕನ್ನಡ) ಮತ್ತು (ಹಳೆಯ) ಬಿಜಾಪುರ ಜಿಲ್ಲೆಗಳು ಹೇರಳವಾದ ನೈಸರ್ಗಿಕ ವರದಾನಗಳಿಂದ ಆಶೀರ್ವದಿಸಲ್ಪಟ್ಟಿದ್ದರೂ ಕರ್ನಾಟಕದ ಅಭಿವೃದ್ಧಿ ನಕಾಶೆಯಲ್ಲಿ ಒಂದು ಗೌರವಾನ್ವಿತ ಸ್ಥಾನವನ್ನು ಇನ್ನೂ ಪಡೆಯಲಾಗದೆ ಕೊರಗುತ್ತಿದೆ.

ಈ ಪ್ರದೇಶಗಳು ಸೇರಿಕೊಂಡು ಅಂದಿನ ಮುಂಬೈ ಪ್ರಾಂತ್ಯವು ಸ್ವಾತಂತ್ರ್ಯ ಪೂರ್ವದಲ್ಲಿ ಕರಾಚಿವರೆಗೂ ಸ್ವಾತಂತ್ರ್ಯ ನಂತರ ಗುಜರಾತದ ಉತ್ತರ ತುದಿಯುವರೆಗೂ ಹಬ್ಬಿಕೊಂಡಿತ್ತು. ಇಷ್ಟೊಂದು ವಿಶಾಲವಾದ ಒಂದು ಪ್ರಾಂತ್ಯದ ಕೊನೆಯ ಭಾಗದಲ್ಲಿದ್ದ ಈ ಜಿಲ್ಲೆಗಳು ತಾರತಮ್ಯಕ್ಕೆ ಒಳಗಾದವು. ಆದರೆ ಕರ್ನಾಟಕ ಏಕೀಕರಣ ನಂತರವಾದರೂ ಪರಿಸ್ಥಿತಿ ಬದಲಾಗಬೇಕಾಗಿತ್ತು.


ಮುಂಬೈ ಕರ್ನಾಟಕವನ್ನು ಭೌಗೋಳಿಕವಾಗಿ 3 ಭಾಗಗಳಾಗಿ ಕಾಣಬಹುದು. ಕಾರವಾರದ ದಕ್ಷಿಣಕ್ಕೆ ನಯನಮನೋಹರವಾಗಿ ಚಾಚಿಕೊಂಡಿರುವ ಕರಾವಳಿ ಈ ಪ್ರದೇಶದ ಭಾಗ್ಯದ ಬಾಗಿಲಿನಂತಿದೆ. ಕರಾವಳಿಯನ್ನು ಒಳನಾಡನಿಂದ ಬೇರ್ಪಡಿಸುವ ಪಶ್ಚಿಮ ಬೆಟ್ಟ ಮತ್ತು ಪಶ್ಚಿಮಕ್ಕೆ ಹರಿಯುವ ಅನೇಕ ನದಿಗಳ ಉಗಮ ಸ್ಥಾನವಾಗಿದ್ದು ಕರ್ನಾಟಕದ ಅರಣ್ಯ ಸಂಪತ್ತು ಇಲ್ಲಿದೆ. ಈ ಪ್ರದೇಶದ ಜೀವನಾಡಿಗಳಂತಿರುವ ಮಲಪ್ರಭ, ಘಟಪ್ರಭ ಮೊದಲಾದ ನದಿಗಳು ಹರಿದು ಹೋದಂತೆ ನಿರ್ಮಾಣಗೊಂಡಿರುವ ಬಯಲು ಪ್ರದೇಶವೇ ಅಕ್ಷಯಪಾತ್ರೆ.

ಸ್ವಾತಂತ್ರ್ಯ ಚಳುವಳಿಯಲ್ಲಿ

ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಬೈ ಕರ್ನಾಟಕದ ಪಾತ್ರ ಹಿರಿದಾದುದು. ಬ್ರಿಟಿಷ್ ಬಲಕ್ಕೆ ಸಿಂಹ ಸ್ವಪ್ನವಾಗಿದ್ದ ಕಿತ್ತೂರಿನ ವೀರರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾಸಾಹೇಬ ಮತ್ತು ಮುಂಡರಗಿಯ ಭೀಮರಾವ ಮೊದಲಾದವರು ಇಲ್ಲಿನ ಜನಪದಗಳಲ್ಲಿ ಇಂದಿಗೂ ಜೀವಂತವಾಗಿದ್ದು ಜನತೆಯ ಸ್ಫೂರ್ತಿಯ ನೆಲೆಗಳಾಗಿದ್ದಾರೆ.

ಅದೇ ರೀತಿ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯ ಚಳುವಳಿಗಳಲ್ಲೂ ಮುಂಬಯಿ ಕರ್ನಾಟಕವು ಕರ್ನಾಟಕದ ಉಳಿದ ಎಲ್ಲಾ ಪ್ರದೇಶಗಳಿಗಿಂತಲೂ ಹೆಚ್ಚು ವ್ಯಾಪಕವಾಗಿ ಪಾಲುಗೊಂಡಿತ್ತು. 1930 ರ ಕರ ನಿರಾರಣೆಯ ಚಳುವಳಿಯಲ್ಲಿ ಉತ್ತರ ಕನ್ನಡ ಹಾಗೂ ಧಾರವಾಡ ಜಿಲ್ಲೆಗಳ ಸಾಮಾನ್ಯ ರೈತರು, ಮಹಿಳೆಯರು ಧೀರೋದಾತ್ತ ಹೋರಾಟ ಮಾಡಿದ್ದಾರೆ. ಮೈಲಾರ ಮಹದೇವಪ್ಪನವರಂತಹ ಹುತಾತ್ಮರು ಈ ಭಾಗದಲ್ಲಿ ಸಾಮಾನ್ಯ ರೈತರ ವೀರ ಹೋರಾಟಕ್ಕೆ ಸಾಕ್ಷಿಯಾಗಿದ್ದಾರೆ.

ಹೊಸ ಕರ್ನಾಟಕ (ಅಂದು ಮೈಸೂರು) ರಾಜ್ಯರಚನೆಯಾದ ನಂತರ ಮುಂಬೈ ಕರ್ನಾಟಕವು ರಾಜ್ಯಕ್ಕೆ ಮುಖ್ಯಮಂತ್ರಿಗಳನ್ನು ನೀಡಿದೆ ಮತ್ತು ಎಸ್.ಆರ್.ಕಂಠಿ ಈ ಜಿಲ್ಲೆಯವರು. ಒಮ್ಮೆ ಎಸ್.ನಿಜಲಿಂಗಪ್ಪನವರೂ ಇದೇ ಜಿಲ್ಲೆಯಿಂದ ಆಯ್ಕೆಯಾಗಿದ್ದರು. ಎಸ್.ಆರ್.ಬೊಮ್ಮಾಯಿ ಧಾರವಾಡ ಜಿಲ್ಲೆ, ರಾಮಕೃಷ್ಣಹೆಗಡೆಯವರು ಒಮ್ಮೆ ಈ ಜಿಲ್ಲೆಯಿಂದ ಆಯ್ಕೆಯಾಗಿದ್ದರು. ಮೂಲತಃ ಉತ್ತರ ಕನ್ನಡ ಜಿಲ್ಲೆಯು ಅನೇಕ ಸ್ವಾತಂತ್ರ್ಯ ಹೋರಾಟಗಾರರಿಗೆ, ರಾಜ್ಯ ಏಕೀಕರಣ ಚಳುವಳಿಗೆ ನೆಲೆಯನ್ನು, ರಾಜ್ಯಕ್ಕೆ ಅನೇಕ ಮುಖ್ಯ ಆಡಳಿತಗಾರರನ್ನು ನೀಡಿದೆ. ಆದರೆ ಉತ್ತರ ಕರ್ನಾಟಕವು ನಾಲ್ಕು ದಶಕಗಳ ನಂತರದಲ್ಲೂ



ಎಸ್. ನಿಜಲಿಂಗಪ್ಪ　　ರಾಮಕೃಷ್ಣ ಹೆಗಡೆ　　ಬಿ. ಡಿ. ಜತ್ತಿ

ಅಭಿವೃದ್ಧಿಯಾಗದೆ ಹಿಂದುಳಿಯಲು ಕಾರಣಗಳೇನು?

ಅಭಿವೃದ್ಧಿ ಏಕಾಗಲಿಲ್ಲ?

ಕರ್ನಾಟಕದ ಅಭಿವೃದ್ಧಿಯಾಗದಿರುವುದಕ್ಕೆ ದಕ್ಷಿಣ ಕರ್ನಾಟಕದವರು ಕಾರಣ ಎನ್ನುವಂತೆ ಪ್ರಚಾರ ನಡೆದಿರುವ ಸಂದರ್ಭದಲ್ಲಿ ಈ ಭಾಗದಿಂದ ಅನೇಕ ಮುಖ್ಯಮಂತ್ರಿಗಳು, ಮಂತ್ರಿ ಮಾನ್ಯರು ಈ ಪ್ರದೇಶದ ಬಗ್ಗೆ ಏನು ಮಾಡಿದರು ಎಂಬ ಪ್ರಶ್ನೆ ಏಳುತ್ತದೆ.

ಮುಂಬೈ ಪ್ರಾಂತ್ಯಕ್ಕೆ ಸೇರಿದ ಧಾರವಾಡ, ಕಾರವಾರ, ಬೆಳಗಾಂವ ಮತ್ತು ವಿಜಾಪುರ ಜಿಲ್ಲೆಗಳು ಮುಂಬೈ ಪ್ರಾಂತ್ಯದಲ್ಲೇ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಜಿಲ್ಲೆಗಳಾಗಿದ್ದವು. ದಕ್ಷಿಣ ಕರ್ನಾಟಕದ ಜಿಲ್ಲೆಗಳು ಸ್ವಾತಂತ್ರ್ಯ ಬರುವ ಕಾಲಕ್ಕೆ ಮುಂದುವರೆದ ಪ್ರದೇಶವೆಂದೇ ಗುರುತಿಸಲ್ಪಟ್ಟಿತ್ತು.

ಒಂದು ಪ್ರದೇಶದ ಅಭಿವೃದ್ಧಿಯನ್ನು ಅಳೆಯಲು ಆ ಪ್ರದೇಶದ ಜನತೆಯ ತಲಾ ಆದಾಯ ಒಂದು ಅಳತೆಗೋಲಾಗಬಹುದು. ಮೇಲಿನ ಅಂಶಗಳಿಂದ ಮುಂಬೈ ಕರ್ನಾಟಕ ತಲಾ ಆದಾಯ ಹೈದರಾಬಾದ್ ಕರ್ನಾಟಕದ ತಲಾ ಆದಾಯಕ್ಕಿಂತ ಹೆಚ್ಚು. ಆದರೆ ಹಳೆಯ ಮೈಸೂರು ಪ್ರದೇಶದ ಆದಾಯಕ್ಕೆ ಹೋಲಿಸಿದಾಗ ಕಮ್ಮಿ.

ಭೂಸುಧಾರಣೆಯ ಪ್ರಶ್ನೆ


ಜನತೆಯ ಆದಾಯ ಎಷ್ಟು ವೇಗವಾಗಿ ಹೆಚ್ಚಾಗುತ್ತದೋ ಅಷ್ಟು ವೇಗವಾಗಿ ಆ ಪ್ರದೇಶದ ಅಭಿವೃದ್ಧಿ ಎನ್ನಬಹುದು. ಆದಾಯವು ಉದ್ಯೋಗದ ಅವಕಾಶವನ್ನು ಅವಲಂಬಿಸಿದೆ. ಹೆಚ್ಚೆಚ್ಚು ಉದ್ಯೋಗದ ಅವಕಾಶಗಳು ಸೃಷ್ಟಿಯಾದಂತೆ ಆದಾಯ ಹೆಚ್ಚಾಗುತ್ತದೆ. ಭೂಸುಧಾರಣೆಯಂತಹ ಕ್ರಮಗಳಿಂದ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತವೆ. ಜನರ ಆದಾಯ ಹೆಚ್ಚಾಗುತ್ತದೆ.

ಮುಂಬೈ ಕರ್ನಾಟಕ ಪ್ರದೇಶ ಹಿಂದುಳಿಯಲು ಇಲ್ಲಿ ಭೂಸುಧಾರಣಾ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಾಗದಿರುವುದು ಒಂದು ಪ್ರಮುಖ ಕಾರಣವಾಗಿದೆ. ಭೂಮಾಲಿಕ ಹಿತಾಸಕ್ತಿಗಳು ಆಡಳಿತವನ್ನು ನಮ್ಮ ವಶದಲ್ಲಿಟ್ಟುಕೊಂಡದ್ದರಿಂದ ಇಲ್ಲಿಯ ದೇಸಾಯಿ, ದೇಶಮುಖ, ಇನಾಂದಾರ, ಜಾಗೀರ್‌ದಾರರ ಹೆಚ್ಚುವರಿ ಜಮೀನು ಭೂಹೀನ ಗೇಣಿದಾರರಿಗೆ ಲಭಿಸಲಿಲ್ಲ. ಭೂಸುಧಾರಣಾ ಕಾಯ್ದೆ ಜಾರಿಗೆ ಬರುತ್ತದೆ ಎಂದು ಗೊತ್ತಾದ ತಕ್ಷಣವೇ ಕಾರ್ಯಪ್ರವರ್ತಕರಾದ ಈ ಭೂಮಾಲೀಕರು ತಮ್ಮ ಸ್ವಾಧೀನದಲ್ಲಿದ್ದ ಸಾವಿರಾರು ಎಕರೆ ಭೂಮಿಯ ದಾಖಲೆಗಳನ್ನು ಬದಲಾಯಿಸಿ ತಮ್ಮ ಕುಟುಂಬದ ಸದಸ್ಯರೊಳಗೆ ಮಾತ್ರವಲ್ಲ ಮನೆ ಆಳುಗಳ ಹೆಸರುಗಳಲ್ಲಿ ಸಹ ಭೂಹಿಡುವಳಿಯನ್ನು ದಾಖಲಿಸಿಕೊಂಡು ಭೂಸುಧಾರಣಾ ಕಾಯ್ದೆ ತಮಗೆ ಅನ್ವಯವಾಗದಂತೆ ನೋಡಿಕೊಂಡರು. ಹೀಗಾಗಿ ಬೆಳಗಾವಿಯ ವಿ.ಎಲ್.ಪಾಟೀಲ್, ಸವದತ್ತಿಯ ತಲ್ಲೂರ್ ದೇಸಾಯಿ ಬೈಲಹೊಂಗಲದ ಇನಾಂದಾರ ಮನೆತನದವರು ಸಾವಿರಾರು ಎಕರೆ ಭೂಮಿಯನ್ನು ಕಾನೂನಿನ ಕಣ್ಣು ತಪ್ಪಿಸಿ ಉಳಿಸಿಕೊಳ್ಳಲು ಸಾಧ್ಯವಾಯಿತು. ಮುಂಬೈ ಕರ್ನಾಟಕದ ಧಾರವಾಡ, ಬೆಳಗಾಂವ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಇಂತಹ ಅನೇಕ ಪ್ರಕರಣಗಳನ್ನು ಕಾಣಬಹುದು.

ಭೂಮಾಲಿಕ ಪದ್ಧತಿಯು ಅತ್ಯಂತ ಪ್ರತಿಗಾಮಿ ಉತ್ಪಾದನಾ ಪದ್ಧತಿಯಾಗಿರುವುದರಿಂದಲೇ ಭೂಮಾಲಿಕ ಪದ್ಧತಿಯ ರದ್ಧತಿ ಹಾಗೂ ಉಳುವವನೇ ಹೊಲದೊಡೆಯ ಎಂಬ ಘೋಷಣೆಗಳು ಸ್ವಾತಂತ್ರ್ಯ ಆಂದೋಲನದ ಆಶಯಗಳಾಗಿಯೇ ಬೆಳೆದು ಬಂದಿದ್ದವು. ಪುರೋಗಾಮಿ ಭೂಸುಧಾರಣೆಗಳನ್ನು ಜಾರಿಗೆ ತರಲಾದ ಕೇರಳ, ಪಶ್ಚಿಮ ಬಂಗಾಳದಂತಹ ರಾಜ್ಯಗಳ ಗ್ರಾಮೀಣ ಚಿತ್ರ ತುಂಬ ಭಿನ್ನವಾಗಿದೆ. ಭೂಮಿಯ ಒಡೆತನವು ಕೆಲವೇ ಕೆಲವು ಭೂಮಾಲಿಕರ ಕೈಯಿಂದ ಸಾವಿರಾರು ಉಳುವವರ ಕೈಗೆ ಬಂದಾಗ ಕೃಷಿ ಉತ್ಪಾದನೆ ಹೆಚ್ಚಾಗುತ್ತದೆ. ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಕಾರಣವಾಗುತ್ತದೆ. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಹೆಚ್ಚೆಚ್ಚು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುತ್ತದೆ, ಗ್ರಾಮೀಣ ಜನತೆಯ ಕೊಂಡುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಬಹುಮುಖ ಅಭಿವೃದ್ಧಿಗೆ ನಾಂದಿಯಾಗುತ್ತದೆ. **ಕರ್ನಾಟಕದ ಏಕೀಕರಣದ ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಕ್ರಾಂತಿಕಾರಿ ಭೂಸುಧಾರಣೆಗಳನ್ನು ಜಾರಿಗೆ ತರಲು ವಿಫಲವಾಗಿರುವುದರಿಂದ ಜಾರಿಗೆ ತರಲು ವಿಫಲವಾಗಿರುವುದರಿಂದ ಮುಂಬೈ ಕರ್ನಾಟಕದಂತಹ ಪ್ರದೇಶಗಳು ಹಿಂದುಳಿಯುವಂತಾಗಿದೆ.**

ವಿಜಾಪುರ ಜಿಲ್ಲೆಯಲ್ಲಿ

ಭೂಸುಧಾರಣೆಗಳ ಮೂಲಕ ಭೂಹೀನರಿಗೆ ಭೂಮಿಯನ್ನು ನೀಡಿದ ತಕ್ಷಣ ತನ್ನಷ್ಟಕ್ಕೆ ತಾನೇ ಅವರ ಅಭಿವೃದ್ಧಿಯಾಗುವುದಿಲ್ಲ. ಭೂಮಿಯಿಂದ ಉತ್ಪಾದನೆ ಸಾಧ್ಯವಾದರೆ ಮಾತ್ರ ರೈತನ ಪರಿಸ್ಥಿತಿ ಬದಲಾಗುತ್ತದೆ. ಭಾರತದಲ್ಲಿ ಇಂದಿಗೂ ಕೃಷಿ ಉತ್ಪಾದನೆ ಮಳೆಯೊಂದಿಗಿನ ಜೂಜಾಟವಾಗಿಯೇ ಉಳಿದಿವೆ. ಹೀಗಾಗಿ ಕೃಷಿಗೆ ಸಾಕಷ್ಟು ಭೂಮಿ ಲಭ್ಯವಿದ್ದರೂ ವಿಜಾಪುರ ಜಿಲ್ಲೆಯು ಇಂದಿಗೂ ಒಂದು ಹಿಂದುಳಿದ ಜಿಲ್ಲೆಯಾಗಿ ಉಳಿದುಕೊಂಡಿದೆ.



ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುವ ಈ ಜಿಲ್ಲೆ ಮುಂಬೈ ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಸಹಜವಾಗಿಯೇ ಹೆಚ್ಚು ಹಿಂದುಳಿದಿದೆ.

ದೋಣಿ ಎಂಬುದು ವಿಜಾಪುರ ಜಿಲ್ಲೆಯಲ್ಲಿ ಹರಿಯುವ ಒಂದು ಹಳ್ಳ. **'ದೋಣಿ ತುಂಬಿ ಹರಿದರೆ ಓಣಿ ತುಂಬ ಜೋಳ'** ಎಂಬ ಗಾದೆಯ ಮಾತು ತುಂಬ ಅರ್ಥಗರ್ಭಿತವಾಗಿದೆ. ಜೋಳ ಮುಂಬೈ ಕರ್ನಾಟಕದ ಮುಖ್ಯ ಆಹಾರಧಾನ್ಯ. ಸಕಾಲಕ್ಕೆ ಸಾಕಷ್ಟು ಮಳೆಯಾದರೆ ಎರಡು ಮೂರು ವರ್ಷಗಳಿಗಾಗುವಷ್ಟು ಜೋಳವನ್ನು ಬೆಳೆಯುತ್ತಾರೆ ಇಲ್ಲಿನ ರೈತರು. ಅದು ಇಲ್ಲಿಯ ಮಣ್ಣಿನ


ವೈಶಿಷ್ಟತೆ. ಆದರೆ ಮಳೆಯ ಅನಿಶ್ಚಿತತೆಯಿಂದಾಗಿ ಫಲವತ್ತಾದ ಭೂಮಿ ಬೀಳು ಬಿದ್ದಿರುತ್ತದೆ.



ಅನಿಶ್ಚಿತ ಮಳೆಯ ಬಗ್ಗೆ ಕೊರಗುವುದಕ್ಕಿಂತ ಇಲ್ಲಿ ಹರಿಯುವ ನದಿಗಳಲ್ಲಿ ವ್ಯರ್ಥವಾಗಿ ಹರಿದುಹೋಗುವ ನೀರನ್ನು ಕೃಷಿಗೆ ಬಳಸಿಕೊಳ್ಳಬಹುದು. ಒಂದೆಡೆ ಒಣ ಬೇಸಾಯ ಪದ್ಧತಿಯಲ್ಲಿ ಹೆಚ್ಚಿನ ತಂತ್ರಜ್ಞಾನವನ್ನು ಉಪಯೋಗಿಸಿ ಬೇಸಾಯವು ಲಾಭದಾಯಕವಾಗುವಂತೆ ಕ್ರಮ ಕೈಗೊಳ್ಳಬೇಕು. ಇನ್ನೊಂದೆಡೆ ಬೇಸಾಯಕ್ಕೆ ಮಳೆಯ ಮೇಲಿನ ಅವಲಂಬನೆಯನ್ನು ತಪ್ಪಿಸಲು ಲಭ್ಯ ಇರುವ ಜಲಸಂಪನ್ಮೂಲಗಳನ್ನು ಬಳಸಿಕೊಳ್ಳುವಂತಾಗಬೇಕು. ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದ ಧೋರಣೆ ಹಾಗೂ ಅದು ನೀಡುವ ಆದ್ಯತೆ ಇಲ್ಲಿ ಮುಖ್ಯವಾಗುತ್ತದೆ.

ಒಣಭೂಮಿಗೆ ಇಲ್ಲದ ನೀರು

ಕೃಷ್ಣಾ ಮತ್ತು ಅದರ ಮುಖ್ಯ ಉಪನದಿಗಳಾದ ಭೀಮಾ, ಘಟಪ್ರಭಾ, ಮಲಪ್ರಭಾ, ತುಂಗಭದ್ರಾ ಮತ್ತು ವೇದಾವತಿ ಉತ್ತರ ಕರ್ನಾಟಕದ ಜೀವನದಿಗಳಾಗಿವೆ. ಬಹುಕಾಲದಿಂದ ಕೃಷ್ಣ ಕಣಿವೆಯ ಯೋಜನೆಗಳು ಕುಂಟುತ್ತಾ ಸಾಗಿರುವುದರಿಂದ ಈ ಪ್ರದೇಶದ ಬೆಳವಣಿಗೆಯೂ ಕುಂಠಿತವಾಗಿದೆ. ಯೋಜನೆಗಳನ್ನು ಪೂರ್ಣಗೊಳಿಸಿದರೆ 30 ದಶಲಕ್ಷ ಹೆಕ್ಟೇರ್ ಭೂಮಿಗೆ ನೀರು ದೊರೆಯಲಿದೆ. ಆದರೆ ಈವರೆಗೆ ಕೇವಲ 7 ದಶಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರು ದೊರಕುವಂತಾಗಿದೆ. ಬಚಾವತ್ ಆಯೋಗ ಕೃಷ್ಣ ನದಿಯಲ್ಲಿ ಕರ್ನಾಟಕದ ನೀರಿನ ಪಾಲು 734 ಟಿ.ಎಂ.ಸಿ. ಎಂದು ತೀರ್ಪು ನೀಡಿದೆ. ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಕೃಷ್ಣ ಕಣಿವೆಯ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಈಗಾಗಲೇ ಪೂರ್ಣಗೊಳಿಸಿರುವ ಯೋಜನೆಗಳಲ್ಲಿ ನಮಗೆ 362 ಟಿ.ಎಂ.ಸಿ. ನೀರನ್ನು ಮಾತ್ರ ಒದಗಿಸಲಾಗಿದ್ದರೂ ನಾವು ಈವರೆಗೆ ಕೇವಲ 210 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಂಡಿದ್ದೇವೆ. ಇನ್ನು ಬಾಕಿ ಇರುವ 150 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅಚ್ಚುಕಟ್ಟು ಪ್ರದೇಶಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಬೆಳಗಾಂವ ಮತ್ತು ವಿಜಾಪುರ ಜಿಲ್ಲೆಗಳ ಸುಮಾರು 3 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಉಣಿಸುವ ಘಟಪ್ರಭಾ ನೀರಾವರಿ ಯೋಜನೆಯನ್ನು 1949 ರಲ್ಲಿ ಅಂದಿನ ಮುಂಬೈ ಸರ್ಕಾರವೇ ಆರಂಭಿಸಿದ್ದರೂ ಇಲ್ಲಿಯವರೆಗೆ ಒಂದು ನಾಲ್ಕಂಶದಷ್ಟು ಅಚ್ಚುಕಟ್ಟು ಪ್ರದೇಶ ಮಾತ್ರ ಅಭಿವೃದ್ಧಿಯಾಗಿದೆ. ಬೆಳಗಾಂವ ಜಿಲ್ಲೆಯ ಸವದತ್ತಿ, ಬೈಲಹೊಂಗಲ ಮತ್ತು ರಾಮದುರ್ಗ, ಧಾರವಾಡ ಜಿಲ್ಲೆಯ ಗದಗ, ಹುಬ್ಬಳ್ಳಿ, ನರಗುಂದ, ನವಲಗುಂದ ಮತ್ತು ರೋಣ್ ಹಾಗೂ ಬಿಜಾಪುರ ಜಿಲ್ಲೆಯ ಬಾದಾಮಿ



ತಾಲ್ಲೂಕುಗಳ ಸುಮಾರು 2 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಮಲಪ್ರಭಾ ನದಿಗೆ ನವಿಲು ತೀರ್ಥದ ಬಳಿ ಅಣೆಕಟ್ಟನ್ನು ಕಟ್ಟಲಾಗಿದ್ದರೂ, ಮಹಾದಾಯಿಯೋಜನೆ ಪೂರ್ಣಗೊಳ್ಳದೇ ಈ ಯೋಜನೆಯು ಪೂರ್ಣ ಪ್ರಯೋಜನ ಪಡೆಯಲಾಗದು. ಸುಮಾರು 60 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಅಥಣಿ ತಾಲೂಕಿನ ಹಿಪ್ಪರಗಿ ಬ್ಯಾರೇಜ್ ಕೆಲಸ ಇನ್ನೂ ಆರಂಭಿಕ ಹಂತದಲ್ಲಿಯೇ ಇದೆ. ಸುಮಾರು 2 ಲಕ್ಷ ಎಕರೆ ಭೂಮಿಗೆ ನೀರುಣಿಸುವ ತುಂಗಾ ಮೇಲ್ದಂಡೆ ಯೋಜನೆ ತೀರಾ ಆಮೆಗತಿಯಲ್ಲಿ ಸಾಗಿದೆ. ಬರಪೀಡಿತ ವಿಜಾಪುರ ಜಿಲ್ಲೆಗೆ ವರದಾನವಾಗಬಲ್ಲ ಮುಳವಾಡ ಯಾತ ನೀರಾವರಿ ಯೋಜನೆಯ ಕೆಲಸ ಅತ್ಯಂತ ಮಂದಗತಿಯಲ್ಲಿ ಸಾಗುತ್ತಿದ್ದು ರೈತರ ತೀವ್ರ ಅಸಮಾಧಾನಕ್ಕೆ ಕಾರಣವಾಗಿವೆ. ಒಟ್ಟಾರೆಯಾಗಿ ಕೃಷ್ಣ ಕಣಿವೆಯ ಯೋಜನೆಗಳೆಲ್ಲ ಪೂರ್ಣಗೊಂಡರೆ ಇಲ್ಲಿನ ಪ್ರಾದೇಶಿಕ ಅಸಮಾನತೆಯು ಬಹುತೇಕವಾಗಿ ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ.

ಉತ್ತರಕನ್ನಡ ಜಿಲ್ಲೆ

ಭೂಸುಧಾರಣೆ ಹಾಗೂ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಸಹಜವಾಗಿ ಕೃಷಿ ಉತ್ಪಾದನೆ ಹೆಚ್ಚಾಗಿ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಕಾರಣವಾಗುತ್ತದೆ. ಕೈಗಾರಿಕೆಗಳ ಬೆಳವಣಿಗೆಗೆ ವಿದ್ಯುಚ್ಛಕ್ತಿಯ ಲಭ್ಯತೆ ಮುಖ್ಯವಾಗಿದೆ. ಉತ್ತರಕನ್ನಡ ಜಿಲ್ಲೆಯ ಕಾಳಿನದಿ ಜಲ ವಿದ್ಯುತ್ ಯೋಜನೆಯು ಪೂರ್ಣಗೊಂಡಾಗ ಶರಾವತಿ ಜಲವಿದ್ಯುತ್ ಯೋಜನೆಯಿಂದ ದೊರೆಯುವ ವಿದ್ಯುಚ್ಛಕ್ತಿಗಿಂತ ಒಂದುವರೆ ಪಟ್ಟು ಹೆಚ್ಚು ವಿದ್ಯುತ್ ಲಭ್ಯವಾಗಲಿದೆ. ಇದಲ್ಲದೆ ಇಲ್ಲಿಯ ಕೈಗಾ ಅಣು ವಿದ್ಯುತ್ ಕೇಂದ್ರವು ಪೂರ್ಣಗೊಂಡಾಗ ಅದರ ಎರಡು ಘಟಕಗಳಲ್ಲಿ ಒಂದೊಂದರಿಂದ 220 ಮೆಗಾವಾಟ್ಸ್ ವಿದ್ಯುತ್ ದೊರೆಯಲಿದೆ.

ಕೈಗಾ, ಕಾಳಿ, ಕೊಂಕಣ ರೈಲ್ವೆ ಇತ್ಯಾದಿ ಬೃಹತ್ ಯೋಜನೆಗಳು ಈಗ ಮುಕ್ತಾಯದ ಹಂತ ತಲುಪಿದ್ದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ದುಡಿಯುವ ಕೈಗಳಿಗೆ ಕೆಲಸ ನೀಡುವ ದೊಡ್ಡ ಉದ್ದಿಮೆಗಳು ಇನ್ನೂ ತಲೆ ಎತ್ತುತ್ತಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಉದಾರೀಕರಣದ ಆರ್ಥಿಕ ನೀತಿಯನ್ನು ಅನುಸರಿಸಲಾರಂಭಿಸಿದ ಪ್ರಯುಕ್ತ ಜಿಲ್ಲೆಯಲ್ಲಿ ಇದುವರೆಗೂ ಇದ್ದ ಕೈಗಾರಿಕೆಗಳು ರೋಗಗ್ರಸ್ತವಾಗುತ್ತಿದ್ದು ಬಹುತೇಕ ಸಣ್ಣ ಕೈಗಾರಿಕೆಗಳು ಮುಚ್ಚಿಹೋಗಿವೆ. ಹೆಂಚು ತಯಾರಿಸುವ ಕಾರ್ಖಾನೆಗಳು ಬಿಕ್ಕಟ್ಟಿನಲ್ಲಿವೆ. ಕೇಂದ್ರ ಸರ್ಕಾರದ ತಪ್ಪು ಆಮದು ನೀತಿಯಿಂದಾಗಿ ದಾಂಡೇಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಮಾರುಕಟ್ಟೆ ಸಮಸ್ಯೆಯನ್ನು ಎದುರಿಸಲಾರಂಭಿಸಿದೆ. ಇಂಡಿಯನ್ ಪ್ಲೈಯ್‌ವುಡ್

ಕಾರ್ಖಾನೆಯು ದಾಂಡೇಲಿ ಮತ್ತು ಧಾರವಾಡ ಘಟಕಗಳು ಮುಚ್ಚಿಕೊಂಡಿದ್ದು ನೂರಾರು ಕಾರ್ಮಿಕರು ಬೀದಿಪಾಲಾಗಿದ್ದಾರೆ. ಕಾರವಾರದ ಕಾಸ್ಟಿಕ್ ಸೋಡಾ ಕಾರ್ಖಾನೆಯಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ. ದಾಂಡೇಲಿಯ ಫೆರೊ ಆಲಾಯ್ಸ್ ಉತ್ಪಾದನೆಯನ್ನು ನಿಲ್ಲಿಸಿದೆ. ಸೀಬರ್ಡ್ ನೌಕಾನೆಲೆಯ ಸ್ಥಾಪನೆಯಿಂದಾಗಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಅವಕಾಶವಿರುವ ಸುಂದರ ಬೀಚುಗಳು ಇಲ್ಲವಾಗಿವೆ. ಮಾತ್ರವಲ್ಲ ಕಾರವಾರ ಬಂದರು ಅಭಿವೃದ್ಧಿ ಕುಂಠಿತವಾಗಿದೆ. ಸಾವಿರಾರು ಮೀನುಗಾರರು ಉದ್ಯೋಗ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ.


ಧಾರವಾಡ ಜಿಲ್ಲೆಯಲ್ಲಿ

ಹುಬ್ಬಳ್ಳಿ ಧಾರವಾಡ ಮಹಾನಗರ ಪ್ರದೇಶವು ಜಿಲ್ಲೆಯ ಕೈಗಾರಿಕಾ ಕ್ರಾಂತಿಗೆ ಕಾದು ಕುಳಿತಿತ್ತು. ಆದರೆ ಇಲ್ಲಿನ ಕೈಗಾರಿಕಾ ಘಟಕಗಳು ಒಂದೊಂದರಂತೆ ಬಾಗಿಲು ಮುಚ್ಚುವುದನ್ನು ಗಮನಿಸಿದರೆ ಇಲ್ಲೊಂದು ಕೈಗಾರಿಕಾ ಮರುಭೂಮಿ ನಿರ್ಮಾಣವಾಗುವ ಭೀತಿಉಂಟಾಗುತ್ತದೆ. ನೂರು ವರ್ಷ ಹಳೆಯದಾದ ಮಹದೇವ ಟೆಕ್ಸ್‌ಟೈಲ್ಸ್ ಸರ್ಕಾರ ಕೈಯಲ್ಲಿ ಕೊನೆಯುಸಿರೆಳೆಯುತ್ತಿದೆ. ಸುಂದತ್ತಾ ಆಯಿಲ್ ಮಿಲ್ ಕಣ್ಣು ಮುಚ್ಚಿ ವರ್ಷಗಳೇ ಕಳೆದಿವೆ. ಸುಪ್ರಸಿದ್ಧ ಮೈಸೂರು ಕಿರ್ಲೋಸ್ಕರ್ ಕಂಪನಿಯು ಮುಚ್ಚಿದೆ. ಭಾರಿ ನಿರೀಕ್ಷೆಯೊಂದಿಗೆ ಉಗಮವಾದ ಬೇಲೂರು, ತಾರಿಹಾಳ ಮತ್ತು ಗೋಕುಲ್ ರೋಡ್ ಕೈಗಾರಿಕಾ ಕ್ಷೇತ್ರಗಳಲ್ಲಿ ಕೈಗಾರಿಕಾ ಘಟಕಗಳು ಸ್ಥಾಪನೆಯಾಗದೆ, ಸ್ಥಾಪನೆಯಾದ ಕೆಲವೆ ಕೆಲವು ಘಟಕಗಳು ಬಾಗಿಲು ಮುಚ್ಚಿಕೊಂಡು ಬಿಕೋ ಎನ್ನುತ್ತಿವೆ. ಒಂದು ಶತಮಾನಕ್ಕೂ ಹೆಚ್ಚು ಹಳೆಯದಾದ ಹುಬ್ಬಳ್ಳಿಯ ರೈಲ್ವೆ ವರ್ಕಶಾಪ್ ಇಲ್ಲಿಯ ಜನರ ಚಳುವಳಿಯಿಂದಾಗಿ ಉಳಿದುಕೊಂಡಿದೆಯಾದರೂ ಸಾವಿರಾರು ಕಾರ್ಮಿಕರಿಗೆ ಕೆಲಸ ಒದಗಿಸುತ್ತಿದ್ದ ಈ ಕಾರ್ಖಾನೆಯಲ್ಲಿ ಈಗ ಕೆಲವು ನೂರು ಕಾರ್ಮಿಕರಿಗೆ ಮಾತ್ರ ಕೆಲಸ ನೀಡಲಾಗುತ್ತಿದೆ.

ಸುಮಾರು ಒಂದು ದಶಕದ ಹಿಂದೆಯೇ ಧಾರವಾಡದಲ್ಲಿ ಟಾಟಾ ಸಂಸ್ಥೆ ಕಾರು ಉತ್ಪಾದನಾ ಘಟಕ ಸ್ಥಾಪನೆ ಮಾಡುತ್ತದೆ ಎಂಬ ವದಂತಿ ಇತ್ತು. ಸುಮಾರು 1500 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆಯಾಗಲಿದ್ದ ಈ ಘಟಕವು ಸುಮಾರು 50 ಸಾವಿರ ಜನರಿಗೆ ಉದ್ಯೋಗದ ಅವಕಾಶಗಳನ್ನು ನೀಡುತ್ತದೆ ಎನ್ನಲಾಗಿತ್ತು. ರಾಜಕೀಯ ಕಾರಣಗಳಿಗಾಗಿ ಟಾಟಾ ಕಾರು ಘಟಕ ಕರ್ನಾಟಕದ ಕೈ ತಪ್ಪಿ ಹೋಯಿತು ಎಂದು ಹೇಳಲಾಗುತ್ತದೆ. ಕಾರು ಉತ್ಪಾದನೆ ಇಂದು ಎದುರಿಸುತ್ತಿರುವ ಬಿಕ್ಕಟ್ಟು ಸಹ ಕಾರಣವಾಗಿರಬಹುದು. ಇದಾದ ನಂತರ ಟಾಟಾ ಸಂಸ್ಥೆಯ ಎಸ್ಕಲೇಟರ್ ಘಟಕವೊಂದನ್ನು ಧಾರವಾಡದ ಬೇಲೂರಿನಲ್ಲಿ ಸ್ಥಾಪಿಸಲಾಗುತ್ತದೆ ಎಂದು ಸುದ್ದಿಯಾಯಿತು. ರಾಜ್ಯ ಸರ್ಕಾರ ಬೇಲೂರ ಕೈಗಾರಿಕಾ ಕ್ಷೇತ್ರದಲ್ಲಿ 600 ಎಕರೆ ಭೂಮಿಯನ್ನು ಒದಗಿಸಿತು. ಆದರೆ ಇಲ್ಲಿಯವರೆಗೆ ಈ ಘಟಕ ತನ್ನ ಕಾರ್ಯವನ್ನು ಆರಂಭಿಸಿಲ್ಲ.

ಬೆಳಗಾಂವಿ ಜಿಲ್ಲೆಯಲ್ಲಿ

ಬೆಳಗಾಂವ ರಾಜ್ಯದ ಕೈಗಾರಿಕಾ ನಕ್ಷೆಯಲ್ಲಿ ಹೆಚ್ಚೆಚ್ಚು ಪ್ರಾಮುಖ್ಯತೆ ಪಡೆಯಲಿದೆ ಎಂಬ ನಿರೀಕ್ಷೆ ಇತ್ತು. ಆದರೆ ಬರಬರುತ್ತಾ ನಿರೀಕ್ಷೆ




ಹುಸಿಯಾಗುತ್ತಿದೆ. ಲಾರಿ ಮತ್ತು ಬಸ್ ಬಾಡಿಗಳ ಬಿಲ್ಡಿಂಗ್‌ಗೆ ಇಡೀ ದಕ್ಷಿಣ ಭಾರತದಲ್ಲಿಯೇ ಹೆಸರಾಗಿರುವ ಬೆಳಗಾಂವ, ಕಾಸ್ಟಿಂಗ್, ಮಷಿನಿಂಗ್ ಹೈಡ್ರಾಲಿಕ್ಸ್, ಫೌಂಡ್ರಿ ಕೈಗಾರಿಕೆಗಳಿಗೂ ಹೆಸರುವಾಸಿಯಾಗಿದೆ. ರಾಜ್ಯದಲ್ಲಿಯೇ ಅತಿಹೆಚ್ಚು ಕಬ್ಬು ಬೆಳೆಯುತ್ತಿರುವ ಈ ಜಿಲ್ಲೆಯಲ್ಲಿ ಹಲವಾರು ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಇಂಡಿಯನ್ ಎಲ್ಯುಮಿನಿಯಂ ಎಂಬ ಬಹುರಾಷ್ಟ್ರೀಯ ಕಂಪನಿ. ಗೋಗಟೆ ಟೆಕ್ಸ್‌ಟೈಲ್ಸ್ ಎಂಬ ಖಾಸಗಿ ಜವಳಿ ಗಿರಣಿ, ಹಿಂದುಸ್ತಾನ್ ಲೆಟೆಕ್ಸ್ ಎಂಬ ಸಾರ್ವಜನಿಕ ರಂಗದ ಕಾರ್ಖಾನೆ ಸಾಕಷ್ಟು ಹಳೆಯ ಬೃಹತ್ ಕೈಗಾರಿಕೆಗಳಾಗಿವೆ. ಆದರೆ ಬೆಳಗಾಂವ ಜಿಲ್ಲೆಗೆ ಯಾವ ಹೊಸ ಕೈಗಾರಿಕೆಗಳು ಬರುತ್ತಿಲ್ಲ. ಅಸಂಘಟಿತ ವಲಯದಲ್ಲಿ ಸಾವಿರಾರು ಜನರಿಗೆ ಉದ್ಯೋಗ ಒದಗಿಸುತ್ತಿದ್ದ ಬೆಳಗಾಂವಿಯ ವಿದ್ಯುತ್ ಮಗ್ಗಗಳ ಕೈಗಾರಿಕೆ ಬಿಕ್ಕಟ್ಟನ್ನು ಎದುರಿಸುತ್ತಿದೆ. ಸಹಕಾರಿ ಕ್ಷೇತ್ರದಲ್ಲಿ ಭಾರಿ ಮಹತ್ವಾಕಾಂಕ್ಷೆಯೊಂದಿಗೆ ಇಲ್ಲಿ ಸ್ಥಾಪನೆಯಾಗಿದ್ದ ಬಾಳೇಕುಂದ್ರಿ ನೂಲಿನ ಗಿರಣಿ ಬಾಗಿಲು ಹಾಕಿ 3 ವರ್ಷಗಳಾಗಿವೆ.

ವಿಜಾಪುರ ಜಿಲ್ಲೆಯಲ್ಲಿ ಕೈಗಾರೀಕರಣದ ಗಾಳಿ ಬೀಸಲೇ ಇಲ್ಲ. ಬಿಜಾಪುರದಲ್ಲಿ ಮತ್ತು ಬಾಗಲಕೋಟೆಯಲ್ಲಿದ್ದ ನೂಲಿನ ಗಿರಣಿಗಳು ಬಾಗಿಲು ಹಾಕಿ ವರ್ಷಗಳಾಗಿವೆ. ಒಂದೆರೆಡು ಸಕ್ಕರೆ ಕಾರ್ಖಾನೆಗಳು, ಬಾಗಲಕೋಟೆಯ ಸಿಮೆಂಟ್ ಕಾರ್ಖಾನೆ ಸೀಮಿತ ಮಟ್ಟದಲ್ಲಿ ಮಾತ್ರ ಉದ್ಯೋಗವನ್ನು ಒದಗಿಸುತ್ತವೆ. ಜಿಲ್ಲೆಯಾದ್ಯಂತ ಹರಡಿರುವ ಪರಂಪರಾಗತ ಕೈಮಗ್ಗಗಳು ಮೂಲೆಗುಂಪಾಗುತ್ತಿವೆ. ಇಲ್ಲಿಯವರೆಗೆ ಲಾಭದಾಯಕವಾಗಿಯೇ ನಡೆಯುತ್ತಿದ್ದ ಬನಹಟ್ಟಿಯ ನೂಲಿನ ಗಿರಣಿ ಇಂದು ಕುಂಟತೊಡಗಿದೆ. ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಗಮನ ನೀಡಲಾಗಿಲ್ಲ ಎಂಬುದು ಇಲ್ಲಿ ಎದ್ದು ಕಾಣುವ ವಿಷಯವಾಗಿದೆ. ವಿಜಾಪುರಕ್ಕೆ ಸಂಪರ್ಕ ಕಲ್ಪಿಸುವ ಗದಗ ಸೊಲ್ಲಾಪುರ ರೈಲ್ವೆ ಮಾರ್ಗದ ಗೇಜ್ ಪರಿವರ್ತನೆ ನೆನೆಗುದಿಗೆ ಬಿದ್ದಿದೆ. ವಿಜಾಪುರದಲ್ಲಿ ಪ್ರಪಂಚದ ವಿಸ್ಮಯಗಳಲ್ಲಿ ಒಂದಾಗಿರುವ ಗೋಲ್‌ಗುಂಬಜ್ ಮೊದಲಾದ

ಕನಸಿನೊಳಗೊಂದು ಕಣಸು

'ಯಾರು ನಿಂದವರಲ್ಲಿ ತಾಯೆ!' ಎಂದೆ!
'ಯಾರು ಕೇಳುವರೆನಗೆ ಯಾಕೆ ತಂದೆ?'
'ಬೇಸರದ ದನಿಯೇಕೆ ಹೆಸರ ಹೇಳಲ್ಲ'
'ಹೆಸರಾಗಿಯೂ ಕೂಡ, ಹೇಳಹೆಸರಿಲ್ಲ'
'ನೀನಾರ ಮನೆಯವಳೊ ಮುತ್ತೈದೆ ಹೇಳು'
'ನಾನಾರ ಮನೆಯಳೊ ಬಯಲನ್ನೆ ಕೇಳು'
'ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೇ!'
'ಗುಪ್ತರಾದರೊ ಏನೋ ಇಷ್ಟರಲ್ಲೇ!'
'ಇರುವರೇ ಇದ್ದರೇ ಮಕ್ಕಳೆಂಬವರು?'
'ಇರುವರೆಂದರು ಕೂಡ ಯಾರ ನಂಬುವರು?'
'ಮನೆಯಿಲ್ಲವೇ ಇರಲು, ಪರದೇಶಿಯೇನು?'
'ಮನೆಯೆ ಮುನಿದೆದ್ದಿರಲು ಯಾ ದೇಶವೇನು?'
'ನಿನ್ನ ಮಾತಿನಲಿಹುದು ಒಡಪಿನಿಂದ'
'ನನ್ನ ಹತ್ತಿರದೊಂದೆ ಉಳಿದಿಹುದು ಕಂದ'
'ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು'
'ಸಾಜಮಾದರು ಪಕ್ಷವಿದು ವದ್ಯವಹುದು'
'ಯಾವುದಾದರು ನಾಡದೇವಿಯೇ ನೀನು?'
'ಭಾವುಕರ ಕಂಗಳಿಗೆ ದೇವಿಯೇ ನಾನು'
'ಈಗ ಬಂದಿಹುದೇಕೆ ಏನು ಬೆಸನ?'
'ಯೋಗವಿಲ್ಲದೆ ತಿಳಿಯದೆನ್ನ ವೆಸನ!'
'ಹಾದಿಯಾವುದು ಹೇಳು ಯಾವ ಯೋಗ?'
'ಆದಿ ಅಂತವು ಇಲ್ಲದಂಥ ತ್ಯಾಗ!'
'ಬೇಡ ಬಂದಿಹೆ ಏನು ಏನಾದರೊಂದು?'
'ಬೇಡಿದರೆ ಬೇಡಿದುದ ಕೊಡುವೆಯಾ ಇಂದು?'
'ಅಹುದು ಕೊಡುವೆನು ಎಂದು ನಾನೆನ್ನಬಹುದೇ?'
'ಬಹುದುಗಿಹುದಿನ ಶಂಕೆ ವೀರನಹುದೇ?'
'ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ'
'ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ'
'ಇಲ್ಲೆನ್ನಲಾರೆ ನಾನಹುದೆನ್ನಲಮ್ಮೆ'
'ಬಲ್ಲವರು ದೈವವನು ಪರಕಿಸುವರೊಮ್ಮೆ'
'ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?'
'ಗಂಡುಸಾದರೆ ನಿನ್ನ ಬಲಿಕೊಡುವೆಯೇನು?'
ಮನವು ನಡುಗಿತು ತನುವು ನವಿರಿಗೊಳಗಾಯ್ತು;
ನೆನವು ನುಗ್ಗಿತು-ಹೊರಗೆ ಕಂಡೆ-ಬೆಳಗಾಯ್ತು.



-ಅಂಬಿಕಾತನಯದತ್ತ(ದ.ರಾ.ಬೇಂದ್ರೆ)

ಐತಿಹಾಸಿಕ ಸ್ಮಾರಕಗಳಿವೆ. ಇಲ್ಲೊಂದು ವಿಮಾನ ನಿಲ್ದಾಣ ಸ್ಥಾಪನೆಯಾದರೆ ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುವ ಮೂಲಕ ಪ್ರವಾಸೋದ್ಯಮದ ಬೆಳವಣಿಗೆಯಾಗುವ ಸಾಧ್ಯತೆ ಇದೆ.

ಶೈಕ್ಷಣಿಕ ರಂಗದಲ್ಲಿಯೂ ಮುಂಬೈ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಹೇಳಿದರ ತಪ್ಪಾಗದು. ರಾಜ್ಯ ಸರ್ಕಾರವು ದಕ್ಷಿಣ ಕರ್ನಾಟಕದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಮಾಡಿದಷ್ಟು ಪ್ರಯತ್ನ ಮತ್ತು ಖರ್ಚನ್ನು ಮುಂಬೈ ಮತ್ತು ಹೈದ್ರಾಬಾದ್ ಕರ್ನಾಟಕದಲ್ಲಿ ಮಾಡಲಿಲ್ಲ. ಇಲ್ಲಿನ ಬಹುತೇಕ ಶಿಕ್ಷಣ ಸಂಸ್ಥೆಗಳು ಖಾಸಗಿ ವಲಯದಲ್ಲಿವೆ. ಸರ್ಕಾರಿ ಕಾಲೇಜುಗಳ ಮತ್ತು ಪ್ರೌಢಶಾಲೆಗಳ ಸಂಖ್ಯೆ ಬಹಳ ಕಡಿಮೆ, ಶೈಕ್ಷಣಿಕ ರಂಗದ ಈ ಅಸಮಾನತೆ ಒಟ್ಟು ಅಸಮಾನತೆಯ ದ್ಯೋತಕವಾಗಿದೆ. ಉತ್ತರಕರ್ನಾಟಕದ ಅಭಿವೃದ್ಧಿಗೆ ಕೊಟ್ಟ ಗಮನ ಸಾಲದು ಎಂದು ಕೇಳಿ ಬರುತ್ತಿರುವ ನೋವಿನ ಕೂಗು ತೀರ ನಿರಾಧಾರವೆಂದು ತಳ್ಳಿ ಹಾಕಲಾಗದು. ಹಿಂದುಳಿದ ಪ್ರದೇಶಗಳನ್ನು ಮುಂದುವರಿದ ಪ್ರದೇಶಗಳ ಸಮಕ್ಕೆ ತಂದು, ಇಡೀ ಕನ್ನಡ ನಾಡನ್ನು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮುನ್ನಡೆಸುವ ಗುರುತರ ಜವಾಬ್ದಾರಿ ಕರ್ನಾಟಕದ ಸರ್ಕಾರದ ಮೇಲಿತ್ತು. ಕಳೆದ 45 ವರ್ಷಗಳಲ್ಲಿ ಕರ್ನಾಟಕದ ವಿವಿಧ ಭಾಗಗಳಿಗೆ ಸೇರಿದ ಮುಖ್ಯಮಂತ್ರಿಗಳು, ಮಂತ್ರಿಗಳ ಆಗಿ ಹೋಗಿದ್ದಾರೆ. ಅವರು ತಮ್ಮ ತಮ್ಮ ಅಭಿವೃದ್ಧಿಯನ್ನು ಮಾತ್ರ ಮರೆಯದೆ ಮಾಡಿಕೊಂಡಿದ್ದಾರೆ. ಪ್ರಾದೇಶಿಕ ಅಸಮಾನತೆಯನ್ನು ತೊಡೆದುಹಾಕುವ ಬಗ್ಗೆ ಅವರು ತಲೆಕೆಡಿಸಿಕೊಳ್ಳಲಿಲ್ಲ.


ಮುಂಬೈ ಮತ್ತು ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ಹಿಂದುಳಿದಿವೆ ಎಂಬ ಬಗ್ಗೆ ವಿವಾದವಿಲ್ಲ. ಅಂಗೈ ಹುಣ್ಣಿಗೆ ಕನ್ನಡಿ ಬೇಕಿಲ್ಲ. ಆದರೆ ಈ ವಸ್ತುನಿಷ್ಟ ಹೀಗೆ ಉತ್ತರಕರ್ನಾಟಕದ ಹಿಂದುಳಿಯುವಿಕೆಯ ಮೂಲಕಾರಣವನ್ನು ಗುರುತಿಸಿ ಅದಕ್ಕೆ ಪರಿಹಾರವೊದಗಿಸದೆ, ಈ ಭಾಗದ ಅಸಂಖ್ಯ ಕೂಲಿಕಾರರ, ರೈತರ, ಕಾರ್ಮಿಕರ ಪ್ರಶ್ನೆಗಳಿಗೆ ದನಿಯೆತ್ತದೆ, ಮೇಲುವರ್ಗಗಳ ಕೆಲ ಬೇಡಿಕೆಗಳನ್ನು ಮುಂದಿಟ್ಟು ಪಟ್ಟಭದ್ರ ಭೂಮಾಲಿಕ ಹಿತಾಸಕ್ತಿಗಳು ಜನರಲ್ಲಿ ಭಾವೋದ್ರೇಕವನ್ನು ಕೆರಳಿಸುವ ಪ್ರಯತ್ನ ನಡೆಸಿವೆ. ಇದರಿಂದ ಚುನಾವಣೆಗಳಲ್ಲಿ ರಾಜಕೀಯ ಲಾಭ ಪಡೆಯುವ ಈ ಕುತಂತ್ರ ಈ ಹಿತಾಸಕ್ತಿಗಳ ಅಧಿಕಾರದ ಆಸೆ ತೀರಿದ ಮೇಲೆ ಜನರನ್ನು ಮತ್ತು ಹಿಂದುಳಿಯುವಿಕೆಯ ಆಳವಾದ ಹಳ್ಳಕ್ಕೆ ನೂಕುವುದಲ್ಲದೆ ಮತ್ತೇನೂ ಅಲ್ಲ.




ಹಿಂದುಳಿದ ಪ್ರದೇಶದ ಅಭಿವೃದ್ಧಿ ಆ ಪ್ರದೇಶದ ಜನತೆಯ ಅಭಿವೃದ್ಧಿ ಎನ್ನುವುದಾದರೆ, ಉತ್ತರಕರ್ನಾಟಕದಲ್ಲಿ ಇನ್ನೂ ಸುಪ್ತವಾಗಿರುವ ಪ್ರತಿಭೆಗಳಿಗೆ [illegible]

— ನಿತ್ಯಾನಂದ ಸ್ವಾಮಿ

ಹೈದರಾಬಾದ್ ಕರ್ನಾಟಕ ಮತ್ತು ಪ್ರಾದೇಶಿಕ ಅಸಮಾನತೆ



ಮಾರುತಿ ಮಾನ್ಪಡೆ ಗುಲ್ಬರ್ಗ ಜಿಲ್ಲೆಯ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಕೇಳಿಬರುವ ಪ್ರಮುಖರಲ್ಲಿ ಒಬ್ಬರು. ಆರೋಗ್ಯ ಇಲಾಖೆಯಲ್ಲಿ ಸರ್ಕಾರಿ ನೌಕರರಾಗಿ ಕೆಲಸ ಮಾಡಿದ ಇವರು ಜಗದುದ್ದ ಹಬ್ಬುವ ರೋಮಾಂಚನದ ಹೋರಾಟದ ಅಲೆಗಳಲ್ಲಿ ಒಂದಾಗಿ ತಮ್ಮ ನೌಕರಿ ತೊರೆದು ಪೂರ್ಣಾವಧಿ ಕಾರ್ಯಕರ್ತರಾದವರು. ಈಗ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಅಧ್ಯಕ್ಷರಾಗಿಯೂ, ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸಮಿತಿ ಸದಸ್ಯರೂ ಆಗಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ನಡೆವ ಹೋರಾಟದಲ್ಲಿ ಮುಂಚೂಣಿ ಪಾತ್ರ ವಹಿಸುತ್ತಿದ್ದಾರೆ. ಪ್ರಾದೇಶಿಕ ಅಸಮಾನತೆ, ಅಭಿವೃದ್ಧಿ ಉದಾರೀಕರಣದ ಪರಿಣಾಮಗಳ ಕುರಿತು ಮಾರುತಿ ಮಾನ್ಪಡೆಯವರೊಂದಿಗೆ ಸಂದರ್ಶಿಸಿದ ಸಂಕ್ಷಿಪ್ತ ವಿವರಗಳನ್ನು ಕೆ.ಎಸ್. ವಸ್ತ್ರದ ವಿವರಿಸಿದ್ದಾರೆ.



ಮಾರುತಿ ಮಾನ್ಪಡೆಯವರೆ, ಪ್ರಾದೇಶಿಕ ಅಸಮಾನತೆ ಪ್ರಶ್ನೆ ಮುಂದಿಟ್ಟು ಇತ್ತೀಚೆಗೆ ಕೆಲವರು ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಎಂದು ಪ್ರತ್ಯೇಕ ರಾಜ್ಯಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ರಾಜ್ಯದ ಉಳಿದೆಡೆ ಹೋಲಿಸಿದರೆ ಇಲ್ಲಿ ಅಸಮಾನತೆ ಇದೆ. ಅಸಮಾನತೆಗೆ ಈ ಪ್ರದೇಶದಲ್ಲಿ ಕಳೆದೈದು ದಶಕಗಳಲ್ಲಿ ಆಳಿದ ಅಧಿಕಾರಸ್ಥರ ಅಂದರೆ ಜನಪ್ರತಿನಿಧಿಗಳ ಅಲಕ್ಷತನ, ಉದಾಸೀನತೆ ಮತ್ತು ಜಮೀನ್ದಾರಿ ವರ್ಗದ ಲಕ್ಷಣಗಳು ಕಾರಣವಾಗಿವೆ. ಶ್ರೀಮಂತರು ಮತ್ತು ಜಮೀನ್ದಾರರಿಗೆ ಜನಸಾಮಾನ್ಯರ ಕಷ್ಟಗಳು ಗೊತ್ತಿಲ್ಲ. ಹೀಗಾಗಿ ಈ ಪ್ರದೇಶದ ಅಭಿವೃದ್ಧಿ ಕಡೆಗಣಿಸಿದ, ಜನತೆಯ ಬೇಕು ಬೇಡಗಳನ್ನು ಕಡೆಗಣಿಸಿದ ಜನರೇ ಇಂದು ತಮ್ಮ ವಿಫಲತೆಗಳನ್ನು ಮುಚ್ಚಿಕೊಳ್ಳಲು ಹೊಣೆಗಾರಿಕೆಯನ್ನು ಬೇರೊಬ್ಬರಿಗೆ ಹೊರಿಸಿ ಜನರ ದಿಕ್ಕು ತಪ್ಪಿಸಲು ತಾವೇ ಹುಟ್ಟು ಹಾಕಿದ ಅಸಮಾನತೆಯ ಪ್ರಶ್ನೆ ಮುಂದು ಮಾಡಿ ಅವರೇ ಪ್ರತ್ಯೇಕ ರಾಜ್ಯಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಇದೊಂದು ದೊಡ್ಡ ದುರಂತ ಎಂದು ಹೇಳಬಹುದು.

ಭಾಷಾವಾರು ಪ್ರಾಂತ ರಚನೆಗಾಗಿ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಈ ನಾಡಿನ ಜನತೆ ಭಾಗವಹಿಸಿದ್ದಾರೆ. ಹೈದ್ರಾಬಾದ್ ಪ್ರಾಂತ್ಯದ ಕನ್ನಡಿಗರೂ ಚಳುವಳಿ ನಡೆಸಿದ್ದರಿಂದ ಹೈದ್ರಾಬಾದ್ ಕರ್ನಾಟಕ ಒಳಗೊಂಡ ಕರ್ನಾಟಕ ರಚನೆಯಾದದ್ದು. ಈಗ ಕರ್ನಾಟಕದ ಸಮಗ್ರತೆಯ ಸಂಕೇತವಾಗಿ, ಅಭಿವೃದ್ಧಿಗಾಗಿ ಕೆಲಸ ಮಾಡುವುದನ್ನು ಬಿಟ್ಟು ಪ್ರತ್ಯೇಕ ರಾಜ್ಯ ಬೇಡಿಕೆ ಹಿನ್ನೆಲೆಯಲ್ಲಿ ಜನರ ದೃಷ್ಟಿಕೋನ ಬೇರೆಡೆಗೆ ಸೆಳೆಯುವ ಕುತಂತ್ರವಾಗಿದೆಯೆಂದು ನನಗನ್ನಿಸುತ್ತದೆ. ಅಲ್ಲದೇ ಇದೊಂದು ಜನವಿರೋಧಿ ವಿಚ್ಛಿದ್ರಕಾರಿ ನಿಲುಮೆಯಾಗಿದೆ.

ಮಾನ್ಪಡೆಯವರೆ, ಹೈದ್ರಾಬಾದ ಕರ್ನಾಟಕ ಪ್ರದೇಶ ಹಿಂದುಳಿಯಲು ಪ್ರಮುಖ ಕಾರಣಗಳೇನು?

ಇದೊಂದು ಜಮೀನ್ದಾರಿ ವ್ಯವಸ್ಥೆಗೆ ಒಳಪಟ್ಟ ಪ್ರದೇಶವಾಗಿದೆ. ಈ ಪ್ರದೇಶದ ಜಮೀನ್ದಾರರು ಈ ಭಾಗದ ಅಭಿವೃದ್ಧಿಗೆ ದುಡಿಯದೇ ಜಮೀನ್ದಾರಿ ವ್ಯವಸ್ಥೆ ಮುಂದುವರಿಸುವ ಸಲುವಾಗಿ ಜನತೆಯನ್ನು

ಕತ್ತಲೆಯಲ್ಲಿಡಲು ಪ್ರಯತ್ನಿಸಿದ್ದಾರೆ. ಅಲ್ಲದೇ ಅಲ್ಲಿನ ರಾಜಕಾರಣಿಗಳು ಜಮೀನ್ದಾರಿ ವರ್ಗದಿಂದ ಬಂದಿದ್ದರಿಂದ ಅವರ ವರ್ಗಗುಣ ಬಿಟ್ಟುಕೊಡದೆ ದುಡಿಯುವ ವರ್ಗಕ್ಕೆ ಯಾವುದೇ ಪ್ರಗತಿ ಮಾಡಲಿಲ್ಲ. ರಾಜ್ಯದ ರಾಜಕೀಯ ಚುಕ್ಕಾಣಿ ಹಿಡಿದ ದಿ. ವಿರೇಂದ್ರ ಪಾಟೀಲರು ಮತ್ತು ಬಿ.ಡಿ.ಜತ್ತಿ ಇವರು ಗಮನಾರ್ಹ ಅಭಿವೃದ್ಧಿಗೆ ಪ್ರಯತ್ನಿಸಲಿಲ್ಲ. ಈ ಭಾಗದ ಅನೇಕರು ಕಾಂಗ್ರೆಸ್ ಮತ್ತು ಜನತಾದಳ ಸರ್ಕಾರಗಳಲ್ಲಿ ಕ್ಯಾಬಿನೆಟ್ ಮಂತ್ರಿಗಳಾಗಿದ್ದರೂ ಒಟ್ಟಾರೆ ಅಭಿವೃದ್ಧಿಗೆ ಅವರು ಕೆಲಸ ಮಾಡಲಿಲ್ಲ, ಅದಕ್ಕಾಗಿ ಹಿಂದುಳಿಯುವಿಕೆ, ಎದ್ದು ಕಾಣುತ್ತದೆ.

ಹನ್ನೆರಡನೇ ಶತಮಾನದ ನಂತರ ಪ್ರಬಲವಾದ ಸಾಮಾಜಿಕ ಸುಧಾರಣಾ ಚಳುವಳಿ ಈ ಭಾಗದಲ್ಲಿ ನಡೆದು ಬಂದಿಲ್ಲ. ಜನತೆಯ ಪ್ರಜ್ಞಾಮಟ್ಟ ಕೆಳಮಟ್ಟದಲ್ಲಿರುವುದರಿಂದ ಅಭಿವೃದ್ಧಿಪರ ಜನತೆಯ ಹೋರಾಟಗಳು ಬೆಳೆದು ಬಂದಿಲ್ಲ. ಹಿಂದುಳಿಯುವಿಕೆಗೆ ಇದೂ ಒಂದು ಕಾರಣವಾಗಿದೆ.

ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಕುಂಠಿತಗೊಳ್ಳಲು ಕಾರಣಗಳೇನೆಂದು ವಿವರಿಸುವಿರಾ?

ಕೃಷಿಕೂಲಿಕಾರರು ಗ್ರಾಮಾಂತರ ಬಡವರಿಗೆ ಭೂಮಿ ಹಂಚಿಕೆ, ಆಗದೆ ಇರುವುದು ಬಹಳ ಪ್ರಮುಖ ಅಂಶ. ಅಭಿವೃದ್ಧಿಗೆ ಪೂರಕವಾಗಿ ಬೆಳೆಯಬೇಕಾದ ರಸ್ತೆ, ರೈಲು ಸಂಪರ್ಕದ ಅಭಿವೃದ್ಧಿಯನ್ನು ಈ ಪ್ರದೇಶದಲ್ಲಿ ಕಡೆಗಣಿಸಲಾಗಿದೆ. ನೂರಾರು ಹಳ್ಳಿಗಳಲ್ಲಿ ಇಂದಿಗೂ ರಸ್ತೆಗಳಿಲ್ಲ, ಬಸ್ಸು ಕಾಣದ ಅನೇಕ ಊರುಗಳಿವೆ. ಬೀದರ-ಶ್ರೀರಂಗ ಪಟ್ಟಣ ರಾಷ್ಟ್ರೀಯ ಹೆದ್ದಾರಿ ಇನ್ನೂ ಆಗಿಲ್ಲ.

ಇಲ್ಲಿ ವಿಪುಲವಾಗಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುವ ನಿರ್ದಿಷ್ಟ ಪ್ರಯತ್ನಗಳು ನಡೆದಿಲ್ಲ. ಇದರಿಂದಾಗಿ ಅಭಿವೃದ್ಧಿ ಕುಂಟಿತಗೊಂಡಿದೆ.

ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾದ ನೀರಾವರಿಯನ್ನು ಸರಿಯಾಗಿ ಬಳಸಿಕೊಳ್ಳದಿರುವುದರಿಂದ ಹೈದ್ರಾಬಾದ ಕರ್ನಾಟಕದ ನೀರಾವರಿ ಯೋಜನೆಗಳು ಕುಂಟಿತಗೊಂಡಿವೆ. ಇದರಿಂದಾಗಿ ಇದೊಂದು ಬರಗಾಲ ಪೀಡಿತ ಪ್ರದೇಶವಾಗಿದೆ. ಉದಾಹರಣೆಗೆ ಗೋದಾವರಿ ವಲಯದ ಕಾರಂಜಾ, ಮಾಂಜ್ರಾ, ಗುಲಬರ್ಗಾದ ಭೀಮಾ ಏತ ನೀರಾವರಿ, ಭೀಮಾ ಹರಿವು, ಗಂಡೋರಿ ನಾಲಾ, ಬೆಣ್ಣೆತೋರಾ, ಕೃಷ್ಣಾ ಮೆಲ್ದಂಡೆ ಯೋಜನೆ, ಚಳಕಿನಾಲಾ, ರಾಯಚೂರು ಮಸ್ಕಿನಾಲಾಯೊಜನೆ,



ಸಂಪೂರ್ಣ ಬರಿದಾದ
ಇಂಗಳಗಿ ಬ್ಯಾರೇಜ್

ಹಿರೇಹಳ್ಳಿ ಯೋಜನೆ ಮತ್ತು ಇನ್ನಿತರ ಹತ್ತಾರು ಯೋಜನೆಗಳಿಗೆ ಸಮರ್ಪಕ ಹಣ ಒದಗಿಸದೆ ಕಡೆಗಣಿಸಿದ್ದಾರೆ. ಬಚಾವತ್ ತೀರ್ಪಿನಂತೆ ನೀರಾವರಿ ಯೋಜನೆಗಳು ಪೂರ್ಣಗೊಳ್ಳಬೇಕಾದರೆ ನೀರಾವರಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಹಣ ಒದಗಿಸುವಂತಾಗಬೇಕು. ಆದರೆ ಸರ್ಕಾರ ಅದನ್ನು ಮಾಡುತ್ತಿಲ್ಲ.



ಕೈಗಾರಿಕಾ ಕ್ಷೇತ್ರದಲ್ಲಿಯೂ ಅಷ್ಟೆ. ಸ್ವಾತಂತ್ರ್ಯ ನಂತರ ಸರ್ಕಾರದ ಹಣದಿಂದ ಯಾವುದೇ ಕೈಗಾರಿಕೆಗಳ ಸ್ಥಾಪನೆಗೆ ಪ್ರಯತ್ನ ನಡೆದಿಲ್ಲ. ಹೇರಳವಾಗಿ ದೊರೆಯುವ ಕಬ್ಬಿಣದ ಅದಿರು, ಸುಣ್ಣದ ಕಲ್ಲು ಇತ್ಯಾದಿ ಅಪಾರ ಖನಿಜ ಸಂಪತ್ತು ಉಳ್ಳ ಈ ಪ್ರದೇಶದಲ್ಲಿ ಅದನ್ನು ಸರಿಯಾಗಿ ಬಳಸಿಕೊಂಡು ಕೈಗಾರಿಕೆಗಳ ಸ್ಥಾಪನೆ ಮಾಡಲಿಲ್ಲ.

ನಿಜಾಮರ ಆಳ್ವಿಕೆಯಲ್ಲಿ ಒಳಪಟ್ಟ ಈ ಭೂ ಭಾಗದಲ್ಲಿ ಶಿಕ್ಷಣಕ್ಕೂ ಹೆಚ್ಚು ಆದ್ಯತೆ ಸಿಗಲಿಲ್ಲ. ಇಂದಿಗೂ ಸಹಿತ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಜನ ಪ್ರತಿಶತ 13 ರಷ್ಟು ಮಾತ್ರ ಶಿಕ್ಷಿತರು. ಅದರಲ್ಲೂ ಮಹಿಳೆಯರು ಕೇವಲ 4 ಪ್ರತಿಶತ ಶಿಕ್ಷಿತರಿದ್ದಾರೆ. ಹೀಗಾಗಿ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಕುಂಟಿತಗೊಂಡಿದೆ.

1990-91ರಿಂದ ಪ್ರಾರಂಭವಾದ ಹೈದ್ರಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಈ ಭಾಗದ ದುಡಿಯುವ ಜನಕ್ಕೆ ಆದ ಪ್ರಯೋಜನಗಳೇನೆಂದು ತಿಳಿಸುವಿರಾ?

ಹೆಚ್.ಕೆ.ಡಿ.ಬಿ.ಯು ಈ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಪ್ರಾರಂಭಗೊಂಡ ಸಂಸ್ಥೆ. ವಿಪರ್ಯಾಸವೆಂದರೆ ಅಭಿವೃದ್ಧಿಗೆ ಒಂದು ಸ್ಪಷ್ಟ ಯೋಜನೆಯ ಕಣ್ನೋಟ ಇಲ್ಲದೇ ಈಗ ಹಣ ಖರ್ಚು ಮಾಡುತ್ತಿರುವ ಸಂಸ್ಥೆಯಾಗಿದೆ. ಹೆಚ್.ಕೆ.ಡಿ.ಬಿ. ಸ್ಥಾಪನೆಯಾಗಿ ದಶಕಗಳಾಗುತ್ತ ಬಂದರೂ ಒಂದು ಯೋಜನಾ ಘಟಕ ಇಲ್ಲದೇ ಇರುವುದು ಅದರ ಸ್ವರೂಪವನ್ನು ತಿಳಿಸುತ್ತದೆ.

ವಿಸ್ತೃತ ರಸ್ತೆ, ಆರೋಗ್ಯ, ಶಿಕ್ಷಣ, ಗುಡಿಕೈಗಾರಿಕೆಗಳ ಪರಿಕರಗಳ ಮೂಲ ಸೌಲಭ್ಯ, ನೀರಾವರಿ ಇತ್ಯಾದಿಗಳಿಗೆ ಯಾವುದೇ ಸ್ಪಷ್ಟ ಯೋಜನೆಗಳಿಲ್ಲ. ಕೆಲವು ರಸ್ತೆ ನಿರ್ಮಾಣ, ನಿರ್ವಹಣೆ ಮತ್ತು ಸರ್ಕಾರಿ ಕಟ್ಟಡಗಳ ಕಾಮಗಾರಿಗಳಿಂದ ಕೆಲವು ದುಡಿವ ಕೈಗಳಿಗೆ ಕೂಲಿ ಸಿಕ್ಕಿದೆಯೇ ಹೊರತು ಪರ್ಯಾಯ ಉದ್ಯೋಗಗಳು ದೊರಕಿಲ್ಲ.

ಉತ್ಪಾದನಾ ಆಧಾರಿತ

ಹಳ್ಳಿ ರಸ್ತೆ, ತಾಲೂಕು ರಸ್ತೆ, ಜಿಲ್ಲಾ ರಸ್ತೆ, ರಾಜ್ಯ ಹೆದ್ದಾರಿಗಳು ಕೂಡಾ ವ್ಯವಸ್ಥಿತವಾಗಿ ಅಭಿವೃದ್ಧಿ ಮಾಡಲು ದಶಕಗಳಿಂದ ಸಾಧ್ಯವಾಗಿಲ್ಲ.

ಇದುವರೆಗೆ ಜಮೀನ್ದಾರಿ ವರ್ಗವನ್ನು ಪ್ರತಿನಿಧಿಸುವ ಭ್ರಷ್ಟ ಆಳುವ ವರ್ಗದ ಪ್ರತಿನಿಧಿಗಳ ಬೊಕ್ಕಸ ತುಂಬಿಸುವ ಕೆಲಸವಾಗಿದೆ. ಅಲ್ಲದೇ ಶಾಸಕರ ಅನುದಾನದ ಹೆಸರಿನಲ್ಲಿ ಹಣ ಹಂಚಿಕೆ ಮಾಡುವುದರಿಂದ ಶಾಸಕರು, ಅವರ ಸಂಬಂಧಿಕರು, ಹಿಂಬಾಲಕರೇ ಗುತ್ತಿಗೆದಾರರಾಗಿ ಹಣ ನುಂಗಿಹಾಕುವ ಒಂದು ಅಡ್ಡಾ ಆಗಿದೆ. ಇದರಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಯಾವುದೇ ಅಭಿವೃದ್ಧಿ ಹೆಚ್.ಕೆ.ಡಿ.ಬಿ. ಯಿಂದ ಸಾಧ್ಯವಾಗಿಲ್ಲ.

ಇದು ಬಹುಜನರ ಜೀವನ ಮಟ್ಟ ಎತ್ತರಿಸುವ ಯೋಜನೆಯಾಗದೇ ಕಣ್ಣೀರೊರೆಸುವ ಕಾರ್ಯ ಮಾಡುತ್ತಿರುವುದು ವಿಷಾದದ ಸಂಗತಿಯಾಗಿದೆ.



ಮಾನ್ಯಡೆಯವರೇ, ಹೈದ್ರಾಬಾದ ಕರ್ನಾಟಕಕ್ಕೆ ಸಂಬಂಧಿಸಿದಂತೆ ಉದಾರೀಕರಣದಿಂದಾದ ಪರಿಣಾಮಗಳ ಬಗ್ಗೆ ತಿಳಿಸುವಿರಾ?

ಹಿಂದುಳಿದ ಪ್ರದೇಶವಾದ ಹೈದ್ರಾಬಾದ ಕರ್ನಾಟಕಕ್ಕೆ ಹೊಸ ಆರ್ಥಿಕ ನೀತಿಯು ಈ ಪ್ರದೇಶದ ಜನತೆಯನ್ನು ಇನ್ನಷ್ಟು ದಿವಾಳಿ ಎಬ್ಬಿಸಿದೆ. ಗ್ಯಾಟ್ ಒಪ್ಪಂದದಂತೆ ತೊಗರಿಯನ್ನು ಆಮದು ಮಾಡಿಕೊಂಡಿದ್ದರಿಂದ ತೊಗರಿಗೆ ಬೆಂಬಲ ಬೆಲೆ ಸಿಗದೇ ದಿವಾಳಿಯಾಗಿ ರೈತರು ಸಂಕಷ್ಟಕ್ಕೆ ಒಳಗಾಗಿದ್ದು ಎಲ್ಲರಿಗೂ ಗೊತ್ತಿದೆ. ಮುಖ್ಯವಾಗಿ ಕೃಷಿಯಲ್ಲಿ ಸರ್ಕಾರ ಬಂಡವಾಳ ತೊಡಗಿಸುವುದನ್ನು ಕಡಿತ ಮಾಡುತ್ತಿದೆ. ಕೈಗಾರಿಕೆಗಳ ಮಾಲೀಕರಿಗೆ ಮುಕ್ತ ಅವಕಾಶ ನೀಡಿರುವುದರಿಂದ ಮತ್ತು ಕಳಪೆ ಕ್ರಿಮಿನಾಶಕ, ಗೊಬ್ಬರ ಇತ್ಯಾದಿ ವ್ಯಾಪಕ ಪೂರೈಕೆಯಿಂದ ಈ ಪ್ರದೇಶದಲ್ಲಿ ರೈತರ ಆತ್ಮಹತ್ಯೆಗಳಿಗೆ ಕಾರಣವಾಗಿದೆ.

ಭಾಷಾವಾರು ಪ್ರಾಂತ ರಚನೆಗಾಗಿ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಈ ನಾಡಿನ ಜನತೆ ಭಾಗವಹಿಸಿದ್ದಾರೆ. ಹೈದ್ರಾಬಾದ್ ಪ್ರಾಂತ್ಯದ ಕನ್ನಡಿಗರೂ ಚಳುವಳಿ ನಡೆಸಿದ್ದರಿಂದ ಹೈದ್ರಾಬಾದ್ ಕರ್ನಾಟಕ ಒಳಗೊಂಡ ಕರ್ನಾಟಕ ರಚನೆಯಾದದ್ದು. ಈಗ ಕರ್ನಾಟಕದ ಸಮಗ್ರತೆಯ ಸಂಕೇತವಾಗಿ, ಅಭಿವೃದ್ಧಿಗಾಗಿ ಕೆಲಸ ಮಾಡುವುದನ್ನು ಬಿಟ್ಟು ಪ್ರತ್ಯೇಕ ರಾಜ್ಯ ಬೇಡಿಕೆ ಹಿನ್ನೆಲೆಯಲ್ಲಿ ಜನರ ದೃಷ್ಟಿಕೋನ ಬೇರೆಡೆಗೆ ಸೆಳೆಯುವ ಕುತಂತ್ರವಾಗಿದೆಯೆಂದು ನನಗನ್ನಿಸುತ್ತದೆ. ಅಲ್ಲದೇ ಇದೊಂದು ಜನವಿರೋಧಿ ವಿಚ್ಛಿದ್ರಕಾರಿ ನಿಲುವೆಯಾಗಿದೆ.

ನೀರಾವರಿಗೆ ಹಣ ಕೊಡದೇ ಸಾಲ ಎತ್ತಿ ಜಲಭಾಗ್ಯ ನಿಗಮದಿಂದ ನೀರಾವರಿ ಮಾಡುವ ಮೂಲಕ ನೀರಾವರಿಯನ್ನು ಖಾಸಗೀಕರಣಕ್ಕೆ ಒಳಪಡಿಸಲಾಗುತ್ತಿದೆ. ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆ ಇಲ್ಲದಿರುವುದರಿಂದ ಉತ್ತಮ ತಳಿ ಜೋಳ, ತೊಗರಿ, ಹತ್ತಿ ಇತ್ಯಾದಿ ಉತ್ಪಾದನೆ ಹೆಚ್ಚಾಗಲಿಲ್ಲ. ಜಮೀನು, ಜಮೀನ್ದಾರರ ಹಿಡಿತದಲ್ಲಿ ಉಳಿದಿದ್ದರಿಂದ ಕೃಷಿಕೂಲಿಕಾರರು ಸ್ವಂತ ಊರು ಬಿಟ್ಟು ಬಾಂಬೆ, ಪೂನಾ, ಬೆಂಗಳೂರು, ಹೈದ್ರಾಬಾದಗಳಿಗೆ ಬದುಕಲು ವಲಸೆ ಹೋಗುತ್ತಾರೆ. ಇದು ಕೃಷಿ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರಿದೆ.

ಈ ಪ್ರದೇಶದಲ್ಲಿದ್ದ ಪ್ರಮುಖ ಕೈಗಾರಿಕೆಗಳಾದ ಎಂ.ಎಸ್.ಕೆ. ಮಿಲ್, ರಾಯಚೂರಿನ ಸ್ಪಿನ್ನಿಂಗ್ ಮಿಲ್, ಶಹಾಬಾದನ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆಗಳು ಬಳ್ಳಾರಿಯಲ್ಲಿಯ ಕಬ್ಬಿಣ, ಸಕ್ಕರೆ, ಎಣ್ಣೆ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ಹೊಸ ಕೈಗಾರಿಕಾ ನೀತಿಯಿಂದಾಗಿ ಮತ್ತು ಉದಾರೀಕರಣದ ಪರಿಣಾಮವಾಗಿ ಸಾವಿರಾರು ಜನ ಉದ್ಯೋಗ ಕಳೆದುಕೊಂಡಿದ್ದಾರೆ.

ವಿದೇಶಿ ವಿನಿಮಯದಲ್ಲಿ ಚಿನ್ನದ ಬೆಲೆ ಕುಸಿತದಿಂದಾಗಿ ಹಟ್ಟಿ ಚಿನ್ನದ ಗಣಿ ಬಿಕ್ಕಟ್ಟಿಗೆ ಒಳಪಟ್ಟಿದೆ. ಹೀಗೆ ವಿವಿಧ ಕ್ಷೇತ್ರಗಳಲ್ಲಿ ಉದಾರೀಕರಣದ ದುಷ್ಪರಿಣಾಮಗಳ ಛಾಯೆ ಎದ್ದು ಕಾಣುತ್ತದೆ.

ಕೊನೆಯದಾಗಿ ಕಾಂ! ಮಾನ್ಯಡೆಯವರೇ, ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿಯಾಗಲು ನೀವು ಸೂಚಿಸುವ ಪರ್ಯಾಯಗಳೇನು ತಿಳಿಸುತ್ತೀರಾ?

ಜನತೆಯು ಕತ್ತಲಿನಿಂದ ಬೆಳಕಿನೆಡೆಗೆ ಕಾಲಿಡಲು, ಅವರ ಜೀವನಮಟ್ಟ ಹಸನಾಗಲು ಭೂ ಸುಧಾರಣೆ ಸಮರ್ಪಕವಾಗಿ ಜಾರಿಗೆಯಾಗಬೇಕು. ಈ ಪ್ರದೇಶದ ಸಂಪತ್ತನ್ನು ಬಳಸಿಕೊಳ್ಳಲು ನಿರ್ದಿಷ್ಟ ಯೋಜನೆಗಳನ್ನು ತಯಾರಿಸಬೇಕು. ಎಲ್ಲಾ ನೀರಾವರಿ ಯೋಜನೆಗಳು ಪೂರ್ಣಗೊಳ್ಳಲು ನೀರಾವರಿಗೆ ಹೆಚ್ಚಿನ ಹಣ ಸರ್ಕಾರ ಬಿಡುಗಡೆಮಾಡಿ ನೀರಿನ ಸದುಪಯೋಗ ಪಡೆಯಬೇಕು. ರಸ್ತೆ, ಸಂಪರ್ಕ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಈ ಭಾಗದಲ್ಲಿ ದೊಡ್ಡ ಕಾರ್ಖಾನೆಗಳು ಸ್ಥಾಪನೆಯಾಗಿ ನಿರುದ್ಯೋಗಿ ಯುವಕರಿಗೆ ಕೆಲಸ ದೊರಕುವಂತಾಗಬೇಕು. ಮುಚ್ಚಲ್ಪಟ್ಟ ಕಾರ್ಖಾನೆಗಳು ಪ್ರಾರಂಭವಾಗಬೇಕು. ಯೋಜನೆಗಳನ್ನು ಜಾರಿಗೊಳಿಸುವಾಗ ಜನತೆಯ ಪಾಲ್ಗೊಳ್ಳುವಿಕೆ ಇರಬೇಕು.

ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಜನಪರ ಪ್ರಜಾಸತ್ತಾತ್ಮಕ ಚಳುವಳಿಗಳು ಬೆಳೆದು ಬಂದಾಗ ಮಾತ್ರ ಇದೆಲ್ಲ ಸಾಧ್ಯವಾಗುತ್ತದೆ.

○

ಕೊಡಗಿನಲ್ಲಿ ಪ್ರತ್ಯೇಕತಾವಾದದ ಚಳುವಳಿ

ಸತ್ಯಾ, ವಿರಾಜಪೇಟೆ

ಕಾಲದಿಂದ ಕಾಲಕ್ಕೆ 'ನಾಮ' ಬದಲಾಯಿಸಿಕೊಂಡು ಕರ್ನಾಟಕದಿಂದ ಕೊಡಗನ್ನು ಪ್ರತ್ಯೇಕಿಸುವ ಚಳುವಳಿಯೊಂದು ಕಳೆದೆರಡು ದಶಕದಿಂದಲೂ ನಡೆಯುತ್ತಿದೆ. ಅದರ ವಿರುದ್ಧ ಜನತೆಯ ಪ್ರತಿರೋಧವೂ ಬೆಳೆಯುತ್ತಿದೆ. ಅತ್ಯಂತ ನಿಸರ್ಗ ಸಂಪತ್ತು, ಹೆಚ್ಚಿನ ತಲಾ ಆದಾಯವಿರುವ ಕೊಡಗಿನಲ್ಲಿ ಪ್ರತ್ಯೇಕತಾವಾದ ಬೆಳೆದು ಬಂದ ರಾಜಕೀಯ ಆಯಾಮಗಳನ್ನು, ವಿರೋಧಗಳನ್ನು ಲೇಖಕರು ವಿವರಿಸಿದ್ದಾರೆ.



ಒಂದು ಪ್ರತ್ಯೇಕತಾವಾದದ ಚಳುವಳಿ ಕರ್ನಾಟಕದ ಅತ್ಯಂತ ಸಣ್ಣ ಜಿಲ್ಲೆಯಾದ ಕೊಡಗಿನಲ್ಲಿ ಕೆಲವು ವರ್ಷಗಳಿಂದ ನಡೆದುಬರುತ್ತಿದೆ.

ಕೊಡಗು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ರಾಜ್ಯದ 2.14. ಜನಸಂಖ್ಯೆ ಸುಮಾರು 485229 (1991 ರ ಜನಗಣತಿಯಲ್ಲಿ) ಸುಮಾರು ಶೇ. 12 ರಷ್ಟು ಜನ ಬೇರೆ ಬೇರೆ ಜಿಲ್ಲೆಗಳಿಂದ ಬಂದವರು, ಸುಮಾರು ಇಷ್ಟೇ ಮಂದಿ ಕೇರಳ, ತಮಿಳುನಾಡುಗಳಿಂದ ಬಂದವರು ಇದ್ದಾರೆ.

ಈ ಜಿಲ್ಲೆಯು ಇಂದು 18 ಜನವಿಭಾಗಗಳ ತವರೂರು. ಅದೇ ರೀತಿ ಹಲವು ಭಾಷೆಗಳ ಬೀಡು. ಪ್ರಮುಖ ಭಾಷೆ ಕೊಡವ ಮತ್ತು ಕನ್ನಡ. ತಮ್ಮದೇ ಆದ ವಿಶಿಷ್ಟ ಭಾಷೆಗಳನ್ನಾಡುವವರೂ ಇದ್ದಾರೆ. ಮಲೆಯಾಳಿ, ತುಳು, ತಮಿಳು, ಉರ್ದು ಮೊದಲಾದ ಹಲವು ಭಾಷಿಕರು ಇಲ್ಲಿ ನೆಲೆಸಿದ್ದಾರೆ.

ಎರವರು, ಕುರುಬರು, ಕೆಂಬಟ್ಟಿ ಹೊಲೆಯರು ಕೊಡಗಿನ ಮೂಲ ನಿವಾಸಿಗಳು. ಕೊಡವರು ಮೂಲನಿವಾಸಿಗಳಲ್ಲ ಎಂದೂ ಹೇಳಲಾಗುತ್ತಿದೆ. ಇವರ ಮೂಲದ ಬಗ್ಗೆ ಇನ್ನೂ ಚರ್ಚೆಗಳು ನಡೆಯುತ್ತಲೇ ಇದೆ. ಇಂದು ಕೊಡವರು, ಗೌಡರು, ಅಮ್ಮಕೊಡವರು ಭೂ ಒಡೆಯ ಜನಾಂಗಗಳಾಗಿದ್ದಾರೆ. ಕುರುಬರು, ಎರವರು, ಕೆಂಬಟ್ಟಿ ಹೊಲೆಯರು ಮುಂತಾದವರು ಬಹುಅಂಶ ಕೃಷಿ ಕೂಲಿಕಾರರು ಮತ್ತು ಚಿಕ್ಕ ರೈತ ವಿಭಾಗದವರಾಗಿದ್ದಾರೆ.

ಇಲ್ಲಿಯ ಭೂಮಾಲೀಕರ ಸಮುದಾಯಗಳಲ್ಲಿ ವಂಶ ಪಾರಂಪರ್ಯವಾದ, ಪರಭೋಗ ಮಾಡಲಾಗದ, ವಿಭಜಿಸಲೂ ಆಗದ ಹಿಡುವಳಿಯೊಂದನ್ನು 'ಜಮ್ಮಹಿಡುವಳಿ' ಎನ್ನುತ್ತಾರೆ. ಅದನ್ನು ಉಳಲು ಸರಕಾರ ಜಮ್ಮದಾಳುಗಳನ್ನು ಇಟ್ಟುಕೊಳ್ಳುತ್ತಿದ್ದರು. ಇವರಲ್ಲಿಯೂ ಎರಡು ವಿಧ - ಭೂಮಿ ಜಮ್ಮದಾಳುಗಳು ಮತ್ತು ಒಕ್ಕಲಿನ ಜಮ್ಮದಾಳುಗಳು. ಭೂಮಿ ಜಮ್ಮದಾಳುಗಳು ಯಜಮಾನನ ಖಾಸಗಿ ಸ್ವತ್ತುಗಳು.

ಕೊಡಗು ಈಗ ಕಾಫಿಯ ಬೀಡೆಂದು ಪರಿಗಣಿಸಲ್ಪಟ್ಟಿದ್ದರೂ ಪುರಾತನ ಕಾಲದಿಂದ ಇಲ್ಲಿ ಕಾಫಿ ಬೆಳೆಯುತ್ತಿರಲಿಲ್ಲ. ಭತ್ತವೇ ಪ್ರಮುಖ ಬೆಳೆಯಾಗಿತ್ತು. 1854 ರ ಸುಮಾರಿಗೆ ಬ್ರಿಟಿಷರು ಬಂಡವಾಳ ಹೂಡಿ ಕಾಫಿ ತೋಟಗಳನ್ನು ಪ್ರಾರಂಭಿಸಿದರು. 1853 ರಲ್ಲಿ ಗುಲಾಮಗಿರಿ ಪ್ರತಿಬಂಧ ಕಾನೂನು ಜಾರಿಗೆ ಬರುವುದರೊಂದಿಗೆ ಕೊಡಗಿನ ಜಮ್ಮದಾಳುಗಳಾದ ಪರಿಶಿಷ್ಟ ಜಾತಿ-ವರ್ಗಗಳ ಜನ ತೋಟ ಕೆಲಸಗಾರರಾಗಿ ಸಿಕ್ಕಿದರು. ಅಲ್ಲದೆ ದ.ಕ., ಹಾಸನ, ಮೈಸೂರು ಹಾಗೂ

ಪಕ್ಕದ ಕೇರಳ, ತಮಿಳುನಾಡುಗಳಿಂದಲೂ ಭೂ ರಹಿತ ದಲಿತರು ಈ ತೋಟಗಳಲ್ಲಿ ದುಡಿಯಲು ಬಂದರು.



ಬದಲಾದ ಕೊಡಗು

ಕ್ರಮೇಣ ಕಾಫಿ ತೋಟಗಳ ವಿಸ್ತಾರದೊಂದಿಗೆ ಕಾಫಿಯೇ ಕೊಡಗಿನ ಕೇಂದ್ರ ಬಿಂದುವೆಂಬ ಸ್ಥಾನಕ್ಕೇರಿತು. ಅದರೊಂದಿಗೆ ಬಂಡವಾಳಶಾಹಿ ಸಂಬಂಧಗಳೂ, ನಿಲುವುಗಳೂ ಬೆಳೆದವು. ಬ್ರಿಟಿಷರ ಆಡಳಿತೆಯಲ್ಲಿ ಕೆಲವೊಂದು ಸುಧಾರಣೆಗಳಾದರೂ ಬಂಡವಾಳಶಾಹಿ ವ್ಯವಸ್ಥೆಗೆ ಸಹಜವಾದ ಆರ್ಥಿಕ ಬಿಕ್ಕಟ್ಟು ಕಾಫಿ ಬೆಳೆಗಾರರನ್ನು ಕಾಡಲಾರಂಭಿಸಿತು. ಇದರ ಪರಿಣಾಮವಾಗಿಯೇ 1912 ರ ವೇಳೆಗೆ ಕೊಡಗು ಜಮೀನ್ದಾರರ ಸಂಘ ಮೂಡಿಬಂತು. ಕಾಫಿ ತೋಟಗಾರರ, ರೈತರ ಸಮಸ್ಯೆಗಳ ಬಗ್ಗೆ ವಿವಿಧ ಠರಾವು, ಅರ್ಜಿಗಳನ್ನು ಸರಕಾರಕ್ಕೆ ಕಳಿಸುವುದು ಇದರ ಕೆಲಸವಾಗಿತ್ತು. ಇದರ ಮುಖಂಡರಲ್ಲೇ ಕೆಲವರು ಮುಂದೆ ಕೊಡಗಿನಲ್ಲಿ ಕಾಂಗ್ರೆಸ್ ಸ್ಥಾಪಕರಾಗಿ ಸ್ವಾತಂತ್ರ್ಯ ಹೋರಾಟದ ಮುಖಂಡರಾಗಿ ರೂಪುಗೊಂಡರು. ಕೊಡಗಿನ ಬಹುಪಾಲು ಶ್ರೀಮಂತ ತೋಟ ಮಾಲೀಕರು ಅವರನ್ನು ಅವಹೇಳನ ದೃಷ್ಟಿಯಿಂದ ನೋಡಿದರೂ ಬ್ರಿಟಿಷರ ಆರ್ಥಿಕ ನೀತಿ, ಭಾರತೀಯರ ವಿರುದ್ಧ ಮುಖ್ಯವಾಗಿ ಸೈನ್ಯದಲ್ಲಿ ತೋರುತ್ತಿದ್ದ ಪಕ್ಷಪಾತಗಳ ತಿಳುವಳಿಕೆ ಹೆಚ್ಚಿದಂತೆ ವೈಚಾರಿಕ ಜನಜಾಗೃತಿಯೂ ಬೆಳೆಯಿತು.

ಬ್ರಿಟಿಷರು ತಂದ ಆಡಳಿತಾತ್ಮಕ ಸುಧಾರಣೆಗಳಿಂದ ಕೊಡಗಿನ ಜನಕ್ಕೆ ಯಾವುದೇ ಲಾಭವಾಗದ್ದರಿಂದ ಕೊಡಗನ್ನು ಮದ್ರಾಸ್ ಪ್ರಾಂತ್ಯದ ಒಂದು ಜಿಲ್ಲೆಯಾಗಿ ಮಾಡುವುದೊಳ್ಳೆಯದು ಎಂದು ಜಮೀನ್ದಾರರ ಸಂಘ 1918 ರಲ್ಲಿ ಠರಾವು ಮಾಡಿತ್ತು. 1924 ರಲ್ಲಿ ದೊರೆತ ಲಿಜಿಸ್ಲೇಟಿವ್ ಕೌನ್ಸಿಲ್‌ಗೆ ಏನೂ ಅಧಿಕಾರವಿಲ್ಲದ್ದರಿಂದಲೂ, 1938 ರಲ್ಲಿ ಕೊಡಗನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಬೇಕೆಂಬ ವಿಚಾರಕ್ಕೆ 1938 ರಲ್ಲಿ ಬೆಂಬಲ ಮೂಡಿಬಂತು.

ವಿಲೀನದತ್ತ

ಸ್ವಾತಂತ್ರ್ಯಾನಂತರ ಭಾರತದ ಸಂವಿಧಾನ ಕೊಡಗನ್ನು 'ಸಿ' ಗುಂಪಿನ ರಾಜ್ಯವಾಗಿ ಪರಿಗಣಿಸಿತು. ಈ ವ್ಯವಸ್ಥೆ 1952 ರಲ್ಲಿ ಜಾರಿಗೆ ಬಂತು. 24 ಚುನಾಯಿತ ಸದಸ್ಯರಿರುವ ವಿಧಾನಸಭೆ ಹಾಗೂ ಅದು ಆರಿಸಿದ ಇಬ್ಬರು ಮಂತ್ರಿಗಳ ಆಡಳಿತ ಕೊಡಗಿಗೆ ಬಂತು. ವಿಲೀನಪರವೆಂದು ಪರಿಗಣಿಸಲ್ಪಡುವ ಕಾಂಗ್ರೆಸ್ 1952 ರ ಚುನಾವಣೆಗಳಲ್ಲಿ 24 ರಲ್ಲಿ 15 ಸ್ಥಾನ ಗಳಿಸಿತು. ಪ್ರತ್ಯೇಕತೆ ಪ್ರತಿಪಾದಿಸಿ ಕಾಂಗ್ರೆಸ್ಸಿನಿಂದ ಹೊರಹೋದವರು 9 ಸ್ಥಾನ ಗಳಿಸಿದರು. ಏಕೈಕ ಲೋಕಸಭಾ ಸ್ಥಾನವನ್ನೂ ಕಾಂಗ್ರೆಸ್ ಗೆದ್ದುಕೊಂಡಿತು. ಈ ಚುನಾವಣೆಯಲ್ಲಿ ಭಾರತದ ಎಲ್ಲೆಡೆಗಿಂತ ಹೆಚ್ಚಿನ ಮತದಾನ ಕೊಡಗಲ್ಲಾಗಿತ್ತು.

ಕೊಡಗಿಗೇ ಪ್ರತ್ಯೇಕವಾದ ಒಂದು ಚುನಾಯಿತ ಸರಕಾರ ಅಸ್ತಿತ್ವಕ್ಕೆ ಬಂತು. ಆದರೆ 1955 ರಲ್ಲಿ ಇದೇ ವಿಧಾನಸಭೆಯಲ್ಲಿ ಕೊಡಗಿನ ವಿಲೀನದ ಠರಾವು ತಂದಾಗ ಕಾಂಗ್ರೆಸ್ಸಿನ 15 ಸದಸ್ಯರೊಂದಿಗೆ ಪ್ರತ್ಯೇಕತಾವಾದಿ ಗುಂಪಿನ 9 ರಲ್ಲಿ 7 ಸದಸ್ಯರೂ ವಿಲೀನಪರ ಮತ ನೀಡಿದರು. ಹೀಗೆ ಕೊಡಗಿನ ಜನರ ಬೆಂಬಲದಿಂದ ಕೊಡಗು ಕರ್ನಾಟಕದ ಭಾಗವಾಗಿ 1956 ರ ನವೆಂಬರ್ 1 ರಂದು ಸೇರಿತು.

ಎಲ್ಲೆಡೆಯಂತೆ ಇಲ್ಲೂ ಬಿಕ್ಕಟ್ಟು


ನಂತರ ಅಧಿಕಾರಕ್ಕೆ ಬಂದ ಸರಕಾರಗಳು ನಿರಂತರವಾಗಿ ಅನುಸರಿಸಿ ಬಂದ ಗುತ್ತೇದಾರಿ ಬಂಡವಾಳಶಾಹಿಪರ, ಸಾಮ್ರಾಜ್ಯಶಾಹಿ ಪರ, ಪಾಳೆಯಗಾರಿ ಭೂಮಾಲೀಕರ ಪರ ಕೈಗೊಂಡು ದೇಶದ ಎಲ್ಲೆಡೆಗಳಂತೆ ಕೊಡಗಿನಲ್ಲೂ ಜನ ಬಿಕ್ಕಟ್ಟಿಗೊಳಗಾದರು. ಬಡತನ, ನಿರುದ್ಯೋಗಗಳು ಹೆಚ್ಚಿದವು. ಬೆಲೆ ಏರಿಕೆ ಆರಂಭವಾಯಿತು.

ಕೊಡಗು ಕೃಷಿ ಪ್ರಧಾನ ಜಿಲ್ಲೆ. ಇಲ್ಲಿಯ ಬೆಳೆಗಾರರು ಈ ಸಂದಿಗ್ಧತೆಗೆ ಒಳಗಾದರು. ಸರಕಾರದ ಸೌಲಭ್ಯಗಳೆಲ್ಲವೂ ಕೆಲವೇ ಮಂದಿ ಶ್ರೀಮಂತರ ಪಾಲಾಯಿತು. ಮಧ್ಯಮ ವಿಭಾಗದ ಬೆಳೆಗಾರರು ಒಂದೆಡೆ ತಾವು ಉತ್ಪಾದಿಸುವ ಕಾಫಿ, ಭತ್ತಗಳಿಗೆ, ಏಲಕ್ಕಿ, ಕರಿಮೆಣಸು, ಮೊದಲಾದ ಉತ್ಪನ್ನಗಳಿಗೆ ಬೆಲೆ ಸಿಗದಿರುವಾಗಲೇ ತಾವು ಕೊಂಡುಕೊಳ್ಳುವ ಸಿದ್ದವಸ್ತುಗಳು ದುಬಾರಿಯಾಗುತ್ತಿರುವುದನ್ನು ಕಂಡರು. ಇದರ ಪರಿಣಾಮವಾಗಿ ತಮ್ಮ ಜೀವನ ಮಟ್ಟ ಕುಸಿಯುವುದನ್ನು ಮನಗಂಡರು.

ಪ್ರತಿಗಾಮಿಗಳ ಷಡ್ಯಂತ್ರ ಲಿವಾಕ್

ಮಧ್ಯಮ, ಬಡಜನತೆ ಅನುಭವಿಸುತ್ತಿರುವ ಬವಣೆಗಳಿಗೆ ಕಾರಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಜನಸಾಮಾನ್ಯರಲ್ಲಿ ಮಂಡಿಸಿ ಅವರನ್ನು ಪ್ರಜಾಸತ್ತಾತ್ಮಕ ಹಾದಿಯಲ್ಲಿ ಸಂಘಟಿಸಿ ಹೋರಾಟದ ಹಾದಿಯಲ್ಲಿ ಕೊಂಡೊಯ್ಯಲು ಕಮ್ಯುನಿಸ್ಟ್ ಪಕ್ಷದ ಶಕ್ತಿ ಸಾಲಲಿಲ್ಲ.

ಇದರ ಪರಿಣಾಮವಾಗಿ ವಿಚ್ಛಿದ್ರಕಾರಿ ಶಕ್ತಿಗಳು, ಆಳುವ ವರ್ಗಗಳ ಏಜೆಂಟರುಗಳು ಸಮಸ್ಯೆಗಳನ್ನು ವಿಶ್ಲೇಷಣೆಗಳಿಗೆ ಒಳಪಡಿಸದೆ ಈ ನಾಡಿನ ಮಧ್ಯಮ, ಬಡಜನತೆಯನ್ನು ವಿಚ್ಛಿದ್ರಕಾರಿ ದಾರಿಯಲ್ಲಿ ಕೊಂಡೊಯ್ಯಲು ನಿರಂತರ ಯತ್ನಿಸಿದರು. ಇವರ ಪರಿಣಾಮವೇ ಈ ಜಿಲ್ಲೆಯಲ್ಲಿ ಪ್ರಾರಂಭದಲ್ಲಿ ಜನಸಂಘ, ಆನಂತರ ಭಾ.ಜ.ಪ.ದ ಶಕ್ತಿವರ್ಧನೆ.



ಮೊದಮೊದಲು ಪ್ರತ್ಯೇಕ ರಾಷ್ಟ್ರ ಈಗೀಗ ಪ್ರತ್ಯೇಕ ರಾಜ್ಯದ ಕೂಗುತ್ತಿರುವ ನಾಚಪ್ಪ

ಈ ಪ್ರತಿಗಾಮಿ ಶಕ್ತಿಗಳ ಶಡ್ಯಂತ್ರದ ಫಲವೇ ಲಿವಾಕ್ ಎಂಬ ಸಂಘಟನೆಯ ಜನನ. ಈ ಸಂಘಟನೆ 1991 ನೇ ಅಕ್ಟೋಬರ್ 18 ರಂದು (ತುಲಾಸಂಕ್ರಮಣದಂದು) ಉದಯವಾಯಿತು. 'ಮೂಲ ನಿವಾಸಿಗಳ ಧ್ವನಿಯಾಗಿ ದುಡಿದು ಕೊಡಗನ್ನು ಕರ್ನಾಟಕದ ದಾಸ್ಯ ಸಂಕೋಲೆಯಿಂದ ವಿಮೋಚಿಸುವುದು' ಅದರ ಘನ ಉದ್ದೇಶವೆಂದು ಸಾರಿತು. ಕೊಡಗು ಎಂದರೆ ಕೊಡವ ಜನಾಂಗವೋ ಎಂಬಂತೆ ವಿಶ್ಲೇಷಣೆಯನ್ನು, ಹಲವು ಬೇಡಿಕೆಗಳನ್ನು ಅವರು ಆಗಾಗ ಮಂಡಿಸಿದ್ದಿದೆ.

ಕೊಡಗಿನ ನೆರೆ, ಹೊರ ಜಿಲ್ಲೆಗಳಿಂದ ಬಂದ ಕೊಡಗಿನಲ್ಲಿ ನೆಲಸಿರುವವರೆಲ್ಲರನ್ನು 'ಅಕ್ರಮ ನಿವಾಸಿಗಳು', 'ಪರತಂತ್ರ ಜೀವಿ'ಗಳು ಎಂದೆಲ್ಲಾ ಕರೆದು ಅವರಿಂದಲೇ ಕೊಡಗು ನಾಶವಾಗುತ್ತಿದೆ ಎಂದು ನಿರಂತರ ಪ್ರಚಾರಪಡಿಸಿ ಕೊಡಗಿನ ಯುವಜನರಲ್ಲಿ ಅನ್ಯರ ವಿರುದ್ಧ ದ್ವೇಷ ಭಾವನೆ ಬಿತ್ತಿ ಬೆಳೆಸುವ ಕೆಲಸ ನಿರಂತರವಾಗಿ ಈ ಸಂಘಟನೆ ಕೈಗೊಂಡಿತ್ತು. ಮುಂದೆ ಕುಶಾಲನಗರದಲ್ಲಿ ಶಣ್ಮುಗಂ ಕೊಲೆ ಪ್ರಕರಣದಲ್ಲಿ ಈ ಸಂಘಟನೆಯ ಮುಖಂಡರ ಮೇಲೆ ಕ್ರಮ ಕೈಗೊಂಡಾಗ 'ಲೇವಾಕ್' ನ್ನು ವಿಸರ್ಜಿಸಲಾಯಿತು.

ಆನಂತರ ಮತ್ತೇ ಅದೇ ಸಂಘಟನೆ'ಕೊಡಗು ರಾಜ್ಯ ಮುಕ್ತಿ ಮೋರ್ಚಾ' ಎಂಬ ಹೊಸ ಹೆಸರಿನಲ್ಲಿ ಜನಿಸಿತು.

ಈ ಹೊಸ ಸಂಘಟನೆಯ ಉದ್ದೇಶ ಮತ್ತು ವಿಶ್ಲೇಷಣೆ 'ಲಿವಾಕ್' ನ ವಿಶ್ಲೇಷಣೆಗಿಂತ ಯಾವ ರೀತಿಯೂ ಭಿನ್ನವಾಗಿರಲಿಲ್ಲ.

ಕೊಡಗಿನ ಜನರು ಅನುಭವಿಸುವ ಎಲ್ಲಾ ಸಮಸ್ಯೆಗಳಿಗೂ ಕೊಡಗು ಕರ್ನಾಟಕದೊಂದಿಗೆ ಸೇರಿದುದು ಕಾರಣ. ಕೊಡಗನ್ನು ಕರ್ನಾಟಕ ಸಾಮ್ರಾಜ್ಯಶಾಹಿ ಶೋಷಿಸುತ್ತಿದೆ, ನೆರೆ-ಹೊರೆ ಜಿಲ್ಲೆಯವರನ್ನೊಳಗೊಂಡು ಕೊಡಗಿನ ಹೊರಗಿನವರು 'ಪರತಂತ್ರ ಜೀವಿಗಳು' 'ಕೋಡಿಗಳು' ಇವರಿಂದಲೇ ಕೊಡಗು ನಾಶವಾಗುತ್ತಿದೆ - ಇದು ಅವರ ವಾದ.

ಕೊಡಗಿನ ಹೊರಗಿನವರೆಲ್ಲರನ್ನು ಈ ರೀತಿ ಚಿತ್ರಿಸುವ ಇವರು ಕೊಡಗಿನವರು ಸಹ ಹೊರ, ನೆರೆ ಜಿಲ್ಲೆಗಳಲ್ಲೂ ಹೊರ ರಾಜ್ಯಗಳಲ್ಲೂ ನೆಲೆಸುತ್ತಿದ್ದಾರೆನ್ನುವುದನ್ನು ಸೌಕರ್ಯಪೂರ್ವಕವಾಗಿ ಮರೆಯುತ್ತಾರೆ.

ಈ ಸಂಘಟನೆಯ ವಾದಗಳ ಪೊಳ್ಳುತನ ಬಯಲಿಗೆಳೆದಾಗ, ಅವುಗಳಿಗೆ ಉತ್ತರ ಕೊಡಲು ಶಕ್ತಿ ಇಲ್ಲದಾದಾಗ ಆ ಸಂಘಟನೆಯ 'ಸರ್ವೋಚ್ಚನಾಯಕ' ಶ್ರೀ ನಾಚಪ್ಪನವರು 'ಹಳೆ ಸುಳ್ಳುಗಳಿಗೆ ಹೊಸ ಸುಳ್ಳುಗಳನ್ನು ಹುಟ್ಟು ಹಾಕುತ್ತಾರೆ.

ಪರಿಣಾಮವಾಗಿ ಮತ್ತೇ 1997 ನವೆಂಬರ್ ತಿಂಗಳಲ್ಲಿ ಈ ಸಂಘಟನೆ 'ವಲಸೆ' ಮತ್ತು 'ಮೂಲ ನಿವಾಸಿ' ಎನ್ನುವ ಕಳಂಕವನ್ನು ಕಿತ್ತೆಸೆದಿದ್ದೇವೆ ಎಂದು ಘೋಷಿಸಿತು. ಆನಂತರ ಎಲ್ಲರ ಸಹಾಯದಿಂದ ತಾನು ರಾಜ್ಯಕ್ಕಾಗಿ ಹೋರಾಡುವುದಾಗಿ ವಾದಿಸಲಾರಂಭಿಸಿತು. 'ಕರ್ನಾಟಕ ಸಾಮ್ರಾಜ್ಯಶಾಹಿ' ಎನ್ನುವುದಕ್ಕೆ ಬದಲಾಗಿ 'ಕರ್ನಾಟಕ ಸರ್ಕಾರ' ಎನ್ನಲಾರಂಭಿಸಿತು.

ತಮ್ಮ ವಿಚಾರವನ್ನು ಜನರ ಮಧ್ಯೆ ನಿರಂತರ ಪ್ರಚುರ ಪಡಿಸುತ್ತಾ ಆಗಿಂದಾಗ್ಗೆ ಸಮಾವೇಶಗಳನ್ನು ರ‍್ಯಾಲಿಗಳನ್ನು ಸಂಘಟಿಸುವ ಈ ಸಂಘಟನೆ ತನ್ನ ಬೇಡಿಕೆಯನ್ನು ದೆಹಲಿಗೆ ತಲುಪಿಸಲು 'ದೆಹಲಿ ಚಲೋ'ಗಳನ್ನು ಸಂಘಟಿಸಿತು.

ಜನಮನದಲ್ಲಿ ವಿಷದ ನಂಜು

ಈ ಸಂಘಟನೆಯ ನಿರಂತರ ಪ್ರಚಾರದ ಪರಿಣಾಮವಾಗಿ ಈ ಜಿಲ್ಲೆಯ ಮಧ್ಯಮ ವರ್ಗದ ಯುವಕರಲ್ಲಿ ಕೊಡಗಿನ ಹೊರಗಿನ, ನೆರೆ, ಹೊರೆ ಜಿಲ್ಲೆಗಳ ರಾಜ್ಯಗಳ ಜನರ ಬಗ್ಗೆ ಶತ್ರುತ್ವದ ಭಾವನೆ ಬೆಳೆಯಿತು. ಇದರ ಪರಿಣಾಮವಾಗಿ ನೆರೆ, ಹೊರೆ ಜಿಲ್ಲೆಗಳವರು, ಹೊರ ರಾಜ್ಯಗಳವರು ದೈಹಿಕ, ಮಾನಸಿಕ ಹಿಂಸೆಗೆ ಒಳಗಾದದ್ದಿದೆ. (ಉದಾ: ವಿರಾಜಪೇಟೆ ದೊಂಬಿ ಪ್ರಕರಣ)

ತನ್ನ ಹಳೆಯ ಸುಳ್ಳುಗಳ ಪೊಳ್ಳುತನ ಬಯಲಾದಾಗ ಹೊಸ ಸುಳ್ಳುಗಳನ್ನು ಶ್ರೀ ನಾಚಪ್ಪನವರು ಸೃಷ್ಟಿಸುತ್ತಾರೆ ಎನ್ನುವುದಕ್ಕೆ ಇತ್ತೀಚೆಗೆ ಅವರು ಹೊರಡಿಸಿರುವ 'ಕೊಡಗು ರಾಜ್ಯ ಮುಕ್ತಿ ಮೋರ್ಚಾ' ದ ಬರಲಿರುವ 'ಕೊಡಗು ರಾಜ್ಯ ಸರ್ಕಾರ'(!) ಅದರ ಕಾರ್ಯಕ್ರಮಗಳು - ಪ್ರಸ್ತಾವಿತ ಕೊಡಗು ರಾಜ್ಯ ಆಯವ್ಯಯ(ಬಜೆಟ್) ರೂಪರೇಷೆಗಳು ಎನ್ನುವ ಪುಸ್ತಕ ಸಾಕ್ಷಿ.


ಬಿಜೆಪಿಯು ಕೇಂದ್ರದಲ್ಲಿ ಅಧಿಕಾರ ಹಿಡಿದುದು, ಮತ್ತು ಭಾಷಾವಾರು ಪ್ರಾಂತ್ಯ(ರಾಜ್ಯ)ಗಳನ್ನು ವಿಭಜಿಸಿ ಸಣ್ಣ ರಾಜ್ಯಗಳ ನಿರ್ಮಾಣಕ್ಕೆ ಮುಂದಾಗಿರುವುದು ನಾಚಪ್ಪನವರಿಗೆ ಗರಿಕೆದರಿಸಿದೆ. ಹಾಗಾಗಿ ಈ ನಡುವೆ ಎರಡು ಬಾರಿ ನೂರಾರು ಜನರೊಂದಿಗೆ ದೆಹಲಿ ಯಾತ್ರೆ-ಪ್ರದರ್ಶನ ನಡೆಸಿಯೂ ಆಗಿದೆ. ದೆಹಲಿ ದೊರೆಗಳ ಆಶ್ವಾಸನೆ ಏನೆಂದು ಇನ್ನೂ ಬಹಿರಂಗಗೊಳ್ಳಬೇಕಿದೆ.

ಪ್ರತ್ಯೇಕತಾವಾದಕ್ಕೆ ಪೋಷಣೆ

ಈ ಪ್ರತ್ಯೇಕತಾ ಚಳುವಳಿ ಹುಟ್ಟಿ ಬೆಳೆಯಲು ಮುಖ್ಯಕಾರಣ ಭಾ.ಜ.ಪ. ಅದರ ಹುಟ್ಟಿನಿಂದ ಎಲ್ಲಾ ಹಂತಗಳಲ್ಲೂ ಈ ಪ್ರತ್ಯೇಕತವಾದ ಚಳುವಳಿಗೆ ಎಲ್ಲಾ ರೀತಿಯ ಸಹಾಯ ಸಲಕರಣೆಗಳನ್ನಿತ್ತು ಪೋಷಿಸಿ ಬೆಳೆಸಿದ ಪಕ್ಷ. 'ಹಿಂದೂ ಎಂದೂ ಒಂದು' ಎಂದೂ 'ಭಾರತ ಅಖಂಡ

ರಾಷ್ಟ್ರ'ವೆಂದೂ ಭಾಷಣ ಬಿಗಿಯುವ ಭಾಜಪ ದ ಕೊಡಗಿನ ಮುಖಂಡರು ಈ ಚಳುವಳಿ ಕೊಡಗಿನ ಹೊರಗಿನ ಹಿಂದುಗಳನ್ನು ಅಕ್ರಮ ವಲಸೆಗಾರರೆಂದು ಕರೆಯುವಾಗಲೂ ಒಂದೇ ಒಂದು ಬಾರಿಯೂ ಖಂಡಿಸಲಿಲ್ಲ. ಬದಲಾಗಿ ಭಾಜಪದಲ್ಲಿ ಗುಂಪುಗಾರಿಕೆ ಬೆಳೆದಿದ್ದು ಒಂದು ಗುಂಪು - ಅಧಿಕೃತ ಗುಂಪು - ಭಾಜಪದ ಜಿಲ್ಲಾ ಅಧ್ಯಕ್ಷರನ್ನೊಳಗೊಂಡ ಗುಂಪು - ಪ್ರತ್ಯೇಕತಾವಾದವನ್ನು ಬೆಂಬಲಿಸುತ್ತಿದೆ. 2001 ರ ಜಾಥಾದಲ್ಲಿ ಬಹಿರಂಗವಾಗಿ ಗುರುತಿಸಿಕೊಂಡಿದ್ದಾರೆ. ಮತ್ತೊಂದು ಗುಂಪು ಕೊ.ರಾ.ಮು.ಮೋರ್ಚಾವನ್ನು ವಿರೋಧಿಸುತ್ತದೆ. ತಾನೊಂದು ಶಿಸ್ತುಬದ್ಧ ಪಕ್ಷವೆಂದು ಹೇಳಿಕೊಳ್ಳುವ ಪಕ್ಷ ಭಾಜಪದ ಹಿಂದಿನ ಮೂರು ಶಾಸಕರಲ್ಲಿ ಇಬ್ಬರು ಕರ್ನಾಟಕದಲ್ಲಿ ಕೊಡಗು ಇರಬೇಕೆಂದರೆ, ಮತ್ತೊಬ್ಬರು ತಾನು ಏನೂ ಹೇಳುವುದಿಲ್ಲ ಎನ್ನುತ್ತಾರೆ. ಇದೇ ತರಹ ವಿರಾಜಪೇಟೆ ಕ್ಷೇತ್ರದಲ್ಲಿ ಪ್ರತ್ಯೇಕತಾವಾದಿಗಳಿಗೆ ಪ್ರಾಬಲ್ಯವಿರುವುದರಿಂದ ಪ್ರತ್ಯೇಕತಾ ವಾದವನ್ನು ವಿರೋಧಿಸಿದರೆ ತನಗೆ ವದೆ ಸಿಕ್ಕೀತು ಎನ್ನುವ ಭಯ ಅವರಿಗೆ - ಇದು ಶಿಸ್ತುಬದ್ಧ ಪಕ್ಷದ ತತ್ವ ಬದ್ಧ ಶಾಸಕರ ಸ್ವರೂಪ!

ರಾಷ್ಟ್ರೀಯ ಪಕ್ಷವೆಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷ ಸಹ ಸಂದರ್ಭಸಾಧಕತನ ತೋರುತ್ತಿದೆ. ಪ್ರತ್ಯೇಕತಾವಾದಕ್ಕೆ ತಾವು ವಿರೋಧವೆಂದು ಆ ಪಕ್ಷದ ಅಧ್ಯಕ್ಷರು ಹೇಳಿಕೊಂಡಿದ್ದರೂ ಕಾಂಗ್ರೆಸ್ ಪಕ್ಷದ ಪ್ರಬಲ ಗುಂಪು - ಎಂ.ಎಂ.ನಾಣಯ್ಯ, ಮಿಟ್ಟು ಚೆಂಗಪ್ಪ ಗುಂಪು ಪ್ರತ್ಯೇಕತಾವಾದಿಗಳ ಪ್ರಬಲ ಬೆಂಬಲಿಗರಾಗಿದ್ದಾರೆ. ಸ್ವಂತ ಲಾಭಕ್ಕಾಗಿ ಹ್ರಸ್ವಕಾಲೀನ ಲಾಭಕ್ಕಾಗಿ ದೇಶದ ಹಿತವನ್ನು ಬಲಿ ಕೊಡುವ ಹಾದಿ ಹಿಡಿದಿದ್ದಾರೆ.


ಕನಸುಗಳನ್ನು ಸುಲಭವಾಗಿ ಮಾರಬಲ್ಲ ಏಕೈಕ ಕಮಾಂಡರ್ ನಂದಿ ನೆರವಂಡ ನಾಚಪ್ಪ

ಈ ಗುಂಪು ಪ್ರತ್ಯೇಕತಾ ವಾದವನ್ನು ಅದೆಷ್ಟು ಬೆಂಬಲಿಸುತ್ತಾರೆಂದರೆ ಇತ್ತೀಚೆಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರನ್ನು ಮತ್ತು ಸಮಿತಿಯ ಸದಸ್ಯರುಗಳನ್ನು ಆರಿಸುವಾಗ ಪ್ರತ್ಯೇಕತವಾದದ ವಿರೋಧಿ ಎಂಬ ಏಕಕಾರಣದಿಂದ ಶ್ರೀ ಅಡ್ಡಂಡ ಕಾರ್ಯಪ್ಪ ಎನ್ನುವವರಿಗೆ ಅಧ್ಯಕ್ಷ ಸ್ಥಾನ ಸಿಗದೆ ಶ್ರೀ ನಾಚಪ್ಪನವರ ಕಟ್ಟಾ ಭಕ್ತರೇ ಅಧ್ಯಕ್ಷರಾಗಿ ಆಯ್ಕೆಯಾಗುವಂತೆ ಶ್ರಮಿಸಿ ಜಯಶಾಲಿಯಾಯಿತು. ಸಮಿತಿಯ ಬಹುತೇಕ ಸದಸ್ಯರು ಪ್ರತ್ಯೇಕತಾವಾದದ ಕಟ್ಟಾ ಬೆಂಬಲಿಗರು.

ಕೊಡಗು ಜಿಲ್ಲಾ ಪರಿಷತ್ತು ಪ್ರತ್ಯೇಕತಾವಾದವನ್ನು ವಿರೋಧಿಸಿ ನಿರ್ಣಯವೊಂದನ್ನು ಅಂಗೀಕರಿಸಿದಾಗ ಅಂತಹ ನಿರ್ಣಯ ತಂದದ್ದಕ್ಕಾಗಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದವರು ಕರ್ನಾಟಕ ಸರಕಾರದ ಮಂತ್ರಿಮಂಡಳದ ಸದಸ್ಯ ಶ್ರೀ ಎಂ.ಎಂ.ನಾಣಯ್ಯನವರು. ಶ್ರೀಯುತರ ಪ್ರತ್ಯೇಕತವಾದದ ಪ್ರೀತಿ ಹೊಸತೇನೂ ಅಲ್ಲ. ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷರಾಗಿದ್ದಾಗಲೇ 'ಪ್ರತ್ಯೇಕತಾವಾದ ಚಳುವಳಿ ತಪ್ಪೇನೂ ಅಲ್ಲ' ಎಂದು ಬೆಂಬಲಿಸಿದ್ದವರು ಇವರು. ಶ್ರೀ ನಾಣಯ್ಯನವರ ಚುನಾವಣಾ ಕಚೇರಿ ಉದ್ಘಾಟನೆಯಾದಾಗ ಹಾಜರಿದ್ದ ಮೊದಲ ವ್ಯಕ್ತಿ ಶ್ರೀ ನಂದಿ ನೆರವಂಡ ನಾಚಪ್ಪನವರು. ಶ್ರೀ ನಾಣಯ್ಯನವರು ಗೆದ್ದಾಗ ಅವರ ಜಯ ತನ್ನ ಜಯ ಎಂದು ಸಂತೋಷಪಟ್ಟವರು ಈ ನಾಚಪ್ಪ.

ಮಾಧ್ಯಮಗಳ ಪಾತ್ರ

ಇನ್ನು ಪತ್ರಿಕಾ ಮಾಧ್ಯಮಗಳ ಬಗೆಯೆಂದರೆ ಕೊಡಗಿನಲ್ಲಿ ಪ್ರತ್ಯೇಕತಾವಾದದ ವಿರುದ್ಧ ರಣಕಹಳೆ ಊದಿದ ಕೀರ್ತಿ ವಿರಾಜಪೇಟೆಯಿಂದ ಹೊರಡುವ ವಾರಪತ್ರಿಕೆ 'ಕೊಡಗು ಸಮಾಚಾರ' ಕ್ಕೆ ಸಲ್ಲುತ್ತದೆ.

'ಕೊಡಗು ಸಮಾಚಾರ' ವಾರ ಪತ್ರಿಕೆಯಲ್ಲಿ 'ಕಿಡಿ' ಅಂಕಣದ ಮೂಲಕ ಪ್ರತ್ಯೇಕತಾವಾದದ ವಿರುದ್ಧ ತೀಕ್ಷ್ಣವಾಗಿ ಬರೆದು ಜನರ ವಿಚಾರವನ್ನು ಪ್ರಚೋದಿಸುತ್ತಿದ್ದ ಪ್ರತ್ಯೇಕತಾವಾದಿಗಳ ದ್ವೇಷಕ್ಕೆ ಬಲಿಯಾಗಿರುವ 'ಗೌತಮ'ರ ವಿಶಿಷ್ಟ ಕೊಡಗೆಯೂ ಸಣ್ಣದ್ದಲ್ಲ.

ಪ್ರತ್ಯೇಕತಾವಾದದ ವಿರುದ್ಧ ಬಹುವಾಗಿ ಚಳುವಳಿ ಬೆಳೆದು ಬರುತ್ತಿರುವಾಗಲೇ ಸ್ವಂತ ಲಾಭಕ್ಕಾಗಿ ತಾವು ನಿಷ್ಪಕ್ಷಪಾತಿಗಳೆಂದು ನಟಿಸುತ್ತಾ ಪ್ರತ್ಯೇಕತಾವಾದಿಗಳಿಗೆ ಕುಮ್ಮಕ್ಕು ನೀಡಿರುವ ಕೊಡಗಿನ 'ಪ್ರತಿಷ್ಠಿತ' ಪತ್ರಿಕೆಗಳ ಬಗ್ಗೆ ಒಂದು ಮಾತು. 'ಕಾಫಿ ಲ್ಯಾಂಡ್' ಎಂಬ ಇಂಗ್ಲಿಷ್ ದೈನಿಕ ಬಹಿರಂಗವಾಗಿಯೇ ಪ್ರತ್ಯೇಕತವಾದದ ಮುಖವಾಣಿಯಾಗಿದೆ. ಈ ಜಿಲ್ಲೆಯ ದೊಡ್ಡ ದೊಡ್ಡ ತೋಟ ಮಾಲೀಕರ, ಅಗರ್ಭ ಶ್ರೀಮಂತರ ಕೈಕೂಸಾದ ಈ ಪತ್ರಿಕೆ, ಅವರ ಮಾನಸಿಕ ದಾಸ್ಯದ ಕುರುಹಾದ ಇಂಗ್ಲೀಷ್ ಭಾಷೆಯಲ್ಲಿ ಹಾರಾಡುವ ಪತ್ರಿಕೆ. ಅದೇ ವರ್ಗದ ಪಾದಸೇವೆ ಮಾಡುತ್ತಿರುವ ಪ್ರತ್ಯೇಕತಾವಾದಿ ಚಳುವಳಿಯ ಮುಖಂಡರನ್ನು ಬೆಂಬಲಿಸುವುದರಲ್ಲಿ ಆಶ್ಚರ್ಯವೇನಿಲ್ಲ.

'ನ್ಯಾಯಪಾಲನೆ ನಮ್ಮ ಶಕ್ತಿ', 'ನ್ಯಾಯ ದರ್ಶನ ನಮ್ಮ ಭಕ್ತಿ' ಎಂಬ ಧ್ಯೇಯ ವಾಕ್ಯವನ್ನು ಪ್ರಕಟಿಸುತ್ತಲೇ ನಿಷ್ಪಕ್ಷವಾದಿಗಳೆಂದು ವೇಷ ಧರಿಸಿಕೊಂಡು ಪ್ರತ್ಯೇಕತಾವಾದಿಗಳ ಎಲ್ಲಾ ಕಾರ್ಯಕ್ರಮಗಳನ್ನು ದಪ್ಪಕ್ಷರಗಳಲ್ಲಿ ಪ್ರಕಟಿಸಿ, ಅವರ ವಿರುದ್ಧ ಬರುವ ವಿಚಾರಗಳನ್ನು ಪ್ರಕಟಿಸದೆ ಸ್ವಂತ ಲಾಭಕ್ಕಾಗಿ ದೇಶದ ಹಿತವನ್ನು ಬಲಿಕೊಡಲು ಹೇಸದ 'ಪ್ರತಿಷ್ಠಿತ' ಪತ್ರಿಕೆಗಳು 'ಶಕ್ತಿ' ಮತ್ತು 'ಆಂದೋಲನ'. ತಮ್ಮ ಪತ್ರಿಕೆಯ ಪ್ರತಿಗಳನ್ನು ಪ್ರತ್ಯೇಕತಾವಾದಿಗಳು ಸುಡುವ ಮೂಲಕ ತಮ್ಮ ಫ್ಯಾಸಿಸ್ಟ್ ಮನೋಭಾವವನ್ನು ಪ್ರದರ್ಶಿಸಿಕೊಂಡರೂ ಅದೇ ಚಳುವಳಿಗೆ ಪಾದಸೇವೆ ಮಾಡಿದ ಪತ್ರಿಕೆ ರಾಜಶೇಖರ ಕೋಟಿಯವರ ಸಂಪಾದಕತ್ವದ 'ಆಂದೋಲನ' ದೈನಿಕ, ಮಡಿಕೇರಿಯಿಂದ ಹೊರಡುವ 'ಶಕ್ತಿ' ದೈನಿಕದ ಸಂದರ್ಭಸಾಧಕ ವರ್ತನೆ ವರ್ಣಾತೀತವಾದುದು.

ಆಗಿಂದ್ದಾಗ್ಗೆ ಪ್ರತ್ಯೇಕವಾದದ ವಿರುದ್ಧ ಹೇಳಿಕೆಗಳನ್ನು ಮಾಜಿ ಮಂತ್ರಿ ಎಂ.ಸಿ.ನಾಣಯ್ಯನವರು ನೀಡಿದುದೂ ಇದೆ. ಇತ್ತ ಜನತಾದಳ ಪ್ರತ್ಯೇಕತಾವಾದದ ವಿರುದ್ಧ ಯಾವುದೇ ಸೈದ್ಧಾಂತಿಕ ಹೋರಾಟದಲ್ಲೂ ಭಾಗವಹಿಸಿಲ್ಲ.

ದೃಢವಾಗಿ ಹೋರಾಟ ಸಾರಿದವರು

ಪ್ರತ್ಯೇಕತಾವಾದದ ವಿರುದ್ಧ ಪ್ರಾರಂಭದಿಂದಲೂ ಪಕ್ಷವೆಂಬ ನೆಲೆಯಲ್ಲಿ ಸೈದ್ಧಾಂತಿಕ, ರಾಜಕೀಯ ಹೋರಾಟ ನಡೆಸುತ್ತಾ ದೃಢ ನಿಲುಮೆ ತೆಗೆದುಕೊಂಡು ಅಸಂಧಿಗ್ಧವಾಗಿ ಹೋರಾಡುತ್ತಿರುವ ಏಕಮಾತ್ರ ಪಕ್ಷ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮತ್ತು ಡೆಮಾಕ್ರೆಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್). ಹಲವು ಹೋರಾಟಗಳು - ಜಾಥಾ - ಸಭೆಗಳನ್ನು ಸಂಘಟಿಸಲಾಗಿದೆ. ಆದ್ದರಿಂದಲೇ ಕಮ್ಯುನಿಸ್ಟರೆಂದರೆ ಪ್ರತ್ಯೇಕತಾವಾದಿಗಳು ವಿಷ ಕಾರುತ್ತಾರೆ. ಕಮ್ಯುನಿಸ್ಟರನ್ನು, ಪ್ರಜಾಪ್ರಭುತ್ವವಾದಿಗಳ ಪರರನ್ನು ಅವರು ತಮ್ಮ ಬದ್ಧ ವೈರಿಗಳೆಂದೇ ಬಗೆಯುತ್ತಾರೆ.



ಅಲ್ಲದೇ ಕೊಡಗಿನಲ್ಲಿ ಪ್ರತ್ಯೇಕತಾವಾದ ಸಂಘಟನೆಯ ವಿರುದ್ಧ ದನಿ ಎತ್ತಿದ ರಾಜಕಾರಣಿ ಶ್ರೀ ಅಚ್ಚುಕುಟ್ಟೀರ ಕೆ.ಸುಬ್ಬಯ್ಯನವರು (ಎ.ಕೆ.ಸುಬ್ಬಯ್ಯ). ಆದರೆ ಅವರು ತನ್ನ ದನಿಯನ್ನು ಟೀಕೆಗೆ ಸೀಮಿತಗೊಳಿಸಿದ್ದಲ್ಲದೆ ಸೈದ್ಧಾಂತಿಕ ವಿಮರ್ಶೆಗೆ ಪ್ರಾರಂಭದ ದಿನಗಳಲ್ಲಿ ತೊಡಗಿರಲಿಲ್ಲ. ಆದರೆ ಈಗ ಸೈದ್ಧಾಂತಿಕವಾಗಿಯೂ ಧೈರ್ಯದಿಂದ ಸಿಎನ್‌ಸಿ (ಕೊಡಗು ನೇಶನಲ್ ಕೌನ್ಸಿಲ್) ಯನ್ನು ವಿರೋಧಿಸುತ್ತಿದ್ದಾರೆ. ಕೊಡಗಿನಲ್ಲಿ ನಾಚಪ್ಪ ತಾಲಿಬಾನ್ ಸೃಷ್ಟಿಸಲು ಹೊರಟಿದ್ದಾನೆ ಎಂದು ಇತ್ತೀಚೆಗೆ ಖಾರವಾಗಿ ನುಡಿದಿದ್ದಾರೆ.

ಪ್ರತ್ಯೇಕತಾವಾದದ ತನ್ನ ಉತ್ತುಂಗಕ್ಕೇರಿ ಈ ಜಿಲ್ಲೆಯ ಜನಮಾನಸದಲ್ಲಿ ಭಯದ ವಾತಾವರಣ ಸೃಷ್ಟಿಯಾದಾಗ ನಾಚಪ್ಪನವರ ವಾದ ಸರಣಿಯನ್ನು ತನ್ನ ದಿಟ್ಟಪೂರ್ಣ ಬತ್ತಳಿಕೆಯಿಂದ ಎಸೆದ ವೈಚಾರಿಕ ಅಂಬುಗಳಿಂದ ತುಂಡರಿಸಿ ನೆಲಕ್ಕಪ್ಪಳಿಸಿದ ಕೀರ್ತಿ ಇಂದು ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಚರಿತ್ರೆ ವಿಭಾಗ ಮುಖ್ಯಸ್ಥರಾಗಿರುವ ಯುವ ವಿಧ್ವಾಂಸ ಡಾ. ತಂಬಂಡ ವಿಜಯ ಪೂಣಚ್ಚರವರಿಗೆ ಸಲ್ಲುತ್ತದೆ. ಅವರ ಒಂದು ಲೇಖನ ಪ್ರಜಾವೇದಿಕೆಯ ಹೆಸರಿನಲ್ಲಿ ಪ್ರಕಟವಾಗಿ ಸಹಸ್ರ ಜನರ ಕೈ ಸೇರಿದಾಗ ಅದನ್ನೋದಿದ ಪ್ರತ್ಯೇಕತವಾದ ವಿರೋಧಿಸಿದ ಅಸಂಖ್ಯಾತ ಯುವಕರಲ್ಲಿ ವಿದ್ಯುತ್ ಸಂಚಾರವಾದಂತಾಗಿ ಅವರೆಲ್ಲಾ ಎದ್ದುನಿಂತ ಫಲವೇ ನಾಚಪ್ಪನವರು ನೀಡಿದ್ದ 'ಕೊಡಗು ಬಂದ್' ಸೋಮವಾರಪೇಟೆಯಲ್ಲಿ ಸಂಪೂರ್ಣವಾಗಿಯೂ, ಮಡಿಕೇರಿ ತಾಲೂಕಿನಲ್ಲಿ ಬಹುಭಾಗಗಳಲ್ಲಿ ವಿಫಲವಾಗಲು ಕಾರಣವಾಯಿತು. 'ಪ್ರಜಾವೇದಿಕೆ' ಎಂಬ ಹೆಸರಿನ ವಿಶಾಲ ವೇದಿಕೆ ಪ್ರತ್ಯೇಕತವಾದದ ವಿರುದ್ಧ ರೂಪುಗೊಂಡು ಬೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಪ್ರತ್ಯೇಕತವಾದ ವಿಚಾರಧಾರೆಯನ್ನು ಎದುರಿಸಿ ಜಿಲ್ಲೆಯ ಜನರನ್ನು ಸಂಘಟಿಸಿ ಬೆಳೆಸುವುದಕ್ಕೆ ಹುಟ್ಟಿಕೊಂಡ 'ಪ್ರಜಾವೇದಿಕೆ' ಎಂಬ ಹೆಸರಿನ ವೇದಿಕೆ ಬೆಳೆಯಲು ಶ್ರೀ ದೇವಿಪ್ರಸಾದ್, ಶ್ರೀ ವಿಜಯೇಂದ್ರ, ಡಾ. ತಂಬಂಡ ವಿಜಯ್, ಶ್ರೀ ವಿದ್ಯಾಧರ ಮತ್ತು ಅವರ ಸ್ನೇಹಿತ ಬಳಗದ ಅಹರ್ನಿಶಿ ದುಡಿಮೆಯೇ ಕಾರಣವಾಗಿದೆ. ಓತಪ್ರೋತವಾಗಿ ಹರಿಯುತ್ತಿದ್ದ ಪ್ರತ್ಯೇಕತಾವಾದದ ಪ್ರವಾಹದ ಗತಿಯನ್ನು ನಿಧಾನಗೊಳಿಸಲು ಇವರ ದುಡಿಮೆಯೂ ಕಾರಣವಾಗಿರುವುದರಿಂದಲೇ ಐಕ್ಯತೆಯ ಪ್ರೇಮಿಗಳೆಲ್ಲರ ಗೌರವಕ್ಕೆ ಇವರು ಪಾತ್ರವಾಗಿರುವುದು. ಪ್ರಾರಂಭದಲ್ಲಿದ್ದ ಅನೇಕ ದೋಷಗಳನ್ನು ವೇದಿಕೆಯು ತಿದ್ದಿಕೊಂಡು ಮುಂದುವರೆಯುತ್ತಿದೆ. ಆದರೆ ಸೈದ್ಧಾಂತಿಕವಾಗಿ ಇನ್ನೂ ಹಲವಾರು ದೋಷಗಳು ಈ ಸಂಘಟನೆಯಲ್ಲಿವೆ. ಈ ದೋಷಗಳೇ ಪ್ರತ್ಯೇಕತಾವಾದದ ವಿರುದ್ಧದ ಚಳುವಳಿಯನ್ನು ಇನ್ನೂ ವಿಶಾಲನೆಲೆಯಲ್ಲಿ ಬಲಿಷ್ಟವಾಗಿ ಸಂಘಟಿಸಲು ಬೃಹತ್ ಪ್ರತಿರೋಧ ಒಡ್ಡಲು ಅಡ್ಡಿಯಾಗುತ್ತಿದೆ. ಸದ್ಯ ವೇದಿಕೆ ಸ್ತಬ್ದವಾಗಿದೆ.

'ಲಿವಾಕ್' ನಿಂದ **'ಕೊಡಗು ರಾಜ್ಯ ಮುಕ್ತಿಮೋರ್ಚಾ'** ಆಗಿ ನಾಮಾಂತರ ಹೊಂದಿದ ಈ ಸಂಘಟನೆ ಈಗ ಮತ್ತೆ **ಕೂರ್ಗ್ ನೇಶನಲ್ ಕೌನ್ಸಿಲ್** ಎಂದು ಹೆಸರು ಬದಲಾಯಿಸಿಕೊಂಡಿದೆ. ಎಲ್ಲಾ 18 ಮೂಲ ನಿವಾಸಿ ಭಾಗಗಳ ರಕ್ಷಣೆಗಾಗಿ ರಾಜ್ಯ ಎಂಬ ಘೋಷಣೆಯೊಂದಿಗೆ ಪ್ರಾರಂಭವಾದ ಈ ಸಂಘಟನೆ ಈಗ ಈ ಮೂಲ ನಿವಾಸಿ ವಿಭಾಗಗಳಲ್ಲಿ ತಾರತಮ್ಯ ಅತ್ಯಂತ ಶ್ರೀಮಂತ ವಿಭಾಗವಾದ ಕೊಡವರ ರಕ್ಷಣೆ ಬಗ್ಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿದ್ದು 'ಕೇವಲ ಕೊಡವರಿಗಾಗಿ ಪ್ರತ್ಯೇಕ ಕೊಡಗು ರಾಜ್ಯ' ಎಂಬ ಅತ್ಯಂತ ಪ್ರತಿಗಾಮಿ, ಫ್ಯಾಸಿಸ್ಟ್ ಮಾದರಿ ಘೋಷಣೆಯೊಂದಿಗೆ ರಂಗಪ್ರವೇಶ ಮಾಡಿ ಪ್ರಚಾರ ಪ್ರಕ್ಷೋಭೆ ನಡೆಸುತ್ತಿದೆ. ಇದಕ್ಕೆ ಜನತೆಯ ಪ್ರತಿರೋಧವಿದೆಯೆಂಬುದು ಗಮನಾರ್ಹ.

ಪ್ರತ್ಯೇಕತೆ ವಿರುದ್ಧ ವಿಶಾಲ ಹೋರಾಟದ ಮಹತ್ವ

ತನ್ನ ಸ್ವಂತ ನೆಲೆಯಲ್ಲಿ, ಪ್ರತ್ಯೇಕತಾವಾದದ ವಿರುದ್ಧ ಕೊಡಗಿನ ಜನತೆಯ ನ್ಯಾಯವಾದ ಬೇಡಿಕೆಗಳಿಗಾಗಿ ಜಾಗತೀಕರಣ, ಉದಾರೀಕರಣದ ಪರಿಣಾಮಗಳ ಬಗ್ಗೆ ನಿರಂತರವಾಗಿ ಹೋರಾಟ ಸಂಘಟಿಸುವುದರೊಂದಿಗೆ ಪ್ರತ್ಯೇಕತೆಯ ವಿರುದ್ಧ ಮೂಡಿ ಬರುವ ಎಲ್ಲಾ ಧನಿಗಳನ್ನು ಒಗ್ಗೂಡಿಸಿ ವಿಶಾಲವಾದ ವೇದಿಕೆ ರಚಿಸಿ ಹೋರಾಟವನ್ನು ಮುಂದಕ್ಕೊಯ್ಯುವುದು ಅತ್ಯಗತ್ಯ. ಈ ಪ್ರತ್ಯೇಕತೆ ಕೂಗು ಆಗಾಗ ಬಂದುಹೋಗುವ ಕೂಗಲ್ಲ. ಇದೊಂದು ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವರೂಪದ್ದು ಎಂದು ಅರಿತು ಸದಾ ಜಾಗ್ರತೆಯಿಂದ ಕ್ರಿಯಾಶೀಗೊಳ್ಳಬೇಕಿದೆ.

❍

ಶುಭಾಶಯಗಳೊಂದಿಗೆ,

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ (ಸಿಐಟಿಯು), ಕುಂದಾಪುರ

(ರಿ.ನಂಬ್ರ ಟಿ.ಯು. ಎ/ 446 / 2000)
ಬಸ್ ನಿಲ್ದಾಣದ ಬಳಿ, ಕುಂದಾಪುರ-576 201
ಫೋನ್: 20010


ಪದಾಧಿಕಾರಿಗಳು

ಕಾಂ. ವಿ.ನರಸಿಂಹ	ಅಧ್ಯಕ್ಷರು
ಕಾಂ. ಅಬ್ರಹಾಂ ಕರ್ಕಡ	ಉಪಾಧ್ಯಕ್ಷರು
ಕಾಂ. ಪಿ.ವಿಶ್ವನಾಥ ರೈ	ಉಪಾಧ್ಯಕ್ಷರು
ಕಾಂ. ಜಿ.ಬಿ.ಮಹ್ಮದ್	ಉಪಾಧ್ಯಕ್ಷರು
ಕಾಂ. ಕೆ.ಶಂಕರ್	ಪ್ರಧಾನ ಕಾರ್ಯದರ್ಶಿ
ಕಾಂ. ಎಚ್.ನರಸಿಂಹ	ಜತೆ ಕಾರ್ಯದರ್ಶಿ
ಕಾಂ.ಸಂಜೀವನಾಯ್ಕ	ಜತೆ ಕಾರ್ಯದರ್ಶಿ
ಕಾಂ. ಸಿ.ನಾರಾಯಣ	ಕೋಶಾಧಿಕಾರಿ

ಒಂದು ಪಿಯಾನೋ, ಹವಾನಕ್ಕಾಗಿ

ಮೋಹನ್ ಕುಡ್ಲ

ಅಮೆರಿಕಾದ ಉಸಿರುಕಟ್ಟಿಸುವ ದಿಗ್ಬಂಧನದಿಂದ ಕ್ಯೂಬಾದ ಸಕ್ಕರೆ ಮಾತ್ರ ತತ್ತರಿಸಿರಲಿಲ್ಲ. ಪೆಟ್ರೋಲ್ ಇಲ್ಲದೆ ವಾಹನಗಳು ಮಾತ್ರ ಮೂಲೆ ಸೇರಿರಲಿಲ್ಲ. ಮಕ್ಕಳಿಗೆ ಮಾತ್ರ ಹಾಲು ಇಲ್ಲವಾಗಿರಲಿಲ್ಲ. ಆ ದಿಗ್ಬಂಧನ ಗಿಟಾರ್‌ಗಳಿಂದ ತಂತಿಗಳನ್ನು ಇಲ್ಲವಾಗಿಸಿತ್ತು. ಪಿಯಾನೋಗಳನ್ನು ಗೆದ್ದಲು ತಿನ್ನುವಂತೆ ಮಾಡಿತ್ತು.



ಪಿಯಾನೋದ ಸೇತುವೆ

ಹಡಗು ಇನ್ನೇನು ಅಮೇರಿಕಾದ ಬಂದರನ್ನು ಬಿಡಲು ಸಜ್ಜಾಗಿತ್ತು. ಆಗ ಅವರು ಧಾವಿಸಿ ಬಂದರು. ಹಡಗಿನ ಮೂಲೆ ಮೂಲೆ ಶೋಧಿಸಿದರು. ಪ್ರಖರ ಬೆಳಕು ಚಿಮ್ಮಿತು. ಲೋಹಶೋಧಕಗಳು ಅತ್ತಿಂದಿತ್ತ ಇತ್ತಿಂದತ್ತ ಓಡಿಯಾಡಿತು. ತರಬೇತಿ ಪಡೆದ ಪೊಲೀಸ್ ನಾಯಿಗಳು ಬೊಗಳಿದವು. ವಾಹ್! ಪತ್ತೆಯಾಗಿಯೇ ಹೋಯಿತು. ಅಲ್ಲ, ಅದು ಭಯೋತ್ಪಾದಕನಲ್ಲ. ಕೆಟ್ಟು ಕೂತಿದ್ದ ಹತ್ತಾರು ಪಿಯಾನೋಗಳು. ಬಂದವರ ಕಣ್ಣು ಕೆಂಪಗಾಯಿತು. ತಕ್ಷಣವೇ ಪಿಯಾನೋಗಳನ್ನು ಹೊರಗಿಡಿ ಕತ್ತಲೆಯ ಕೋಣೆಗೆ ತಳ್ಳಿ ಎಂದು ಆಜ್ಞೆ ಹೊರಡಿಸಿದರು.

ಪಿಯಾನೋ, ಕೇವಲ ಪಿಯಾನೋ ಅಮೆರಿಕಾದ ಎದೆಯನ್ನು ನಡುಗಿಸಿಹಾಕಿತ್ತು. ಅಣ್ವಸ್ತ್ರಗಳನ್ನು ಹೊಂದಿದ್ದ ಜಗತ್ತಿನ ಸಾರ್ವಭೌಮನಂತೆ ಮೀಸೆ ತಿರುವುತ್ತಿದ್ದ ಅಮೆರಿಕಾ ಕೆಟ್ಟುಹೋದ, ರಾಗ ನುಡಿಸಲಾಗದ ಪಿಯಾನೋಗಳನ್ನು ಕಂಡು ಬೆಚ್ಚಿ ಬಿದ್ದಿತ್ತು. ತನ್ನ ಒಂದೇ ಒಂದು ಕಣ್ಸನ್ನೆಯಲ್ಲಿ ಜಗತ್ತನ್ನು ಭಸ್ಮ ಮಾಡಿಹಾಕುತ್ತೇನೆ ಎಂಬ ಹಮ್ಮಿನಿಂದ ಬೀಗುತ್ತಿದ್ದ ಅದೇ ಅಮೆರಿಕಾ ಪಿಯಾನೋಗಳನ್ನು ಕಂಡು ತತ್ತರಿಸಿತ್ತು. ಹಡಗಿನತ್ತ ಧಾವಿಸಿ ಬಂದವರು ಸಾಮಾನ್ಯ ಪೋಲೀಸರಾಗಿರಲಿಲ್ಲ. ಯುದ್ಧಾಸ್ತ್ರ ಹಾಗೂ ಅಣು ತಂತ್ರಜ್ಞಾನ ವಿಭಾಗದ ಅಧಿಕಾರಿಗಳು. ಹಿಡಿದುಹಾಕಿದ್ದು ಪಿಯಾನೋಗಳನ್ನು.

ಅಮೆರಿಕಾದ ಎದೆಯಲ್ಲಿ ಅವಲಕ್ಕಿ ಕುಟ್ಟುವಂತೆ ಮಾಡಿದ್ದು 53 ವರ್ಷದ ಬೆನ್ ಥ್ರೆಹಾಫ್ಟ್. ಅಮೆರಿಕಾದ ವಿರುದ್ಧ ಆತ ಬಳಸಿದ್ದು ಪಿಯಾನೋ ಎಂಬ ಅಸ್ತ್ರವನ್ನು. ಅಮೆರಿಕಾದಲ್ಲಿ ಪಾಠ ತಲೆಗೆ ಹತ್ತದೆ ಪಿಯಾನೋ ರಿಪೇರಿಗೆ ಶರಣಾದ ಬೆನ್ ಈಗ ಅಮೆರಿಕಾದೊಳಗಿದ್ದೇ ಅಮೆರಿಕಾದ ವಿರುದ್ಧ ಕತ್ತಿ ಝಳಪಿಸಲಾರಂಭಿಸಿದ್ದ. ಯಾವ ಕ್ಯೂಬಾದ ವಿರುದ್ಧ ಅಮೆರಿಕಾ ಯಾರೂ ಹೋಗಬಾರದು, ಏನನ್ನೂ ಕಳಿಸಬಾರದು, ಏನನ್ನೂ ತರಿಸಬಾರದು ಎಂದು ಕಟ್ಟಳೆಗಳನ್ನು ಹೇರಿತ್ತೋ ಅದೇ ಕ್ಯೂಬಾಗೆ ಪಿಯಾನೋಗಳನ್ನು ಕಳಿಸುವ ಮೂಲಕ ಅಮೆರಿಕಾದ ನೀತಿ ನಿಯಮ ಗಾಳಿಗೆ ತೂರಿದ್ದ. ಕ್ಯೂಬಾದ ಮೇಲೆ ದಿಗ್ಬಂದನ ಹೇರಿ ಅದನ್ನು ಉಸಿರು-ಗಟ್ಟಿಸಿದ್ದ ಅಮೆರಿಕಾ ಈಗ ಪಿಯಾನೋ ಕಂಡು ಬೆಚ್ಚಿ ಕೂತಿತ್ತು. ಎಲ್ಲೆಡೆ ಎಲ್ಲೆಲ್ಲಿ ಕೆಟ್ಟು ಕೂತ ಪಿಯಾನೋಗಳಿದೆಯೋ ಅದನ್ನೆಲ್ಲಾ ಹೊತ್ತು ತಂದು ಕ್ಯೂಬಾದ ರಾಜಧಾನಿ ಹವಾನಾಕ್ಕೆ ಕಳಿಸಲು ಆರಂಭಿಸಿದ್ದ. ನಾದದ



ವಿಶ್ವದ ಪ್ರಖ್ಯಾತ ಫುಟ್‌ಬಾಲ್ ಮಾಂತ್ರಿಕ ಆಟಗಾರ ಅರ್ಜೆಂಟೀನಾದ ಮರಡೋನಾರವರು ತಮ್ಮ ಕಾಲಿನ ಮೇಲಿರುವ 'ಚೆ' ಚಿತ್ರವನ್ನು ಫಿಡೆಲ್ ಕ್ಯಾಸ್ಟ್ರೋರವರಿಗೆ ತೋರಿಸುತ್ತಿದ್ದಾರೆ. 'ಚೆ' ಎಂದರೆ ಸೋಲರಿಯದ ಹೋರಾಡುವ ಶಕ್ತಿ ಅಲ್ಲವೇ?

ನದಿ ಹರಿಯುತ್ತಿದ್ದ ಕ್ಯೂಬಾದಲ್ಲಿ ಹಾಡು ಕುಣಿತ ನಿಲ್ಲದಿರಲು ಈ ಅಳಿಲೂ ಸಹ ಶ್ರಮಿಸುತ್ತಿತ್ತು. ಕ್ಯೂಬಾಗೆ ಪಿಯಾನೋ ಕಳಿಸುವ ಮೂಲಕ ಅಮೆರಿಕಾದ ದಿಗ್ಬಂಧನದ ನೀತಿಗಳನ್ನು ಜಗತ್ತು ನೋಡಿ ನಗುವಂತೆ ಮಾಡಿದ್ದ. ಒಂದು ಪಿಯಾನೋ, ಎರಡು ಪಿಯಾನೋ, ಮೂರು ಪಿಯಾನೋ..... 'ಸೆಂಡ್ ಎ ಪಿಯಾನೋ ಟು ಹವಾನಾ' ಚಳುವಳಿಯಾಗಿ ರೂಪುಗೊಂಡಿತ್ತು. ತುಕ್ಕು ಹಿಡಿದ, ತಂತಿ ಕಿತ್ತು ಹೋಗಿದ್ದ, ಗೆದ್ದಲು ತಿಂದು ಹಾಕುತ್ತಿದ್ದ ಪಿಯಾನೋಗಳು ಈಗ ಪ್ರತಿಭಟನೆಯ ಅಸ್ತ್ರಗಳಾಗಿದ್ದವು.

ಶಾಲೆಯಲ್ಲಿ ಓದು ತಲೆಗೆ ಹತ್ತುವುದಿಲ್ಲ ಎಂದು ಗೊತ್ತಾದ ತಕ್ಷಣ ಬೆನ್ ಥೆಹಾಫ್ಟ್ ಕೈಗೆ ರಿಪೇರಿ ಸಲಕರಣೆಗಳನ್ನೆತ್ತಿಕೊಂಡ. ಹಾಳಾದ ಪಿಯಾನೋಗಳ ಬೆನ್ನತ್ತಿದ್ದ. ನ್ಯೂಯಾರ್ಕಿನ ಪ್ರಖ್ಯಾತ ಕಂಪನಿಗಳಲ್ಲಿ ಪಿಯಾನೋಗಳಿಗೆ ನಾದ ಕೂರಿಸುವುದನ್ನು ಕಲಿತ. ಆಗಲೇ ಆತನಿಗೆ ಪಿಯಾನೋವಾದಕ ವಿಕ್ಟರ್ ಚಾರ್ಲ್ಸ್ ಸಂಪರ್ಕ ಬಂತು. ಪಿಯಾನೋ ಜೊತೆಗೆ ಮಾರ್ಕ್ಸ್‌ವಾದದ ಪಾಠ. ವಿಕ್ಟರ್ ಸತ್ತಾಗ ಈತನಿಗಾಗಿ 28 ಸಾವಿರ ಡಾಲರುಗಳನ್ನು ಬಿಟ್ಟುಹೋಗಿದ್ದ. ಬೆನ್‌ನೊಳಗಿದ್ದ ಕ್ಯೂಬಾ ಕನಸು ಮತ್ತೆ ತಲೆ ಎತ್ತಿತು. ಕೈಯಲ್ಲಿ ರಿಪೇರಿ ಸಲಕರಣೆಗಳ ಜೊತೆ ಅಡ್ಡಾಡುತ್ತಲೇ ಇದ್ದ ಬೆನ್ ಕ್ಯೂಬಾದ ಸಂಗೀತದ ಸಾಮಗ್ರಿ ತರಿಸುವ ಕಂಪನಿಗೆ ಈ ಹಿಂದೆಯೇ ನಿಮ್ಮಲ್ಲಿಗೆ ಪಿಯಾನೋ ರಿಪೇರಿ ಮಾಡಲು ಬರಲೇ ಎಂದು ಕೇಳಿದ್ದ. ಉತ್ತರ ಬಂದಿರಲಿಲ್ಲ. ಈಗ ಹಣ ಕೈಸೇರಿದ್ದೇ ಕ್ಯೂಬಾವನ್ನು ಹೇಗಾದರೂ ಮಾಡಿ ನೋಡಿಯೇಬಿಡಲು ಸಜ್ಜಾದ. ಅಮೆರಿಕನ್ನರಿಗೆ ಕ್ಯೂಬಾಗೆ ಹೋಗುವುದು ಎಂದರೆ ತಾವಾಗಿಯೇ ಜೈಲಿನ ಬಾಗಿಲು ಬಡಿದು ಒಳಗೆ ಹೋಗಿ ಕೂರುವುದು ಎಂದೇ ಅರ್ಥ. ಅಮೆರಿಕಾದ ನೀತಿ ಅಷ್ಟು ಕಠಿಣವಾಗಿತ್ತು. ಅಮೆರಿಕಾದ ನೀತಿ ಲೇವಡಿ ಮಾಡಲೆಂದೇ ಒಂದಷ್ಟು ಜನ ಒಟ್ಟಾದರು. ಕದ್ದು ಮುಚ್ಚಿ ಕ್ಯೂಬಾಗೆ ಹಾರಿಯೇಬಿಟ್ಟರು. 'ಪ್ರೀತಿಯ ಕರೆ ಕೇಳಿ ಆತ್ಮನ ಮೊರೆಕೇಳಿ ಬಂದಿಲ್ಲಿಗೆ ನೀ ನಿಂತು ದೀಪ ಹಚ್ಚಾ...' ಎನ್ನುವ ದೇಶ ಅದು. ಬೆನ್ ಕ್ಯೂಬಾ ಪ್ರೀತಿಸುವವರ ದಂಡಿನಲ್ಲಿ ಒಂದಾಗಿಹೋದ. ಕ್ಯೂಬಾಗೆ ಕೊಡಲು ಬೆನ್ ಕೈಯಲ್ಲಿ ಏನಿತ್ತು - ಪಿಯಾನೋ ರಿಪೇರಿ ಮಾಡುವ ಸಲಕರಣೆ ಹೊರತು! ಅಮೆರಿಕಾ ಅದಕ್ಕೆ ಬೆಚ್ಚಿಬಿತ್ತು.

"ಕ್ಯೂಬಾಗೆ ನೀವು ಹೋಗುವಿರಾದರೆ ಗಿಟಾರ್ ತಂತಿಗಳನ್ನು ತೆಗೆದುಕೊಂಡು ಹೋಗಿ, ಕ್ಯೂಬನ್ನರಿಗೆ ನೀವು ಕೊಡಬಹುದಾದ ಉತ್ತಮ ಕೊಡುಗೆ ಅದು" - ಕಾಲಲ್ಲಿ ಚಕ್ರ ಕಟ್ಟಿಕೊಂಡಿರುವವರ ಬೈಬಲ್ ಎಂದೇ ಹೆಸರಾದ ಲೋನ್ಲಿ ಪ್ಲಾನೆಟ್ ಪ್ರವಾಸಿ ಗೈಡ್‌ಗಳ ವೆಬ್‌ಸೈಟ್‌ನಲ್ಲಿ ಕಂಡ ಪತ್ರ ಇದು. ಸೈಮನ್ ಬರೆದಿದ್ದ ಪತ್ರ. 'ಯಾವ ಮರ, ಇದು ಯಾವ ಕೋಗಿಲಾ...' ಬೇಂದ್ರೆ ಕವನ ನೆನಪಾಯಿತು. ಕ್ಯೂಬಾಗೂ ಸೈಮನ್‌ಗೂ ಯಾವ ನಂಟು. ಆದರೆ ಸೈಮನ್‌ಗೆ ಗೊತ್ತಿತ್ತು. ಹಾಡು ಕುಣಿತಗಳನ್ನು ಉಸಿರಿನಂತೆ ಪ್ರೀತಿಸುವ ಕ್ಯೂಬಾದಲ್ಲಿ ಗಿಟಾರ್‌ಗಳು ತಂತಿಗಳಿಲ್ಲದೆ ಇರಬಾರದು, ಪಿಯಾನೋ ಉಸಿರುಗಟ್ಟಿ ಮೂಲೆ ಸೇರಬಾರದು. ಅಮೆರಿಕಾದ ಉಸಿರುಕಟ್ಟಿಸುವ ದಿಗ್ಬಂಧನದಿಂದ ಕ್ಯೂಬಾದ ಸಕ್ಕರೆ ಮಾತ್ರ ತತ್ತರಿಸಿರಲಿಲ್ಲ. ಪೆಟ್ರೋಲ್ ಇಲ್ಲದೆ ವಾಹನಗಳು ಮಾತ್ರ ಮೂಲೆ ಸೇರಿರಲಿಲ್ಲ. ಮಕ್ಕಳಿಗೆ ಮಾತ್ರ ಹಾಲು ಇಲ್ಲವಾಗಿರಲಿಲ್ಲ. ಆ ದಿಗ್ಬಂಧನ ಗಿಟಾರ್‌ಗಳಿಂದ ತಂತಿಗಳನ್ನು ಇಲ್ಲವಾಗಿಸಿತ್ತು. ಪಿಯಾನೋಗಳನ್ನು ಗೆದ್ದಲು ತಿನ್ನುವಂತೆ ಮಾಡಿತ್ತು.

ಗಿಟಾರ್‌ಗೆ ಬೇಕಾದದ್ದು ನೈಲಾನ್ ಅಥವಾ ಸ್ಟೀಲ್‌ನ ತಂತಿ. ಕ್ಯೂಬಾದ ಮೇಲೆ ಹರಡಿದ ಅಮೆರಿಕಾದ ಕರಾಳ ನೆರಳು ಗಿಟಾರ್‌ಗಳ ತಂತಿಗಳನ್ನೂ ಬಿಡದೆ ನುಂಗಿಹಾಕಿತ್ತು. ಆದರೆ ಉಸಿರೆತ್ತಿದರೆ ಹಾಡುವ, ಕುಣಿತವನ್ನೇ ನಡಿಗೆ ಮಾಡಿಕೊಂಡಿರುವ ಕ್ಯೂಬಾದಲ್ಲಿ ಅಮೆರಿಕಾಗೆ ಸೆಡ್ಡು ಹೊಡೆಯುವ ಬಯಕೆಗೆ ಮಿತಿ ಎಲ್ಲಿ? ಕ್ಯೂಬನ್ನರು ತಮ್ಮ ಗಿಟಾರ್‌ಗಳಿಗೆ ಎಲೆಕ್ಟ್ರಿಕ್ ತಂತಿಗಳನ್ನೇ ಬಿಗಿದು ಅದರಿಂದಲೇ ನಾದ ಹೊಮ್ಮಿಸುತ್ತಿದ್ದರು.

ಬೆನ್ ಕ್ಯೂಬಾಗೆ ಕಾಲಿಟ್ಟಾಗ ಅಲ್ಲಿನ ಪಿಯಾನೋಗಳ ಸ್ಥಿತಿ ನೋಡಿದ. ಕೆಟ್ಟುಹೋದ ಪಿಯಾನೋಗಳನ್ನು ರಿಪೇರಿ ಮಾಡಲು ಬೇಕಾದ ಸಲಕರಣೆಗಳಿಲ್ಲ. ಹೊಸ ತಂತ್ರಜ್ಞಾನದ ಪರಿಚಯವಿಲ್ಲ. ಕೇಳಿದರೆ ಕೊಡುವವರಿಲ್ಲ. ಹೀಗಾಗಿ ದೇಶದ ಬಹುತೇಕ ಪಿಯಾನೋಗಳು ಗೆದ್ದಲು ತಿನ್ನುತ್ತಿತ್ತು. ಕ್ಯೂಬಾದ ಮಹತ್ವದ ಪಿಯಾನೋವಾದಕನ ಮನೆಗೆ ಹೋದ ಬೆನ್ ಅವರ ಪಿಯಾನೋದ ಮೇಲೆ ಕೈಯಾಡಿಸಿದ. ಪಿಯಾನೋದಲ್ಲಿ ಎಲ್ಲಾ ಮಣೆಗಳೂ ಇರಲೇ ಇಲ್ಲ. ಬೆನ್ ಸಂಗೀತಗಾರನತ್ತ ನೋಡಿದ. ಪ್ರಶ್ನೆ ಅರ್ಥವಾಯಿತೇನೋ?

ಆತ ನಾವು ಇರುವ ಮಣೆಗಳನ್ನು ಬಳಸಿಯೇ ಸಂಗೀತ ಸೃಷ್ಟಿಸುತ್ತೇವೆ



ಎಂದ. ಬೆನ್ ಮುಖದಲ್ಲಿ ನೋವಿನಗೆರೆ ಹಾದು ಹೋಯಿತು. ಸರಿಗಮ ಪದನಿಸ ದಲ್ಲಿ ಸ ಮಣಿಯೇ ಇಲ್ಲದೇ ಹೋದರೆ ಉಳಿದದ್ದಷ್ಟೇ ಸಂಗೀತ. ಅಮೆರಿಕಾ ಕ್ಯೂಬಾದ ಎದೆಯೊಳಗಿನ ಸರಿಗಮನ ವನ್ನು ಕಿತ್ತು ತಿನ್ನುತ್ತಿತ್ತು. ಬೆನ್ ಕ್ಯೂಬಾದ ತಂತಿ ಮೀಟುವ ನಿರ್ಧಾರ ಮಾಡಿದ.

ಅಮೆರಿಕಾಗೆ ಮರಳಿದ ಬೆನ್ ತನ್ನ ಗೆಳೆಯರ ಬಳಿ ಇದ್ದ ಮೂಲೆ ಸೇರಿದ್ದ ಪಿಯಾನೋಗಳನ್ನೆಲ್ಲಾ ಸಂಗ್ರಹಿಸಿದ. ಸಿಕ್ಕಿದ್ದೆಲ್ಲಾ ಹಡಗು ಹತ್ತಿ ಕ್ಯೂಬಾದ ದಿಕ್ಕಿನೆಡೆಗೆ ಪಯಣ ಬೆಳೆಸಿತು. ಕ್ಯೂಬಾಗಾಗಿ ಪಿಯಾನೋ ಕೇಳುವ ಬೆನ್‌ನ ಹಿಂದೆ ಹತ್ತು-ಹಲವರು ನಿಂತರು. ನೋಡ ನೋಡುತ್ತಿದ್ದಂತೆಯೇ ಹವಾನಾಕ್ಕಾಗಿ ಪಿಯಾನೋ ಆಂದೋಲನವಾಗಿ ಬದಲಾಗತೊಡಗಿತು. ಅಮೆರಿಕಾದ ಮೂಲೆ ಮೂಲೆಯಿಂದ ಪಿಯಾನೋಗಳು ಬರಲಾರಂಭಿಸಿತು. ಆಂದೋಲನ ಗಡಿ ದಾಟಿತು. ಯುರೋಪ್ ದೇಶಗಳು ಹವಾನಾಕ್ಕಾಗಿ ಎಂದು ಕೇಳಿದೊಡನೆ ತಮ್ಮ ಬಳಿ ಇದ್ದ ಪಿಯಾನೋಗಳನ್ನು ಕಳಿಸಲಾರಂಭಿಸಿದರು. ಆಗ ಬಿತ್ತು ಅಮೆರಿಕಾದ ಕೆಂಗಣ್ಣು. ಮೊದಲು ತೆರಿಗೆ, ನಂತರ ಪಿಯಾನೋಗಳನ್ನು ಹಿಂಸೆಗೆ, ಮಾನವ ಹಕ್ಕುಗಳ ಉಲ್ಲಂಘನೆಗೆ ಬಳಸುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಡಲು ಕೇಳಿತು. 'ಹಾಡು ಹರಡಬೇಕು, ಮಾತು ಮರೀಬೇಕು' ಎಂದು ನಂಬಿದ್ದವರು ದಿಗ್ಭ್ರಾಂತರಾದರು. ಮಾನವ ಹಕ್ಕುಗಳನ್ನು ಜಗತ್ತಿನಾದ್ಯಂತ ದಮನ ಮಾಡುತ್ತಿರುವ ಅಮೆರಿಕಾ ಹಾಡನ್ನು ಮಾನವ ಹಕ್ಕುಗಳ ಉಲ್ಲಂಘನೆಯಾಗಿ ನೋಡಿತು.

ಇಷ್ಟಕ್ಕೇ ಸುಮ್ಮನಾಗಲಿಲ್ಲ. ಕ್ಯೂಬಾದ ಪಿಯಾನೋಗಳನ್ನು ರಿಪೇರಿ ಮಾಡಿದ್ದಕ್ಕಾಗಿ ಬೆನ್‌ನನ್ನು ಜೈಲಿಗೆ ತಳ್ಳುವ ಬೆದರಿಕೆ ಹಾಕಿತು. 13 ಲಕ್ಷ ಡಾಲರ್ ದಂಡ ವಿಧಿಸಿತು. ಬೆನ್ ನಿಮ್ಮ ಸಹವಾಸವೇ ಬೇಡ ಕ್ಯೂಬಾದಲ್ಲಿಯೇ ಇರುತ್ತೇನೆ ಎಂದ. ಅಮೆರಿಕಾದಲ್ಲಿನ ಮುಖವಾಡದ ಹಬ್ಬ ಹಾಲೋವಿನ್-ನಂದು ಮುಖ ಮರೆಸಿಕೊಂಡು ಕ್ಯೂಬಾಗೆ ಪ್ರಯಾಣ ಬೆಳೆಸಿದ. ಮತ್ತೆ ವಾಪಸ್ ಬಂದರೂ ಅಮೆರಿಕಾ ದಂಡ ವಿಧಿಸುವ ಮಾತೆತ್ತಲಿಲ್ಲ.


ಈಗ ಪ್ರತೀ ಫೆಬ್ರವರಿ ಬಂತೆಂದರೆ ಕ್ಯೂಬಾದಲ್ಲಿ ಪಿಯಾನೋ ಜಾತ್ರೆಯೇ ನಡೆಯುತ್ತದೆ. 'ಸೆಂಡ್ ಎ ಪಿಯಾನೋ ಟು ಹವಾನಾ' ಸಂಘಟನೆಯ ತಂಡ ಕ್ಯೂಬಾಗೆ ಬಂದಿಳಿಯುತ್ತದೆ. ಹತ್ತು ದಿನಗಳ ಕಾಲ ಹವಾನಾದಲ್ಲಿ ಮಾತ್ರವಲ್ಲದೆ ದೇಶದ ಎಲ್ಲೆಡೆ ಸುತ್ತಿ ಕೆಟ್ಟಿರುವ ಪಿಯಾನೋಗಳನ್ನು ರಿಪೇರಿ ಮಾಡುತ್ತದೆ. ಹೊಸ ರಾಗ ಕಲಿಸುತ್ತದೆ. ಕ್ಯೂಬಾದ ಎಲ್ಲಾ ಶಾಲೆಗಳಿಗೆ ಭೇಟಿಕೊಟ್ಟು ತಾವು ಕೊಡುಗೆಯಾಗಿ ತಂದ ಪಿಯಾನೋಗಳನ್ನು ವಿತರಿಸುತ್ತದೆ. ಮತ್ತೆ ಮುಂದಿನ ಫೆಬ್ರವರಿಗೆ ಬರುವುದಾಗಿ ಮಾತುಕೊಟ್ಟು ಮರಳುತ್ತದೆ.

ಯಾವ ದೇಶದಲ್ಲಿ ಸ್ನೇಹವನ್ನು ಅಪರಾಧವಾಗಿಸಲಾಗಿದೆಯೋ ಅದೇ ದೇಶದಿಂದ ಬರುವ ಈ ಸೇತುವೆಯ ಕೆಲಸಗಾರರನ್ನು ನೋಡಿ ಕ್ಯೂಬಾ ವಿಸ್ಮಿತವಾಗಿದೆ. ಗೆಳೆಯನ ಮನೆಗೆ ಪಿಯಾನೋದ ಸೇತುವೆ ಕಟ್ಟಲಾಗಿದೆ. ಹೀಗೆ ಕ್ಯೂಬಾಗೆ ಇದುವರೆಗೂ ಸುಮಾರು 200 ಪಿಯಾನೋಗಳು ಬಂದಿಳಿದಿವೆ. ನೂರಾರು ಪಿಯಾನೋಗಳು ಸಂಗೀತ ಹೊಮ್ಮಿಸುವ ಸ್ಥಿತಿಯಲ್ಲಿದೆ.

ಕ್ಯೂಬಾ ಈಗ ಈ ಚಳುವಳಿಗೆ ಕ್ಯೂಬಾ ರಾಷ್ಟ್ರೀಯ ಕಲಾಶಿಕ್ಷಣ ವ್ಯವಸ್ಥೆಯ ಮನ್ನಣೆ ಕೊಟ್ಟು ಗೌರವಿಸಿದೆ. ಕ್ಯೂಬಾದಲ್ಲಿಯೇ ಇಬ್ಬರು ಬೀಡುಬಿಟ್ಟು ಇಡೀ ವರ್ಷ ಸಂಗೀತ ಪೆಟ್ಟಿಗೆಯ ಕೊರಳು ಸರಿಮಾಡುತ್ತಲೇ ಇರುತ್ತಾರೆ. ಅಮೆರಿಕಾದ ಅನೇಕ ಸಂಗೀತ ತಜ್ಞರು ಈಗ ಕ್ಯೂಬಾಗೆ ಬರುತ್ತಾರೆ. ಕಾರ್ಯಾಗಾರ ನಡೆಸುತ್ತಾರೆ. ಹೊಸ ಸಂಶೋಧನೆ ತಿಳಿಸುತ್ತಾರೆ. ಅದೇ ರೀತಿ ಅಮೆರಿಕಾಗೆ ಬರುವವರಿಗೆ ಮಾತ್ರ ಅಮೆರಿಕಾ ಬಾಗಿಲುಮುಚ್ಚಿದೆ.

ಯಾವ ದೇಶದಲ್ಲಿ ಸ್ನೇಹವನ್ನು ಅಪರಾಧವಾಗಿಸಲಾಗಿದೆಯೋ ಅದೇ ದೇಶದಿಂದ ಬರುವ ಈ ಸೇತುವೆಯ ಕೆಲಸಗಾರರನ್ನು ನೋಡಿ ಕ್ಯೂಬಾ ವಿಸ್ಮಿತವಾಗಿದೆ. ಗೆಳೆಯನ ಮನಗ ಪಿಯಾನೋದ ಸೇತುವೆ ಕಟ್ಟಲಾಗಿದೆ.

ಬೆನ್ ಈಗ ಕ್ಯೂಬಾದಲ್ಲಿ ಪಿಯಾನೋ ಕಾರ್ಖಾನೆ ಸ್ಥಾಪಿಸಿದ್ದಾರೆ. ಅದಕ್ಕೆ ಕೊಟ್ಟ ಹೆಸರು ಹೆಲ್ಮ್ಸ್-ಬ್ರೆಹಾಫ್ಟ್ ಕಂಪನಿ. ಯಾವ ಹೆಲ್ಮ್ಸ್ ಕ್ಯೂಬಾಕ್ಕೆ ಹೋಗಬಾರದು, ಬರಬಾರದು, ಏನೂ ಕೊಡಬಾರದು, ತರಬಾರದು ಎಂದು ಶಾಸನ ಬರೆದನೋ ಆ ಸೆನೆಟ್‌ನ ಹೆಸರನ್ನೇ ಕಾರ್ಖಾನೆಗೆ ಇಡಲಾಗಿದೆ. ಪಿಯಾನೋಗಳು ಹೆಲ್ಮ್ಸ್ ನ ಕಾಯಿದೆಗಳನ್ನು ಅಣಕಿಸುತ್ತಿವೆ.



ಕವಿ ಜಿಎಸ್‌ಎಸ್ ಕೇಳುತ್ತಾರೆ -
'ಹಾಡು ಹಳೆಯದಾದರೇನು?...............'

ಶುಭಾಶಯಗಳೊಂದಿಗೆ,

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಗ್ರಾಮೀಣ ನಿರುದ್ಯೋಗವನ್ನು ನಿವಾರಿಸಲು ಶ್ರಮಿಸುತ್ತಿರುವ ಅನುಪಮ ಸಂಸ್ಥೆ

ಗ್ರಾಮಾಂತರ ಪ್ರದೇಶದಲ್ಲಿ ಖಾದಿ ಗ್ರಾಮೋದ್ಯೋಗಗಳನ್ನು ಕೈಗೊಳ್ಳುವವರಿಗೆ ಯೋಜನಾ ವರದಿಯನ್ನು ಆಧಾರಿಸಿ ಅಂಚು ಹಣ ಯೋಜನೆಯಡಿ ಧನಸಹಾಯ ಹಾಗೂ ತಾಂತ್ರಿಕ ನೆರವನ್ನು ನೀಡಲಾಗುವುದು.

ಗ್ರಾಮೀಣ ಕೈಗಾರಿಕೆಯ ಪರಿಮಿತಿಯಲ್ಲಿ ಬರದಿರುವ ಉದ್ದಿಮೆಗಳು :

ಅ) ಮಾಂಸ ತಯಾರಿಸುವ ಮತ್ತು ಮಾಂಸವನ್ನು ಉಪಯೋಗಿಸಿದ ತಿಂಡಿ ತಿನಿಸುಗಳನ್ನು ತಯಾರಿಸುವ ಸರಬರಾಜು ಮಾಡುವ ಉದ್ದಿಮೆ.

ಆ) ಬಿಡಿ : ಪಾನ್ : ಸಿಗಾರ : ಸಿಗರೇಟ್ : ತಂಬಾಕು ಮತ್ತು ಇತರೆ ಮಾದಕ ವಸ್ತುಗಳು ಹಾಗೂ ಟಾಡಿ, ಇತರೆ ಮಾದಕ ಪಾನೀಯಗಳನ್ನು ತಯಾರಿಸುವ ಉದ್ದಿಮೆ ಹಾಗೂ ಇಂತಹ ವಸ್ತು : ಪಾನಿಗಳು ಸರಬರಾಜು ಮಾಡುವ ಡಾಭಾಗಳು : ಹೋಟೆಲುಗಳು .

ಇ) ಟೀ, ಕಾಫಿ, ರಬ್ಬರ್, ರೇಷ್ಮೆ (ಗೂಡು ಬಿಡಿಸುವಿಕೆ) ಹೂಗಾರಿಕೆ, ಹಣ್ಣುಗಾರಿಕೆ ಸಾಗುವಳಿ ಮತ್ತು ಬಳಸುವ ಉದ್ದಿಮೆಗಳು ಹಾಗೂ ಮೀನು, ಹಂದಿ, ಕೋಳಿ, ಕುರಿ ಸಾಗಾಣಿಕೆ , ಹೈನುಗಾರಿಕೆ, ಖಾದಿ ಮತ್ತು ಪಾಲಿವಸ್ತ್ರ ಮತ್ತು ನೂಲು ಹಾಗೂ ಬಟ್ಟೆ ತಯಾರಿಸುವ ಇತರೆ ಉದ್ದಿಮೆಗಳು.

ಈ) ಪರಿಸರ ಮಾಲಿನ್ಯ ಸಮಸ್ಯೆ ಸೃಷ್ಟಿಸುವ ಪಾಲಿಥಿನ್ ಕೈ ಚೀಲ ಹಾಗೂ ಇತರೆ ವಸ್ತುಗಳನ್ನು ತಯಾರಿಸುವ ಉದ್ದಿಮೆ.

ಮೇಲ್ಕಂಡ ಉದ್ದಿಮೆಗಳನ್ನು ಹೊರತು ಪಡಿಸಿ, ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸುವ ಉದ್ದಿಮೆಗಳಿಗೆ ಅಂಚು ಹಣ ಯೋಜನೆ (ಮಾರ್ಜಿನ್ ಮನಿ ಸ್ಕೀಮ್)ಅಡಿಯಲ್ಲಿ ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕ್ ,ಸಹಕಾರ ಬ್ಯಾಂಕ್‌ಗಳು, ಮತ್ತು ರಾಜ್ಯ ಹಣಕಾಸು ಸಂಸ್ಥೆಗಳ ಮೂಲಕ ಧನಸಹಾಯವನ್ನು ನೀಡಲಾಗುವುದು. ಈ ಯೋಜನೆಯಡಿಯಲ್ಲಿ ಸಾಲ ಪಡೆಯಲು ಸದರಿ ಬ್ಯಾಂಕ್‌ಗಳನ್ನು ಹಾಗೂ ಖಾದಿ ಮಂಡಲಿಯನ್ನು ಸಂಪರ್ಕಿಸುವುದು.

ಮಂಡಲಿಯ ನೆರವಿನಿಂದ ಸ್ಥಾಪಿಸಲ್ಪಟ್ಟ ಘಟಕಗಳು ಉತ್ಪಾದಿಸುವ ಎಲ್ಲಾ ವಸ್ತುಗಳನ್ನು ನಿಸರ್ಗ ಎಂಬ ಮಾರುಕಟ್ಟೆ ಬ್ರಾಂಡಿನ ಮೂಲಕ ಮಾರಾಟ ಮಾಡಲಾಗುತ್ತಿದೆ. ನಿಸರ್ಗ ಬ್ರಾಂಡಿನ ವಸ್ತುಗಳನ್ನು ಉತ್ತಮ ಜೀವನಕ್ಕಾಗಿ ಬಳಸಿರಿ.

ಉದ್ದಿಮೆದಾರರು ಏಳು ವರ್ಷಗಳಲ್ಲಿ ಸಾಲವನ್ನು ಮರುಪಾವತಿ ಮಾಡಿದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುವ ಸಹಾಯಧನವನ್ನು ಪಡೆಯಲು ಅರ್ಹರಾಗುವರು.

ಹೆಚ್ಚಿನ ವಿವರಗಳಿಗೆ ಜಿಲ್ಲೆಯ

ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳನ್ನು

ಅಥವಾ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ

ನಂ.10, ಜಸ್ಮಾ ಭವನ ರಸ್ತೆ , ಬೆಂಗಳೂರು-560 052

ದೂರವಾಣಿ ಸಂಖ್ಯೆ: 2262950, 2262951, 2262938

ಇಲ್ಲಿ ಸಂಪರ್ಕಿಸುವುದು.

ಕ್ರಾಂತಿಕಾರಿ ವಂದನೆಗಳೊಂದಿಗೆ,

ಹರಿಹರ ಪಾಲಿಫೈಬರ್ಸ್
ಎಂಪ್ಲಾಯೀಸ್ ಯೂನಿಯನ್

ಕುಮಾರ ಪಟ್ಟಣಂ
ಹರಿಹರ - 581123

With Best Compliments From

Bangalore Turf Club Ltd.

Telephone : Office : 2262391/2/3
Secretary : 2261379
Fax : 080-2256995
Telex : 845-2555 HORS IN

POST BOX No. 5038
RACE COURSE ROAD
BANGALORE - 560 001

FIXTURES

Given below are the dates on which the inter venue betting opetations will be conducted at B.T.C. on Mysore & Pune Races for the Month oj September, 2001.

Satuarday (Eve Champion Trophy)	1st September, 2001	Pune
Sunday (Parx-General Rajendrasinhji Trophy)	2nd September, 2001	Pune
Thursday	6th September, 2001	Mysore
Friday (Mysore 1000 Guiness)	7th September, 2001	Mysore
Saturday	8th September, 2001	Pune
Sunday (Southern Command Gold Tropy)	9th September, 2001	Pune
Thursday	13th September, 2001	Mysore
Friday (Maharaja's Gold Cuo)	14 th September, 2001	Mysore
Saturday	15th September, 2001	Pune
Sunday	16th September, 2001	Pune
Wednesday	19th September, 2001	Mysore
Thursday (Mysore 2000 Guiness)	20th September, 2001	Mysore
Friday	21st September, 2001	Pune
Saturday (Idar Gold Trophy)	22 nd September, 2001	Pune
Sunday (S.A. Poonawalla Trophy)	23rd September, 2001	Pune
Thursday	27th September, 2001	Mysore
Friday (Governor's Gold Cup)	28th September, 2001	Mysore
Saturday	29th September, 2001	Pune
Sunday	30th September, 2001	Pune

(Above dates are subject to alteration)

S.Nirmal Prasad
Secretary

August 20, 2001

ಪುರಸಭೆ ಕಾರ್ಯಾಲಯ ರಾಮದುರ್ಗ

ವಿವಿಧ ಯೋಜನೆಗಳಡಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿದ ವಿವರ

ಶೇಕಡಾ 18 ರ ಯೋಜನೆ

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮಾಜಗಳ ಮಂಗಳ ಕಾರ್ಯಗಳಿಗೆ ಉಪಯೋಗಿಸಲು ಭಾಂಡೆ ಸಾಮಾನ ಪೂರೈಸಿದ ವಿವರ

- ಬಸವೇಶ್ವರ ಯುವಕ ಮಂಡಳ, ಗಡದಕೇರಿ, ರಾಮದುರ್ಗ
- ವಾಲ್ಮೀಕಿ ಯುವಕ ಮಂಡಳ, ಪಡಕೋಟಗಲ್ಲಿ, ರಾಮದುರ್ಗ
- ಅಯ್ಯಪ್ಪಸ್ವಾಮಿ ಟ್ರಸ್ಟ್ ಕಮಿಟಿ, ರಾಧಾಪೂರ ಪೇಟ, ರಾಮದುರ್ಗ
- ಪರಿಶಿಷ್ಟ ಪಂಗಡ ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಹೊಲಿಗೆ ಯಂತ್ರ ಪೂರೈಸಿದೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಾದರಕ್ಷೆ (ಚಪ್ಪಲ) ತಯಾರು ಮಾಡುವ ಉದ್ಯೋಗದವರಿಗೆ ಹೊಲಿಗೆ ಯಂತ್ರ ಪೂರೈಸಿದೆ.
- ಬಸವೇಶ್ವರ ಯುವಕ ಮಂಡಳ ಗಡದಕೇರಿ ರಾಮದುರ್ಗ ಇವರಿಗೆ ಟಿ.ವ್ಹಿ., ಫರ್ನಿಚರ್ ಪೂರೈಸಿದೆ.

2. ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆಯಡಿಯಲ್ಲಿ ಬಡವರಿಗೆ ಸಾಲ ಮತ್ತು ಮಕ್ಕಳಿಗೆ ಯೂನಿಫಾರಂ ವಿತರಿಸಿದ್ದು

- 101 (ಒಂದನೂರಾ ಒಂದು) ಬಡ ಮತ್ತು ಚಿಕ್ಕ ವ್ಯಾಪಾರ ಮಾಡುವ ಫಲಾನುಭವಿಗಳಿಗೆ ಸಾಲ ಮಂಜೂರಿ ಮಾಡಿದೆ.
- 1 (ಒಂದು) ಡಾಕ್ವಾ, ಗುಂಪುಗಳಿಗೆ ಸಾಲ ಮಂಜೂರು ಮಾಡಿಸಿದೆ.
- ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿಯ ಬಡ ವಿದ್ಯಾರ್ಥಿಗಳಿಗೆ ಯೂನಿಫಾರಂ ಮತ್ತು ಆಟಿಕೆ ಸಾಮಾನುಗಳನ್ನು ಕೊಡಲಾಗಿದೆ.
- ಸರಕಾರಿ ಮಾಧ್ಯಮಿಕ ಶಾಲೆಗೆ ಡೆಸ್ಕ್ ವಿತರಿಸಲಾಗಿದೆ.
- ಗ್ರಂಥಾಲಯಕ್ಕೆ ಪದವಿ ಪುಸ್ತಕಗಳು ಮತ್ತು ಗ್ಯಾಸ ವಿತರಿಸಲಾಗಿದೆ.
- ಬಾಲವಾಡಿಗಳಿಗೆ ಹೋಗುವ ಮಕ್ಕಳಿಗೆ ಸ್ಕೂಲ್‌ಬ್ಯಾಗ್ ವಿತರಿಸಲಾಗಿದೆ.
- ಬಡರೇಖೆಗಿಂತ ಕೆಳಗೆ ಇರುವ 40 ಜನರಿಗೆ ಕಂಪ್ಯೂಟರ ತರಬೇತಿ ನೀಡಲಾಗಿದೆ.
- ಬಡ ರೇಖೆಗಿಂತ ಕೆಳಗೆ ಇರುವ 40 ಜನರಿಗೆ ಹೊಲಿಗೆ ಮತ್ತು ಕಸೂತಿ, ತರಬೇತಿ ಹಾಗೂ ಟೂಲ್‌ಕಿಟ್ಸ್ ಮತ್ತು ಸೈಫಂಡರಿ ಪೂರೈಸಿದೆ.
- ಹದಿಮೂರು(13) ಉಳಿತಾಯ ಗುಂಪುಗಳ ರಚನೆ.
- ಆರ್.ಸಿ.ವ್ಹಿ.ಗಳಿಗೆ ಉಚಿತ ನೇತ್ರ ಚಿಕಿತ್ಸಾ ಕೊಡಲಾಗಿದೆ.

3. ಕಾಮಗಾರಿ ವಿಭಾಗ

- ಐವತ್ತು ಲಕ್ಷ ರೂಪಾಯಿ (50 ಲಕ್ಷ ರೂ) ಹುಡ್ಕೊ ನೆರವಿನಿಂದ ರಸ್ತೆ ಕೆಲಸ ಮತ್ತು ಗಟಾರ ಕೆಲಸ ಹಾಗೂ ಬೀದಿ ದೀಪ ಅಳವಡಿಸಿದ್ದು ಪ್ರಗತಿಯಲ್ಲಿದೆ.
- 52.83 ಲಕ್ಷ ರೂ. (ಹತ್ತನೆಯ ಹಣಕಾಸು ಯೋಜನೆ) ಗಳಲ್ಲಿ ರಸ್ತೆ, ಗಟಾರ, ವಾಣಿಜ್ಯ ಮಳಿಗೆಗಳ ನಿರ್ಮಾಣ ಕೆಲಸಕೈಗೊಂಡಿದ್ದು ಪ್ರಗತಿಯಾಲ್ಲಿದೆ.

ಆರ್.ಎಂ.ಕೊಡಗೆ	ಬಿ.ಆರ್.ದೊಡಮನಿ	ಆರ್.ಸಿ.ಫತ್ತೇಪೂರ
ಮುಖ್ಯಾಧಿಕಾರಿಗಳು	ಚೇರಮನ್‌ರು	ಅಧ್ಯಕ್ಷರು

ಪುರಸಭೆಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು

ಶುಭಾಶಯಗಳೊಂದಿಗೆ,


ತುಂಗಭದ್ರ ಗ್ರಾಮೀಣ ಬ್ಯಾಂಕ್ ನೌಕರರ ಪತ್ತಿನ ಸಹಕಾರ ಸಂಘ

ಗೋಪಾಲ ಭಟ್.ಕೆ.	ಅಧ್ಯಕ್ಷರು
ಎಸ್. ವಿಶ್ವನಾಥ್	ಉಪಾಧ್ಯಕ್ಷರು
ಕಾಲಿಕ್ ಸಾಬ್	ಕಾರ್ಯದರ್ಶಿ

ಡೈರೆಕ್ಟರ್ಸ್ :

ಧರ್ಮಪ್ಪ	ಗಣಪತಿ ಹೆಗಡೆ
ಜಯಪ್ರಕಾಶ್	ಸುಬಾನ್ ಅಲಿ
ಶ್ರೀಮತಿ ರಾಜಲಕ್ಷ್ಮಿ	ಬಿ. ವೆಂಕಟೇಶ್
ಪಾಟಿಲ್ ಮಲ್ಲನಗೌಡ	ಎ.ಆರ್. ಶೆಣೈ
ಬಸವರಾಜ ಪುಣ್ಯಮೂರ್ತಿ	ಎಸ್. ಲೋಕೇಂದ್ರ
ಜೆ. ಸತ್ಯಬಾಬು	ದೇವರಾಜ
ಎನ್.ಎಸ್. ರಮಾನಂದ	ಭೋಜರಾಜ್

ಶುಭಾಶಯಗಳೊಂದಿಗೆ,



ಶ್ರೀ ರಂಗಸುಬ್ಬಣ ಹೆಚ್. ಬಳ್ಳಾರಿ

ಅಧ್ಯಕ್ಷರು

1. ಅಕ್ಕಿ ಗಿರಣಿ ಫಿಟ್ಟರ್ಸ್ ಮತ್ತು ಹೆಲ್ಪರ್ಸ್ ಯೂನಿಯನ್ (ರಿ) ಕಾರಟಗಿ
2. ಲಾರಿ ಚಾಲಕರು ಮತ್ತು ಉಪಚಾಲಕರ ಸಂಘ (ರಿ) ಕಾರಟಗಿ
3. ಖಾಲಿ ಚೀಲ ರಿಪೇರಿ ಯೂನಿಯನ್ (ರಿ) ಕಾರಟಗಿ
4. ಟೆಂಪೊ ಟ್ರ್ಯಾಕ್ಸ್ ಮತ್ತು 407 ಯೂನಿಯನ್ ಕಾರಟಗಿ
5. ಗೌರವಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ, ಕಾರಟಗಿ



ಶ್ರೀ ರುದ್ರಪ್ಪ ಎಸ್. ಹಂಚಿನಾಳ

ಕಾರ್ಯದರ್ಶಿ

1. ನೆಹರೂ ವಿದ್ಯಾಸಂಸ್ಥೆ (ರಿ)ಹುಳ್ಳಿಹಾಳ
2. ಅಕ್ಕಿ ಗಿರಣಿ ಹಮಾಲರ ಸಂಘ (ರಿ) ಕಾರಟಗಿ
3. ಲಾರಿ ಚಾಲಕರು ಮತ್ತು ಉಪಚಾಲಕರ ಸಂಘ (ರಿ) ಕಾರಟಗಿ
4. ಖಾಲಿ ಚೀಲ ರಿಪೇರಿ ಯೂನಿಯನ್ (ರಿ) ಕಾರಟಗಿ
5. ಟೆಂಪೋ ಟ್ರ್ಯಾಕ್ಸ್ ಮತ್ತು 407 ಯೂನಿಯನ್ (ರಿ) ಕಾರಟಗಿ
6. ಅಕ್ಕಿ ಗಿರಣಿ ಫಿಟ್ಟರ್ಸ್ ಮತ್ತು ಹೆಲ್ಪರ್ಸ್ ಯೂನಿಯನ್, ಕಾರಟಗಿ
7. ಶ್ರೀ ಶರಣಬಸವೇಶ್ವರ ಹಮಾಲರ ಸಂಘ, ಕಾರಟಗಿ
8. ರೇಣುಕಾ ವಿದ್ಯಾಸಂಸ್ಥೆ (ರಿ) ಕಾರಟಗಿ
9. ಅಮರೇಶ್ವರ ವಿದ್ಯಾಸಂಸ್ಥೆ, ಕೂಕನಪಳ್ಳಿ

ಶುಭಾಶಯಗಳೊಂದಿಗೆ

ಕಾರ್ಮಿಕ ವರ್ಗ ಯಾವುದೇ ಸೌಲಭ್ಯಗಳನ್ನು ಆಡಳಿತ ವರ್ಗದ ಕೃಪಾಕಟಾಕ್ಷದಿಂದ ಪಡೆದಿಲ್ಲ. ಆಡಳಿತ ವರ್ಗಕ್ಕೆ ಕೈಗಾರಿಕಾ ಪರಿಸ್ಥಿತಿಯಲ್ಲಿ ಬಿಕ್ಕಟ್ಟು ಉಂಟಾದಾಗ ಅದರ ಭಾರವನ್ನು ಕಾರ್ಮಿಕ ವರ್ಗದ ಮೇಲೆ ಹೇರುತ್ತದೆ. ಇದರಿಂದ ಕಾರ್ಮಿಕರು ಅಸಹಾಯಕರಾಗದೆ, ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಸಹ ಐಕ್ಯ ಹೋರಾಟ ನಡೆಸಿದರೆ, ನಮ್ಮ ಹಕ್ಕುಗಳಿಗೆ ಹೆಚ್ಚಿನ ಧಕ್ಕೆ ಬರುವುದಿಲ್ಲ.

ಕಾಂ. ಎಸ್.ಸೂರ್ಯನಾರಾಯಣ ರಾವ್
ಅಧ್ಯಕ್ಷರು

ಪಿ.ಹನುಮಂತರಾಯಪ್ಪ
ಮೊದಲನೇ ಉಪಾಧ್ಯಕ್ಷರು

ಬಿ.ಗಂಗಾಧರಯ್ಯ
ಎರಡನೇ ಉಪಾಧ್ಯಕ್ಷರು

ಟಿ.ಶಿವಶಂಕರ್
ಪ್ರಧಾನ ಕಾರ್ಯದರ್ಶಿ

ಎಂ.ನಾರಾಯಣಸ್ವಾಮಿ
ಸಹ ಕಾರ್ಯದರ್ಶಿ

ಎಸ್.ಟಿ.ಅರಸು
ಸಂಘಟನಾ ಕಾರ್ಯದರ್ಶಿ


ಡಿ.ಎ.ವಿಜಯಭಾಸ್ಕರ್
ಖಜಾಂಚಿ

ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್

(ರಿ.ನಂ. 147)


ನಂ 33, 'ಶ್ರಮಜೀವಿ ಭವನ',
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 030

ಜಾಗತೀಕರಣದ ಮಾರುಕಟ್ಟೆಯಲ್ಲಿ ಸಂಸ್ಕೃತಿ



ಸೀತಾರಾಮ್ ಯೆಚೂರಿ

ಜಾಗತೀಕರಣ, ವಾಣಿಜ್ಯೀಕರಣ ಮತ್ತು ಕೋಮುವಾದೀಕರಣದ ಯುಗದಲ್ಲಿ ಸಂಸ್ಕೃತಿಯ ಸ್ವರೂಪವನ್ನು ಹಾಗೆಯೇ ವರ್ಗಹೋರಾಟದಲ್ಲಿ ಅದು ವಹಿಸುವ ಪಾತ್ರವನ್ನೂ ಕುರಿತು ಇಲ್ಲಿ ಮಾತನಾಡಿದ್ದಾರೆ



ನಮ್ಮ ದೇಶದ ಅತ್ಯಂತ ದೊಡ್ಡ ಮೇಧಾವಿಗಳು ಭಾಗವಹಿಸಿರುವ ಕಾಂ। ಇ.ಎಂ.ಎಸ್. ರವರ ಗೌರವಾರ್ಥ ನಡೆಯುತ್ತಿರುವ ಈ ವಿಚಾರ ಸಂಕಿರಣದಲ್ಲಿ ಸಮಾರೋಪ ಭಾಷಣಮಾಡಲು ನನ್ನನ್ನು ಕರೆದಿರುವುದು ನನಗೆ ಸಂದ ದೊಡ್ಡ ಗೌರವ ಎಂದು ನಾನು ಭಾವಿಸುತ್ತೇನೆ. ಚರ್ಚೆಯ ವಿಷಯ ಮತ್ತು ಇಂದಿನ ಸಮಾರಂಭ ಈ ಎರಡಕ್ಕೂ ನಾನು ನ್ಯಾಯ ಒದಗಿಸಲು ಸಮರ್ಥನಲ್ಲವೇನೊ ಎಂಬುದನ್ನು ನಾನು ಮೊದಲು ಒಪ್ಪಿಕೊಳ್ಳಬೇಕು. ಆದ್ದರಿಂದ ನನ್ನ ಕೆಲವು ಚಿಂತನೆಗಳನ್ನು - ಆಳವಾದ ಅಧ್ಯಯನವಿಲ್ಲದ ಹಾಗೂ ತಾರ್ಕಿಕ ರೂಪದಲ್ಲಿಲ್ಲದ - ಅಲ್ಲಲ್ಲಿ ನಾನು ಕಂಡ ಹಾಗೂ ಕೇಳಿದ ವಿಚಾರಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ.

ಈ ವರ್ಷದ ವಿಚಾರ ಸಂಕಿರಣಕ್ಕೆ ಆರಿಸಿರುವ ವಿಷಯ ಕಾಂ। ಇ.ಎಂ.ಎಸ್.ರವರಿಗೆ ಗೌರವ ಸಲ್ಲಿಸಲು ಅತ್ಯಂತ ಸೂಕ್ತವಾದದ್ದೆಂಬುದು ನನ್ನ ಅನಿಸಿಕೆ. ಏಕೆಂದರೆ ಎಲ್ಲಕ್ಕೂ ಮಿಗಿಲಾಗಿ ಕಾಂ। ಇ.ಎಂ.ಎಸ್. ಒಬ್ಬ ಸಾಂಸ್ಕೃತಿಕ ವ್ಯಕ್ತಿ. ಕಾಂ। ಇ.ಎಂ.ಎಸ್.ಗೆ ಸಂಸ್ಕೃತಿಯು ಬೇರೆಲ್ಲದರಂತೆ, ಸಿದ್ಧಾಂತಗಳ ಹಾಗೂ ಭಾವನೆಗಳ ಅಮೂರ್ತ ಆಟವಲ್ಲ. ಒಂದಕ್ಕೊಂದು ಪರಸ್ಪರ ವಿರುದ್ಧ ವರ್ಗಗಳ ನಡುವೆ ನಡೆಯುವ ತೀವ್ರ ಸಂಘರ್ಷದ ಒಂದು ರಣರಂಗವೇ ಈ ಸಂಸ್ಕೃತಿ ಎಂಬುದನ್ನು ಕಾಂ. ಇ.ಎಂ.ಎಸ್. ನಂಬಿದ್ದರು. ವರ್ಗ ಹೋರಾಟವೇ ಕಾಂ। ಇ.ಎಂ.ಎಸ್.ರ ಸಂಸ್ಕೃತಿ. ವರ್ಗವೈರುದ್ಯಗಳ ಈ ಸಮಾಜದಲ್ಲಿ ವರ್ಗಹೋರಾಟವು ಪ್ರತಿಯೊಬ್ಬ ವ್ಯಕ್ತಿಯ - ಪ್ರಜ್ಞಾಪೂರ್ವಕವಾಗಿ ತಿಳಿದಿರಲಿ ಅಥವಾ ತಿಳಿಯದಿರಲಿ - ಸಂಸ್ಕೃತಿ. ಸಂಸ್ಕೃತಿಯ ವಿಷಯದಲ್ಲಿ ಕಾಂ. ಇ.ಎಂ.ಎಸ್.ರ ಅಭಿಪ್ರಾಯಗಳನ್ನು ಮತ್ತು ಲೇಖನಗಳನ್ನು ಸದಾ ಈ ಮೂಸೆಯಲ್ಲಿ ಇಟ್ಟು ನೋಡಬೇಕಾಗುತ್ತದೆ.

ಮುಖ್ಯ ವಿಷಯಕ್ಕೆ ಬರುವ ಮೊದಲು ನನಗಾದ ಒಂದು ಅನುಭವ ನೆನಪಿಗೆ ಬರುತ್ತದೆ. 1986ರಷ್ಟು ಹಿಂದೆ, ಅಂದು ಪೂರ್ವ ಜರ್ಮನಿಯ ಆಳುವ ಪಕ್ಷವಾಗಿದ್ದ ಸೋಷಿಯಲಿಸ್ಟ್ ಯೂನಿಟಿ ಪಾರ್ಟಿಯ ಮಹಾಧಿವೇಶನದಲ್ಲಿ ಭಾಗವಹಿಸಲು ಬರ್ಲಿನ್‌ಗೆ ಕಾಂ। ಇ.ಎಂ.ಎಸ್.ರ ಜತೆ ಹೋಗಲು ನನಗೆ ಹೇಳಿದ್ದರು. ನಮಗೆ ಸಿಗುವ ಬಿಡುವಿನ ವೇಳೆಯಲ್ಲಿ ನಾವು ಏನು ಮಾಡಲು ಇಷ್ಟ ಪಡುತ್ತೇವೆ ಎಂಬುದನ್ನು

ತಿಳಿಯಲು ನಮ್ಮ ಅತಿಥೇಯರು ಬಯಸಿದ್ದರು. ಆಗ "ಬರ್ಲಿನರ್ ಎನ್‌ಸೆಂಬಲ್' ಎಂದು ಕರೆಯಲ್ಪಡುತ್ತಿದ್ದ (ಪ್ರಾಯಶಃ ಈಗಲೂ ಕರೆಯಲ್ಪಡುತ್ತಿರುವ) ಪೂರ್ವ ಬರ್ಲಿನ್‌ನಲ್ಲಿರುವ ಬ್ರೆಕ್ಟ್‌ನ ರಂಗಮಂದಿರಕ್ಕೆ ಭೇಟಿ ಕೊಡಬಹುದೆಂದು ನಾನು ಸೂಚಿಸಿದೆ. ಇಎಂಎಸ್ ತಕ್ಷಣವೇ ಒಪ್ಪಿಕೊಂಡರು ಹಾಗೂ ನಾವು ಬ್ರೆಕ್ಟ್‌ನ ಒಂದು ಕಿರುಗವನ "ಕ್ರಾಂತಿಕಾರಿಯ ಪ್ರೀತಿಗೋಸ್ಕರ" ಆಧಾರದ ಒಂದು ರಂಗಪ್ರದರ್ಶನವನ್ನು ನೋಡಲು ಹೋದೆವು. ಆ ಕಾರ್ಯಕ್ರಮ ಸುಮಾರು ಎರಡೂವರೆ ಘಂಟೆಯ ಅವಧಿಯದಾಗಿತ್ತು. ಅಂತಹ ಕಿರುಗವನವನ್ನು ಹೇಗೆ ಎರಡೂವರೆ ಗಂಟೆಗಳ ಕಾಲ ನಾಟಕದ ಮೂಲಕ ತೋರಿಸಬಹುದೆಂಬ ಕುತೂಹಲ ನಮಗಿತ್ತು. ಕಾರ್ಯಕ್ರಮ ಪ್ರಾರಂಭವಾದಹಾಗೆ, ಪ್ರತಿಯೊಬ್ಬ ನಟನನ್ನು ಪ್ರೇಕ್ಷಕರಿಗೆ ಪರಿಚಯಿಸುವ ಬ್ರೆಕ್ಟ್‌ನ ಪರಿಪಾಟದ ಜತೆಯಲ್ಲೇ ನಮಗೊಂದು ರೋಮಾಂಚಕಾರಿ ಅನುಭವವಾಯಿತು. ನಾಟಕ ನಡೆಯುತ್ತಿರುವ ಸಮಯದಲ್ಲೇ ಹಿನ್ನೆಲೆಯಲ್ಲಿ ಒಂದು ಚಲನಚಿತ್ರವನ್ನು ತೋರಿಸಲಾಗುತ್ತಿತ್ತು. ಆ ಚಲನಚಿತ್ರದ ಸಂಭಾಷಣೆ ನೇರವಾಗಿ ನಾಟಕದ ಜೊತೆ ಹೊಂದಿಕೊಳ್ಳುತ್ತಿರಲಿಲ್ಲ. ಆದರೆ, ಅವೆರಡೂ ಸೇರಿ ಒಂದು ಪರಿಣಾಮಕಾರಿಯಾದ ಹಿನ್ನೆಲೆಯ ವಾತಾವರಣವನ್ನು ಸೃಷ್ಟಿಮಾಡಿ ಒಂದು ರಂಗನಾಟಕ ಮತ್ತು ಒಂದು ಚಲನಚಿತ್ರ ನೀಡಬಹುದಾದ ಅನುಭವಕ್ಕೆ ಮೀರಿದಂತಹ ಅಮೋಘ ಪರಿಣಾಮವನ್ನು ಅದು ಬೀರಿತು. ಕಾ। ಇ.ಎಂ.ಎಸ್.ಗೆ ಈ ಪ್ರಯೋಗ ತುಂಬಾ ಹಿಡಿಸಿತು.

ಭಾರತದಲ್ಲಿ ಅನೇಕ ವರ್ಷಗಳ ಹಿಂದೆ ಇಂತಹ ಹೊಸ ಪ್ರಾಕಾರಗಳೊಂದಿಗೆ ಪ್ರಯೋಗ ಮಾಡುವ ಪ್ರಯತ್ನವನ್ನು ಮೇಧಾವಿ ಚಲನ ಚಿತ್ರಕಾರ ಋತ್ವಿಕ್ ಘಟಕ್ ನಡೆಸಿದ್ದರು. ಭವಿಷ್ಯದ ಕಲೆಯ ಪ್ರಾಕಾರಗಳು ಇಂದಿನ ಪ್ರಾಕಾರಗಳ ಬೆಸುಗೆಯಾಗಿರುತ್ತದೆ ಎಂದು ಅವರು ಹೇಳಿದ್ದರು. ಅದರಲ್ಲೂ ನಿರ್ದಿಷ್ಟವಾಗಿ ರಂಗಭೂಮಿ, ನೃತ್ಯ ಹಾಗೂ ಚಲನ ಚಿತ್ರ ಈ ಮೂರೂ ಪ್ರಾಕಾರಗಳು ಬೆಸೆದುಕೊಂಡು ನೆರಳಿನ ಪ್ರಾಕಾರಕ್ಕೂ ಮೀರಿದ ಒಂದು ಹೊಸ ಪ್ರಾಕಾರದ ಕುರಿತು ಅವರು ಹೇಳಿದ್ದರು. ಜಾಗತೀಕರಣದಡಿಯಲ್ಲಿ ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಧಾಳಿಯನ್ನು ಎದುರಿಸಲು ಇಂತಹ ಸೃಜನಾತ್ಮಕ ಪ್ರಾಕಾರಗಳ ಹುಟ್ಟು ಎಷ್ಟು ಪ್ರಮುಖವಾಗುತ್ತದೆ ಎಂಬುದನ್ನು ನಾವು ಮುಂದೆ ನೋಡೋಣ.

ಇಂದಿನ ವಿಶ್ವದಲ್ಲಿ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವಲ್ಲಿ ಜಾಗತೀಕರಣ, ವಾಣಿಜ್ಯೀಕರಣ ಮತ್ತು ಕೋಮುವಾದೀಕರಣ ಇವು ಒಂದಕ್ಕೊಂದು ಸಂಬಂಧವಿಲ್ಲದ ಅಂಶಗಳೇನಲ್ಲ. ಇಂದಿನ ಭಾರತೀಯ ಸಂದರ್ಭದಲ್ಲಿ ಈ ಮೂರು ಒಗ್ಗೂಡಿ, ಆಳುವ ವರ್ಗವು ನಮ್ಮ ಸಮಾಜದ ಮೇಲೆ ಅಧಿಪತ್ಯ ಸಾಧಿಸಲು ಬಲನೀಡುತ್ತವೆ.

ಇವತ್ತಿನ ಚರ್ಚೆಯ ಸಂದರ್ಭದಲ್ಲಿ ನಾವು ಸಂಸ್ಕೃತಿಯ ಬಗ್ಗೆ ಮಾತನಾಡುವಾಗ ನಾವು ಕೇವಲ ಆ ಅಥವಾ ಈ ಪ್ರದರ್ಶನಕಲೆಯ ಬಗ್ಗೆ ಮಾತನಾಡುವುದಿಲ್ಲ. ನಾವು ಅದರ ವಿಶಾಲ ಅರ್ಥದಲ್ಲಿ ಸಂಸ್ಕೃತಿಯ ಕುರಿತು ಮಾತನಾಡುತ್ತೇವೆ. ಭಾಷೆ, ಕಲೆಗಳು, ಧರ್ಮ, ಶಿಕ್ಷಣ, ಕಾನೂನುಗಳು, ಸಂಪ್ರದಾಯಗಳು ಇತ್ಯಾದಿಗಳನ್ನು ಒಳಗೊಂಡ ಅದು ಮೇಲು ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಸೈದ್ಧಾಂತಿಕ ಅಧಿಪತ್ಯ

ಆಳುವವರ್ಗಗಳು ಸೈದ್ಧಾಂತಿಕ ಅಧಿಪತ್ಯವನ್ನು ಚಲಾಯಿಸುವ ವಿಚಾರದಲ್ಲಿ, ಮಾರ್ಕ್ಸ್ ಮತ್ತು ಏಂಗೆಲ್ಸ್‌ರು ಹೀಗೆ ಅಭಿಪ್ರಾಯಪಡುತ್ತಾರೆ. "ಪ್ರತಿಯೊಂದು ಕಾಲದಲ್ಲೂ ಆಳುವ ವರ್ಗದ ಉದ್ದೇಶ ಆಳುವ ಸಿದ್ಧಾಂತವಾಗಿರುತ್ತದೆ. ಅಂದರೆ ಆ ವರ್ಗವು ಸಮಾಜದ ಆಳುವ ಮುಖ್ಯ ಶಕ್ತಿಯಾಗಿರುವಾಗಲೇ ಆಳುವ ಬೌದ್ಧಿಕ ಶಕ್ತಿಯಾಗಿ ಕೂಡ ಇರುತ್ತದೆ. ಪ್ರಮುಖ ಉತ್ಪಾದನಾ ಸಾಧನಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡಿರುವ ಈ ವರ್ಗವು ಬೌದ್ಧಿಕ ಉತ್ಪನ್ನಗಳ ಸಾಧನಗಳನ್ನು ಕೂಡ ತನ್ನ ಅಧೀನದಲ್ಲಿಟ್ಟುಕೊಂಡಿರುತ್ತದೆ. ಆ ಮೂಲಕ ಬೌದ್ಧಿಕ ಉತ್ಪನ್ನಗಳ ಸಾಧನಗಳಿಂದ ವಂಚಿತರಾಗಿರುವವರ ಮನೋಭಾವವನ್ನು ತಮ್ಮ ಅಧೀನಕ್ಕೊಳಪಡಿಸಿಕೊಂಡಿರುತ್ತದೆ. ಆಳುವ ಮನೋಭಾವವೆಂದರೆ ಅದು ಮತ್ತೇನೂ ಆಗಿರದೆ ಪ್ರಬಲವಾದ ಪ್ರಾಪಂಚಿಕ ಸಂಬಂಧಗಳ ಭಾವನಾತ್ಮಕ ಅಭಿವ್ಯಕ್ತಿಯಷ್ಟೆ ಆಗಿರುತ್ತದೆ. ಆದ್ದರಿಂದ ಯಾವ ವರ್ಗವನ್ನು ಈ ಸಂಬಂಧಗಳು ಆಳುವ ವರ್ಗವನ್ನಾಗಿ ಮಾಡಿರುತ್ತದೋ ಆ ಮನೋಭಾವವೇ ಪ್ರಬಲವಾಗುತ್ತದೆ. ಆಳುವ ವರ್ಗದಲ್ಲಿರುವ ವ್ಯಕ್ತಿಗಳು ಬೇರೆಲ್ಲದರ ಜತೆಯಲ್ಲಿ ಪ್ರಜ್ಞೆಯನ್ನು ಹೊಂದಿರುತ್ತಾರೆ ಮತ್ತು ಆದ್ದರಿಂದ ಅವರು ಚಿಂತಿಸುತ್ತಾರೆ. ಅವರು ಒಂದು ವರ್ಗವಾಗಿ ಆಡಳಿತ ನಡೆಸುತ್ತಾರೆ ಹಾಗೂ ಚಾರಿತ್ರಿಕ ಯುಗದ ವ್ಯಾಪ್ತಿ ಮತ್ತು ವಿಸ್ತಾರವನ್ನು ನಿರ್ಧರಿಸುತ್ತಾರೆ. ಹೀಗೆ ಮಾಡುವಾಗ ಅವರು ಇಡಿಯಾಗಿ ಮಾಡುವುದರಿಂದ, ಚಿಂತಕರಾಗಿ, ಅಭಿಪ್ರಾಯ ಮೂಡಿಸುವವರಾಗಿ ಮತ್ತು ಉತ್ಪಾದನೆಯನ್ನು ನಿಯಂತ್ರಿಸುವವರಾಗಿ ಹಾಗೂ ಅಂದಿನ ಯುಗದ ಚಿಂತನೆಗಳನ್ನು ಹಂಚುವವರಾಗಿ ಆಡಳಿತ ನಡೆಸುತ್ತಾರೆ. ಆದಕಾರಣ ಅವರ ಧ್ಯೇಯ ಅಥವಾ ಮನೋಭಾವ ಆ ಯುಗದ ಆಳುವವರ ಧ್ಯೇಯ ಅಥವಾ ಮನೋಭಾವವಾಗಿರುತ್ತದೆ" (ಜರ್ಮನ್ ಐಡಿಯಾಲಜಿ, ಮಾಸ್ಕೋ 1976, ಪುಟ 67)

ಈ ಆಳುವ ವರ್ಗಗಳ ಧ್ಯೇಯ ಅಥವಾ ಮನೋಭಾವಗಳ ಅಧಿಪತ್ಯವನ್ನು, ಗ್ರಾಮ್ಸಿ ವಿವರಿಸುವಂತೆ, ಕೇವಲ ಪ್ರಭುತ್ವ ಜಾರಿಮಾಡುವುದಿಲ್ಲ. "ಕೋಟೆ ಕೊತ್ತಲಗಳ" ಪ್ರಬಲವಾದ ವ್ಯವಸ್ಥೆಯಲ್ಲಿ ಒಂದು 'ಬಾಹ್ಯ ಕಂದಕ'ವಾಗಿ ಮಾತ್ರ ಪ್ರಭುತ್ವವಿರುತ್ತದೆ; ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಮೌಲ್ಯಗಳು ಒಂದು ಜಾಲವಾಗಿ ಆಳುವ ವರ್ಗಗಳ ಆಳ್ವಿಕೆಯನ್ನು ಮತ್ತು ಪ್ರಾಬಲ್ಯವನ್ನು ಹೇರುತ್ತವೆ.

ಸಂಸ್ಕೃತಿಯ ಬಿತ್ತರ

ಸಾಮಾಜಿಕ ಸಂಬಂಧಗಳ ಒಂದು ಸಂಕೀರ್ಣ ಬಲೆ ಮತ್ತು ಅದರ ಪ್ರತಿಫಲವಾದ ಸಾಮಾಜಿಕ ಸಂರಚನೆಯ ಮೂಲಕ ಈ ರೀತಿಯ ಸಂಸ್ಕೃತಿ ಪ್ರಚಾರವಾಗುತ್ತದೆ ಮತ್ತು ಬಿತ್ತರಿಸಲ್ಪಡುತ್ತದೆ ಕೂಡ. ಆಳುವ

ವರ್ಗದ ಅಧಿಪತ್ಯವನ್ನು ಸಾರುವ ತತ್ವಗಳಾಗಿ ಅಥವಾ ಸಿದ್ಧಾಂತಗಳಾಗಿ ಮೌಲ್ಯಗಳನ್ನು ಮತ್ತು ಅಭಿಪ್ರಾಯಗಳನ್ನು ರೂಪಿಸಲು ಸತತವಾಗಿ ಆಹಾರ ಒದಗಿಸುವ ಸಂಸ್ಥೆಗಳೇ ಕುಟುಂಬ, ಕೋಮು, ಜಾತಿ, ಧರ್ಮ, ಅವುಗಳ ಪೂಜಾ ಸ್ಥಳಗಳಾದ ದೇವಸ್ಥಾನಗಳು, ಚರ್ಚುಗಳು, ಮಸೀದಿಗಳು, ಗುರುದ್ವಾರಗಳು ಇತ್ಯಾದಿ. ಈ ಪ್ರಕ್ರಿಯೆಯಲ್ಲಿ ಅವರು ಒಂದು 'ಸಮಾನ ಸಂಸ್ಕೃತಿ'(Common Culture) ಎಂಬ ಮಿಥ್ಯೆಯನ್ನು ಅಥವಾ ಸುಳ್ಳನ್ನು ಸೃಷ್ಟಿಮಾಡುತ್ತಾರೆ. ಈ ಸಮಾನ ಸಂಸ್ಕೃತಿ ಬೇರೇನೂ ಆಗಿರದೆ ಈ ಮೇಲೆ ಹೇಳಿದ ಸಂಸ್ಥೆಗಳ ಮೂಲಕ ವರ್ಗ ಪ್ರಾಬಲ್ಯದ ಮೌಲ್ಯಗಳನ್ನು ಹಂತ ಹಂತವಾಗಿ ಬಿತ್ತರಿಸುವ ವ್ಯವಸ್ಥೆ ಎನ್ನಬಹುದು.

ಇತ್ತೀಚೆಗೆ ಅಮೇರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಭಾರತ ಭೇಟಿ ಕುರಿತು ಆಳುವ ವರ್ಗ ನಡೆದುಕೊಂಡ ರೀತಿ ಮತ್ತು ಮೂಡಿಬಂದ ಪ್ರಚಾರ ಈ ಮೇಲಿನ ಅಂಶವನ್ನು ಅತ್ಯಂತ ಮಾರ್ಮಿಕವಾಗಿ ವಿವರಿಸುತ್ತದೆ. ನಮ್ಮ ದೇಶದ ಸಾರ್ವಭೌಮತ್ವವನ್ನು ನಾಶಪಡಿಸುವ ಸಾಮ್ರಾಜ್ಯಶಾಹಿಗಳ ಒತ್ತಡವನ್ನು ಮರೆಮಾಚುವುದು ಅವರ (ಸಾಮ್ರಾಜ್ಯಶಾಹಿಗೆ) ಗುಲಾಮತನಕ್ಕೆ ಅಗತ್ಯವಾಗಿದೆ. ನಮ್ಮ ದೇಶದ ಪ್ರಗತಿಪರ ಜನವಿಭಾಗವು ಸಾಮ್ರಾಜ್ಯಶಾಹಿಯ ವಿರುದ್ಧ ಪ್ರತಿಭಟಿಸಿದಾಗ ನಮ್ಮ ಆಳುವವರ್ಗವು ಅದನ್ನು ವಿರೋಧಿಸುತ್ತಾ, ಹೊರಗಿನಿಂದ ಅತಿಥಿಗಳು ಬಂದಾಗ ತೋರುವ 'ಭಾರತೀಯ ಆತಿಥ್ಯ' ದ ಈ 'ಸಮಾನ ಸಂಸ್ಕೃತಿ'ಯನ್ನು ಮುಂದೊಡ್ಡುತ್ತದೆ. ಅತಿಥಿ ದೇವೋಭವ ಎಂಬ ಮಾತನ್ನು ನಮಗೆ ಹೇಳುತ್ತಾರೆ. ಈ ಪ್ರಕ್ರಿಯೆಯಲ್ಲಿ, ನಮ್ಮದೇ ಆದ 'ಪರಂಪರೆ'ಗಳ ಮತ್ತು ದಂತಕತೆಗಳ ಪಾಠಗಳನ್ನು ನಮ್ಮ ಆಳುವ ವರ್ಗಗಳು ಜಾಣತನದಿಂದ ಮರೆಯುತ್ತವೆ. ವಾಮನನ ಅವತಾರದಲ್ಲಿ ವಿಷ್ಣುವು ಮಹಾಬಲಿಯ ಆಸ್ಥಾನಕ್ಕೆ ಬರುವ ಕತೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ವಾಮನನಿಗೆ ಮಹಾಬಲಿಯು ಅತ್ಯಂತ ಆತ್ಮೀಯವಾದ ಸತ್ಕಾರವನ್ನು ನೀಡುತ್ತಾನೆ ಮತ್ತು ಅವನು ಏನು ಬೇಕಾದರೂ ವರವನ್ನು ಕೇಳಬಹುದೆಂದು ಹೇಳುತ್ತಾನೆ. ತನಗೆ 'ಮೂರು ಪಾದಗಳ ಜಾಗ' ಬೇಕೆಂದು ವಾಮನ ಮಹಾಬಲಿಯನ್ನು ಕೇಳುತ್ತಾನೆ. ಅವನ ವರವನ್ನು ಕರುಣಿಸಲಾಗಿ ಅವನು ವಿಷ್ಣುವಿನ ವಿಶ್ವರೂಪ ದರ್ಶನ ತಳೆಯುತ್ತಾನೆ. ನಂತರ ಒಂದು ಪಾದವನ್ನು ಸ್ವರ್ಗದ ಮೇಲೂ, ಮತ್ತೊಂದನ್ನು ಭೂಮಿಯ ಮೇಲೂ ಇಟ್ಟು ಮೂರನೇಯ ಪಾದವನ್ನು ಎಲ್ಲಿಡಬೇಕೆಂದು ಮಹಾಬಲಿಯನ್ನು ಕೇಳುತ್ತಾನೆ. ಆಕ್ರಮಣಕ್ಕೆ ಒಳಗಾಗದೇ ಉಳಿದಿದ್ದು ಕೇವಲ ಮಹಾಬಲಿಯ ತಲೆ ಮಾತ್ರವಾಗಿದ್ದರಿಂದ ಅವನ ಮೂರನೆಯ ಪಾದವನ್ನು ಮಹಾಬಲಿಯ ತಲೆಯ ಮೇಲಿಟ್ಟು ಪಾತಾಳಲೋಕಕ್ಕೆ ಮೆಟ್ಟುವ ಮೂಲಕ ಅವನನ್ನು ಕೊಲ್ಲಲಾಗುತ್ತದೆ. ಪ್ರಾಸಂಗಿಕವಾಗಿ, ತನಗೆ ಮೋಸವಾಗುತ್ತಿದೆಯೆಂಬುದನ್ನು ಅರಿತ ಮಹಾಬಲಿ, ಕೊನೇ ಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ತನ್ನ ಜನರ ಬಳಿ ಬಂದು ಹೋಗಲು ತನಗೆ ಅವಕಾಶ ಕೊಡಬೇಕೆಂದು ವಿಷ್ಣುವನ್ನು ಕೇಳಿಕೊಳ್ಳುತ್ತಾನೆ. ವಿಷ್ಣು ಅದಕ್ಕೆ ಒಪ್ಪುತ್ತಾನೆ. ಆ ದಿನವನ್ನೇ ಕೇರಳದ ಜನ ಓಣಂ ಆಗಿ ಆಚರಿಸುತ್ತಾರೆ.



ಸರಕು ಸಂಸ್ಕೃತಿ

ತದ್ವಿರುದ್ಧ ಆಚರಣೆಗಳು

ಗಮನಿಸಬೇಕಾದ ಆಸಕ್ತಿಯ ಸಂಗತಿಯೆಂದರೆ ಇದೇ ಕಥೆಗೆ ಉತ್ತರ ಭಾರತದಲ್ಲಿ ಬೇರೆಯೇ ಆದ ಹಾಗೂ ತದ್ವಿರುದ್ಧವಾದ ಅರ್ಥ ಇದೆ. ಅಲ್ಲಿ ಮಹಾಬಲಿಯನ್ನು ರಾಕ್ಷಸರ ರಾಜನನ್ನಾಗಿ ತೋರಿಸಲಾಗಿದೆ. ಮತ್ತು ಮನುಷ್ಯರ ಉಳಿವಿಗಾಗಿ ಅವರನ್ನು ಕೊಲ್ಲುವುದು ತೀರ ಅಗತ್ಯ ಎಂಬುದನ್ನು ಹೇಳಲಾಗಿದೆ. ಆದ್ದರಿಂದ, ಉತ್ತರ ಭಾರತದಲ್ಲಿ ಭಾರತೀಯರು ಮಹಾಬಲಿಯ ಸಾವನ್ನು ಆಚರಿಸಿದರೆ ಅದೇ ಕೇರಳದ ಭಾರತೀಯರು ಅವನ ಹಿಂತಿರುಗುವಿಕೆಯನ್ನು ಆಚರಿಸುತ್ತಾರೆ. ***ಅತ್ಯಂತ ಅಸಹನೀಯವಾದ 'ಹಿಂದು ರಾಷ್ಟ್ರ'ವನ್ನು ಸ್ಥಾಪಿಸುವ ತಮ್ಮ ರಾಜಕೀಯ ಯೋಜನೆಗೋಸ್ಕರ ಏಕಮುಖತೆಯನ್ನು ಹೇರುವ ಆತುರದಲ್ಲಿ, ಹಿಂದುಗಳಲ್ಲೇ ಇರುವ ಈ ಮೇಲಿನ ವೈವಿಧ್ಯತೆಯನ್ನು ಕೋಮುವಾದಿ ಶಕ್ತಿಗಳು ಅಲ್ಲಗಳೆಯುತ್ತವೆ*** (ಹೆಚ್ಚಿನಂಶ, ಈ ಕಥೆಯು, ಆಕ್ರಮಣಕಾರಿ ಆರ್ಯರು ಮತ್ತು ಅದನ್ನು ಹಿಮ್ಮೆಟ್ಟಿಸುವ ದ್ರಾವಿಡರ ನಡುವೆ ನಡೆದ ಘರ್ಷಣೆ ಹಾಗೂ ದ್ರಾವಿಡರು ಸೋತು ಹೋದದ್ದನ್ನು ಬಿಂಬಿಸುತ್ತದೆ).

ನಾವೀಗ 'ಸಮಾನ ಸಂಸ್ಕೃತಿ' ಎಂಬ ಮಿಥ್ಯೆಯ ವಿಷಯಕ್ಕೆ ಮತ್ತೆ ಬರೋಣ. ಕುತೂಹಲಕಾರಿ ಸಂಗತಿಯೆಂದರೆ, ನಮ್ಮ ಪರಂಪರೆಯ ಇಂತಹ ಅಂಶಗಳನ್ನು (ವಾಮನ ಮತ್ತು ಮಹಾಬಲಿ) ಎಂದಿಗೂ ಮುಂದಿಡುವುದೇ ಇಲ್ಲ. ತನಗೆ ನೀಡಿದ ಆತಿಥ್ಯವನ್ನು ದುರುಪಯೋಗಪಡಿಸಿಕೊಂಡ ಅತಿಥಿಯೊಬ್ಬ ತನ್ನ ಅತಿಥೇಯನನ್ನು ಕೊಂದುಹಾಕಿದ ಸಂಗತಿ ಈ ಕಥೆಯಲ್ಲಿದೆ. ಕ್ಲಿಂಟನ್‌ರ ಭೇಟಿಗೆ ಈ ಕಥೆ ಅತ್ಯಂತ ಸರಿಹೊಂದುತ್ತದೆ! ರಾಜನ ಬದಲಾಗಿ ಇಲ್ಲಿ ಇಡೀ ದೇಶವನ್ನು ನಾಶ ಮಾಡಲು ಸಾಮ್ರಾಜ್ಯಶಾಹಿ ಹೊಂಚು

ಹಾಕುತ್ತಿದೆ. ಪ್ರಶ್ನಿಸಲೇ ಆಗದ ಆತಿಥ್ಯವನ್ನೇ ನಮ್ಮ ಪರಂಪರೆಯೆಂದು ಹೇಳುತ್ತಾ, ನಮ್ಮ ಆಳುವವರ್ಗಗಳು, ಭಾರತವನ್ನು ಮತ್ತು ಅದರ ಜನಕೋಟಿಯನ್ನು ಅಮೆರಿಕ ಸಾಮ್ರಾಜ್ಯಶಾಹಿಗೆ ಒತ್ತೆ ಇಡುವ ತಮ್ಮ ಉದ್ದೇಶಕ್ಕೆ ಅನುಕೂಲವಾಗುವಂತೆ ಬಹಳ ಎಚ್ಚರಿಕೆಯಿಂದ ವರ್ಗಪ್ರಾಬಲ್ಯದ ಮೌಲ್ಯಗಳನ್ನು ಬಿತ್ತುತ್ತಿದ್ದಾರೆ.

ಇಂದು ಕೋಮುವಾದಿಗಳು ಮಾಡಲು ಹೊರಟಿರುವಂತೆ ನಮ್ಮ 'ಸಮಾನ ಸಂಸ್ಕೃತಿ' ಬದಲಾವಣೆ ಆಗುವುದೇ ಇಲ್ಲ ಎಂದು ತಿಳಿಯುವುದು ತೀರಾ ತಪ್ಪಾಗುತ್ತದೆ. ಉದಾಹರಣೆಗೆ, ಮಧ್ಯ ಅಮೆರಿಕಾದ ಆಳುವ ವರ್ಗಗಳ ವಿಷಯವನ್ನೇ ನೋಡೋಣ. ಕಳೆದ ನಾಲ್ಕು ಶತಮಾನಗಳ ಕಾಲ, ರೋಮನ್ ಕ್ಯಾಥೊಲಿಕ್ ಧರ್ಮವನ್ನು ಅವರು ಅಪ್ಪಿಕೊಂಡಿದ್ದರು. ಆದರೆ ಯಾವಾಗ ಕ್ರೈಸ್ತ ಪುರೋಹಿತವರ್ಗ ಒಂದಾದ ನಂತರ ಒಂದು ದೇಶಗಳಲ್ಲಿ ವಿಮೋಚನಾ ದೈವವಾದವನ್ನು ಅಪ್ಪಿಕೊಳ್ಳಲು ಸಿದ್ಧರಾಗಿ ತುಳಿತಕ್ಕೊಳಗಾದವರ ಪರವಾಗಿ ನಿಂತರೋ ಆಗ ಇದೇ ಆಳುವ ವರ್ಗಗಳು, ಹೆಚ್ಚು ಕಡಿಮೆ ರಾತ್ರಿ ಬೆಳಗಾಗುವುದರೊಳಗೆ, ತಮ್ಮ "ಶತಶತಮಾನಗಳ ಹಳೆಯ ಸಂಸ್ಕೃತಿಯನ್ನು" ತೊರೆದು ಪ್ರೊಟೆಸ್ಟೆಂಟ್ ವಾದವನ್ನು ಅಪ್ಪಿಕೊಂಡರು! ಆಳುವವರ್ಗದ ಹಿತಾಸಕ್ತಿಗೆ ಅನುಗುಣವಾಗುವಂತೆ 'ಸಮಾನ ಸಂಸ್ಕೃತಿ'ಯನ್ನು ಅಪ್ಪಿಕೊಳ್ಳುತ್ತಾರೆ ಮತ್ತು ತಿರಸ್ಕರಿಸುತ್ತಾರೆ.



ಡಾಲರ್ ದೊರೆಗಳು ಬೀಸುವ ಗಾಳ

ಆದ್ದರಿಂದ, ಸಂಸ್ಕೃತಿಯು ಆಳುವ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವ ಮತ್ತು ಮುಂದುವರಿಸುವ ಒಂದು ಸೈದ್ಧಾಂತಿಕ ವ್ಯೂಹವಾಗಿ ಮಾರ್ಪಡುತ್ತದೆ. ಅದರ ಪ್ರತಿರೂಪವಾಗಿ, ಆಳುವ ವರ್ಗಗಳ ಇಂತಹ ಸಂಸ್ಕೃತಿಯನ್ನು ವಿರೋಧಿಸುವ ತುಳಿತಕ್ಕೊಳಗಾದವರ ಸಂಸ್ಕೃತಿಯಾಗಿ ಹೊರಹೊಮ್ಮುತ್ತದೆ. ಆದ್ದರಿಂದ ಸಂಸ್ಕೃತಿಯು ವರ್ಗಹೋರಾಟದ ರಣರಂಗವಾಗಿ ರೂಪಗೊಳ್ಳುತ್ತದೆ.

ವಿಷದ ಮುಳ್ಳು

ಈ ಪ್ರಕಾರವಾಗಿ, ಆಳುವವರ್ಗಗಳ ಅಗತ್ಯಕ್ಕೆ ಅನುಗುಣವಾಗುವಂಥ ಒಂದು ನಿರ್ದಿಷ್ಟ ಪದ್ಧತಿಯಾಗಿ ಸಂಸ್ಕೃತಿ ಪ್ರತಿಯೊಂದು ಕಾಲದಲ್ಲೂ ಹುಟ್ಟಿಕೊಳ್ಳುತ್ತದೆ. ಆದಾಗ್ಯೂ, ಆ ನಿರ್ದಿಷ್ಟ ಕಾಲ ಮತ್ತು ಉತ್ಪಾದನಾ ಪದ್ಧತಿ ಕೊನೆಗೊಂಡ ಬಹಳ ಕಾಲದ ನಂತರ "ಸಾಂಸ್ಕೃತಿಕ ಪ್ರಭಾವ" ಮುಂದುವರಿಯುತ್ತದೆ. ಉದಾಹರಣೆಗೆ ಗುಲಾಮಪದ್ಧತಿಯು ಸಾಮಾನ್ಯವಾಗಿ ಗುಲಾಮರ ಮೈಬಣ್ಣದ ಮೇಲೆ ಆಧಾರವಾಗಿದ್ದ 'ಜನಾಂಗವಾದ'ದ ನಿರ್ದಿಷ್ಟ ಸಂಸ್ಕೃತಿಯಾಗಿತ್ತು. ಆದರೆ, ಏಂಗೆಲ್ಸ್ ಹೇಳಿರುವಂತೆ, ಬಹಳ ಕಾಲದ ವರೆಗೆ, ನಿಜಹೇಳಬೇಕೆಂದರೆ ಇವತ್ತಿನವರೆಗೂ ಗುಲಾಮಪದ್ಧತಿಯು ಜನಾಂಗವಾದದ "ವಿಷಪೂರಿತ ಮುಳ್ಳನ್ನು" ಬಿಟ್ಟುಹೋಗಿದೆ.

ಭಾರತದ ನಿರ್ದಿಷ್ಟ ಸಂದರ್ಭದಲ್ಲಿ, ಬಂಡವಾಳಶಾಹಿ ಪದ್ಧತಿಯ ಜತೆಯಲ್ಲೇ ಬಂಡವಾಳಶಾಹಿ ಪದ್ಧತಿಗೆ ಹಿಂದೆ ಇದ್ದ ಅನೇಕ ಆರ್ಥಿಕ ಹಾಗೂ ಸಾಮಾಜಿಕ ಸಂರಚನೆಗಳೂ ಒಟ್ಟಿಗೆ ಅಸ್ತಿತ್ವದಲ್ಲಿರುವುದರಿಂದ, ವೈವಿಧ್ಯತೆಗಳಿಂದ ಕೂಡಿದ ಚಿತ್ರಕಲೆಯ ರೂಪದಲ್ಲಿ ಸಾಂಸ್ಕೃತಿಕ ಪದ್ಧತಿ ಒಟ್ಟಿಗೆ ಇದೆ. ಕೋಮುವಾದಿಗಳು ಮಾಡಲುಹೊರಟಿರುವುದೇನೆಂದರೆ ಈ ವೈವಿಧ್ಯತೆಯನ್ನು ತಮ್ಮ "ಒಂದು ದೇಶ, ಒಂದು ಜನಾಂಗ, ಒಂದು ಸಂಸ್ಕೃತಿ"ಎಂಬ ಘೋಷಣೆಯ ಮೂಲಕ ಒಂದು ಏಕಶಿಲೆಯೆಂದು -ಒಂದೇರೂಪವಾಗಿ ಮಾರ್ಪಡಿಸುವುದೇ ಆಗಿದೆ. ಇದರ ಕುರಿತು ಆನಂತರ ಹೆಚ್ಚು ವಿವರಿಸೋಣ.

ಜಾಗತಿಕ ಮಾರುಕಟ್ಟೆಯಲ್ಲಿ ಸರಕಾಗಿ ಸಂಸ್ಕೃತಿ

ಬಂಡವಾಳಶಾಹಿ ಪದ್ಧತಿಯಡಿಯಲ್ಲಿ, ಸಂಸ್ಕೃತಿಯು ಒಂದು ಸೈದ್ಧಾಂತಿಕ ರೂಪವಾಗಿ ಬಂಡವಾಳದ ಆಳ್ವಿಕೆಯನ್ನು ಎತ್ತಿಹಿಡಿಯುತ್ತಲೇ, ಸಮಾಜದಲ್ಲಿರುವ ಬೇರೆಲ್ಲದರಂತೆ ಸಂಸ್ಕೃತಿಯ ಪ್ರಾಕಾರಗಳನ್ನು ಮಾರಾಟದ ವಸ್ತುಗಳನ್ನಾಗಿ ಮಾರ್ಪಡಿಸುತ್ತದೆ. ಈ ಕುರಿತು ಸಾಕಷ್ಟು ಈಗಾಗಲೇ ಹೇಳಿರುವುದರಿಂದ ಮತ್ತೆ ಪುನರುಚ್ಚರಿಸುವ ಅಗತ್ಯವಿಲ್ಲ. ಬಂಡವಾಳಶಾಹಿ ಪದ್ಧತಿಯ ಸಾಂಸ್ಕೃತಿಕ ಉತ್ಪನ್ನಗಳ ಗುರಿ ಸಾಮಾಜಿಕ ನಿಯಂತ್ರಣವನ್ನು ಸಾಧಿಸುವುದೇ ವಿನಹ ಸಾಮಾಜಿಕ ಸೃಜನಶೀಲತೆಯನ್ನು ಅಭಿವಕ್ತಗೊಳಿಸುವುದಲ್ಲ. ಈ ಉತ್ಪನ್ನಗಳ ವಿನಿಮಯ ಮೌಲ್ಯಗಳು ಸದಾ ಅದರ ಬಳಕೆಯ ಮೌಲ್ಯಗಳಿಗಿಂತ ಹೆಚ್ಚಾಗಿರುತ್ತದೆ. ಆದರೆ ಬಂಡವಾಳಶಾಹಿ ಪದ್ಧತಿಗೆ ವಿರುದ್ಧವಾಗಿ ಭಿನ್ನ ಅಭಿಪ್ರಾಯದಿಂದ ಮೂಡಿ ಬಂದ ಸಾಂಸ್ಕೃತಿಕ ಉತ್ಪನ್ನಗಳಿಗೆ ಈ ಮೇಲಿನ ನಿಯಮ ಅನ್ವಯವಾಗುವುದಿಲ್ಲ.

ಬಂಡವಾಳಶಾಹಿ ಪದ್ಧತಿ ಮತ್ತು ಸಾಮ್ರಾಜ್ಯಶಾಹಿ ಪದ್ಧತಿಗಳ ವಿಕಾಸದಲ್ಲಿ ಜಾಗತೀಕರಣವು ಗುಣಾತ್ಮಕವಾಗಿ ಭಿನ್ನ ಹಂತದ್ದಾಗಿದೆ. ಹಣಕಾಸು ಬಂಡವಾಳದ ಅಪರಿಮಿತ ಬೆಳವಣಿಗೆ ಮತ್ತು ಅದರ ಅಂತರ್‌ರಾಷ್ಟ್ರೀಕರಣಗಳಿಂದ ಈ ಹಂತವು ಗುರುತಿಸಲ್ಪಡುತ್ತದೆ. ಈ ಅಪಾರ ಮೊತ್ತದ ಬಂಡವಾಳವು ತ್ವರಿತಗತಿಯ ಲಾಭವನ್ನು, ಮುಖ್ಯವಾಗಿ ಜಗತ್ತಿನಾದ್ಯಂತ ಸಟ್ಟಾ ವ್ಯಾಪಾರದ ಮೂಲಕ, ನಿರೀಕ್ಷಿಸುತ್ತದೆ. ಈ ಪ್ರಕಾರವಾಗಿ ***ಅದು ಯಾವುದೇ ನಿರ್ಬಂಧವಿಲ್ಲದೆ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಮುಕ್ತವಾಗಿ ಬಂಡವಾಳ ಹರಿದು ಹೋಗುವಂತಾಗಲು ಅವಕಾಶ, ಅನುಕೂಲಗಳನ್ನು/ ಸೌಲಭ್ಯಗಳನ್ನು ಬಯಸುತ್ತಿದೆ. ಭೌಗೋಳಿಕ ಗಡಿಗಳನ್ನು ಮತ್ತು ಆ ಕಾರಣದಿಂದಾಗಿ ಸ್ವತಂತ್ರ ದೇಶಗಳ ಸಾರ್ವಭೌಮತೆಯನ್ನು ಅಲ್ಲಗಳೆಯುವ ಪ್ರವೃತ್ತಿ***

ಅದಕ್ಕಿದೆ.

ಅದರ ಬದಿಯಲ್ಲೇ, ವಿಶ್ವದ ಬಹುಪಾಲು ಉತ್ಪಾದನೆ ಮತ್ತು ಹಂಚಿಕೆಗಳನ್ನು ನಿಯಂತ್ರಿಸುವ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಅಪಾರವೊತ್ತದ ಸಂಪತ್ತು ಮತ್ತು ಆಸ್ತಿ ಕ್ರೋಢೀಕೃತವಾಗುತ್ತಿರುವಾಗಲೇ ಅದು ಇಡೀ ವಿಶ್ವವನ್ನು ಒಂದು ಜಾಗತಿಕ ಮಾರುಕಟ್ಟೆಯಾಗಿ ಪರಿವರ್ತಿಸಲು ಹವಣಿಸುತ್ತದೆ. ಈ ಪ್ರಕ್ರಿಯೆಯನ್ನು ಅರ್ಥಶಾಸ್ತ್ರಜ್ಞರು ಸರಿಯಾಗಿ ದಾಖಲಿಸಿದ್ದಾರೆ. ಆದ್ದರಿಂದ ಅದರ ವಿವರಗಳಿಗೆ ನಾವೀಗ ಹೋಗುವುದು ಬೇಡ.

ಇಂತಹ ಜಾಗತೀಕರಣ ಪ್ರಕ್ರಿಯೆಯು ಬಯಸುವ ಸಾಂಸ್ಕೃತಿಕ ಅಧಿಪತ್ಯವು ಸಾರ್ವಜನಿಕ ಅಭಿರುಚಿಯನ್ನು ಏಕರೂಪಗೊಳಿಸುವ ಅಗತ್ಯತೆಯಲ್ಲಿ ಅದು ಅಭಿವ್ಯಕ್ತವಾಗುತ್ತದೆ. ಈ ಅಭಿರುಚಿ ಹೆಚ್ಚೆಚ್ಚು ಏಕರೂಪದವಾದಷ್ಟೂ ಅಷ್ಟಷ್ಟು ಸುಲಭವಾಗಿ ಅಪಾರ ಸಂಖ್ಯೆಯ ಜನಸಮುದಾಯಕ್ಕೋಸ್ಕರ 'ಸಾಂಸ್ಕೃತಿಕ ಉತ್ಪನ್ನ'ದ ಯಾಂತ್ರಿಕವಾದ ಉತ್ಪಾದನೆಗಾಗಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಇಂತಹ ಜಾಗತೀಕರಣದ ಸಹಜ ಪ್ರಕ್ರಿಯೆಯಾಗಿ ಸಂಸ್ಕೃತಿಯು ಮಾರಾಟದ ವಸ್ತುವಾಗಿ ಪರಿಣಮಿಸುತ್ತದೆ. ಉದಾಹರಣೆಗೆ ನೋಡಿ, ನಮ್ಮ ಪಟ್ಟಣ/ನಗರ ಯುವಕ ಯುವತಿಯರ ಮಧ್ಯೆ 'ವ್ಯಾಲೆಂಟೈನ್ಸ್ ಡೇ' ಯಂತಹ ಪಾಶ್ಚಿಮಾತ್ಯ ಕಲ್ಪನೆಗಳು ಹೇಗೆ ತಾನೇ ತಾನಾಗಿ ಜನಪ್ರಿಯವಾದವು ಮತ್ತು ಅದರ ಹಿಂದೆಯೇ ಸಾರ್ವಕಾಲಿಕ ಉತ್ಪನ್ನಗಳಾದ ಕಾರ್ಡ್‌ಗಳು ಮತ್ತು ಕೊಡುಗೆಗಳು ಮಾರಾಟವಾಗುತ್ತಿವೆ. ಅನೇಕ ಮೂರನೇ ಜಗತ್ತಿನ ದೇಶಗಳಲ್ಲಿ, ಅನಕ್ಷರತೆ ವ್ಯಾಪಕವಾಗಿದ್ದಾಗ್ಯೂ ಸಹ ವಾಲ್ಟ್ ಡಿಸ್ನಿಯ ಕಾರ್ಟೂನ್‌ಗಳು ಮಕ್ಕಳಲ್ಲಿ ಹೆಚ್ಚು ಜನಪ್ರಿಯವಾಗಿದೆ! ಹಾಗೆಯೇ ಮದರ್ಸ್ ಡೇ ಇತ್ಯಾದಿಗಳು...

ಭಾವೋದ್ರೇಕದ ಜನಪ್ರಿಯ ಸಂಸ್ಕೃತಿಯು ಅತ್ಯಂತ ಕೆಳವರ್ಗದ ಜನತೆಗೆ ಸತತವಾಗಿ ರಂಜನೆ ನೀಡುತ್ತಾ ಕೆಳವರ್ಗದ ಜನರನ್ನು ಇನ್ನೂ ಪಾತಾಳದಂಚಿಗೆ ತಳ್ಳುತ್ತದೆ. ಸಾರ್ವಜನಿಕ ಅಭಿರುಚಿಯು ಇನ್ನೂ ಕೆಳಮಟ್ಟಕ್ಕೆ ಹೋಗಿ ಸಾಂಸ್ಕೃತಿಕ ತಿಪ್ಪೆಗೆಸೆದ ಪದಾರ್ಥವಾಗಿ, ಕಸವಾಗಿ, ಬೂಟಾಟಿಕೆಯಾಗಿ, ಉಗ್ರ ಆವೇಷವಾಗಿ, ತಕ್ಷಣದ ಪ್ರಚೋದನೆಯಾಗಿ ಮತ್ತು ಹತಾಶವಾಗಿ ಮೇಲುಮೇಲಿನ ಆಹುತಿಯಾಗಿ ಶೃತಿ ಬದಲಿಸುತ್ತದೆ.

ದಿಕ್ಕು ತಪ್ಪಿಸುವ ಸಾಧನವಾಗಿ ಉದ್ಯಮ

ವರ್ಗ ಅಧಿಪತ್ಯದ ನಿಟ್ಟಿನಲ್ಲಿ ನೋಡಿದಾಗ, ಈ ಜಾಗತೀಕರಣ ಸಂಸ್ಕೃತಿಯು ಜನರನ್ನು ಅವರ ದಿನನಿತ್ಯದ ವಾಸ್ತವತೆಗಳಿಂದ ಅವರನ್ನು ದೂರ ಮಾಡುತ್ತಿದೆ. ಸಂಸ್ಕೃತಿಯು ಸೌಂದರ್ಯಾಸಕ್ತಿಯನ್ನಾಗಲಿ ಅಥವಾ ಸುಸಂಸ್ಕೃತ ಅಭಿರುಚಿಯನ್ನಾಗಲೀ ಹುಟ್ಟು ಹಾಕುವುದರ ಬದಲು ಕಾಡುತ್ತಿರುವ ಬಡತನ ಮತ್ತು ದುಃಖದ ಸಮಸ್ಯೆಗಳಿಂದ ಅವರ ಗಮನವನ್ನು ಬೇರೆಡೆಗೆ ಸೆಳೆಯುವ ಮತ್ತು ದಿಕ್ಕು ತಪ್ಪಿಸುವ ಸಾಧನವಾಗಿ ಕೆಲಸ ಮಾಡುತ್ತದೆ. ಅದರಿಂದಾಗಿ ತಮ್ಮ ದಯನೀಯ ಬದುಕನ್ನು ಬದಲಾಯಿಸಲು ಮತ್ತು ಅಭಿವೃದ್ಧಿಪಡಿಸಲು ಅವಶ್ಯವಿರುವ ಜನರಲ್ಲಿನ ಹೋರಾಟದ ಮನೋಭಾವವನ್ನು ಮತ್ತು ಶಕ್ತಿಯನ್ನು ಕುಂದಿಸುವ ಕೆಲಸವನ್ನು ಅದು ಮಾಡುತ್ತದೆ. ಮೈಕೆಲ್ ಪೇರೆಂಟಿ ಹೇಳುವಂತೆ "ನಮ್ಮ ಸಂಸ್ಕೃತಿಯ ಬಹುಮುಖ್ಯ ಭಾಗವನ್ನು ಈ 'ಸಮೂಹಸಂಸ್ಕೃತಿ', 'ಜನಪ್ರಿಯ ಸಂಸ್ಕೃತಿ' ಮತ್ತು 'ಮಾಧ್ಯಮ ಸಂಸ್ಕೃತಿ'ಯೆಂತಲೂ ಸರಿಯಾಗಿಯೇ ಹೆಸರಿಸಿದ್ದಾರೆ. ಅವುಗಳ ಒಡೆತನ ಮತ್ತು ಕಾರ್ಯಾಚರಣೆ ಬಹುಪಾಲು ದೊಡ್ಡ ದೊಡ್ಡ ನಿಗಮಗಳ ಕೈಯಲ್ಲಿರುತ್ತದೆ. ತಮ್ಮ ಒಡೆಯರ/ಮಾಲೀಕರ ಪ್ರಪಂಚವನ್ನು ಸುರಕ್ಷಿತವಾಗಿಡಲು ಸಂಪತ್ತನ್ನು ಒಟ್ಟು ಮಾಡುವುದೇ ಇದರ ಮುಖ್ಯ ಕೆಲಸ. ಬಳಕೆಯ ಮೌಲ್ಯಕ್ಕಿಂತ ವಿನಿಮಯ ಮೌಲ್ಯವನ್ನೇ ಮುಖ್ಯವಾಗಿರಿಸಿಕೊಂಡ ಹಾಗೂ ಸಾಮಾಜಿಕ ಸೃಜನಶೀಲತೆಗೆ ಬದಲಾಗಿ ಸಾಮಾಜಿಕ ನಿಯಂತ್ರಣಕ್ಕೆ ಹೆಚ್ಚು ಒತ್ತುಕೊಡುವ ಉದ್ದೇಶ ಅದರದ್ದಾಗಿರುತ್ತದೆ. ನಮ್ಮನ್ನು, ವಿಶಾಲ ವಾಸ್ತವತೆಗಳತ್ತ ಚಿಂತಿಸುವ ಕೆಲಸದಿಂದ ವಿಮುಖಗೊಳಿಸುವ ಸಲುವಾಗಿ ಹೆಚ್ಚಿನ ಸಮೂಹ ಸಂಸ್ಕೃತಿಯನ್ನು ಸಂಘಟಿಸಲಾಗುತ್ತದೆ. ನವಿರಾದ ಮತ್ತು ಅತ್ಯಂತ ಅಬ್ಬರದ ಮನರಂಜನೆಯ ಸಂಸ್ಕೃತಿಯು ಅತಿ ತಕ್ಷಣದ ಹಾಗೂ ಪೋಷಕ ವಸ್ತುಗಳನ್ನು ಹೊರಗಿಡುತ್ತದೆ. ಭಾವೋದ್ರೇಕದ ಜನಪ್ರಿಯ ಸಂಸ್ಕೃತಿಯು ಅತ್ಯಂತ ಕೆಳವರ್ಗದ ಜನತೆಗೆ ಸತತವಾಗಿ ರಂಜನೆ ನೀಡುತ್ತಾ ಕೆಳವರ್ಗದ ಜನರನ್ನು ಇನ್ನೂ ಪಾತಾಳದಂಚಿಗೆ ತಳ್ಳುತ್ತದೆ. ಸಾರ್ವಜನಿಕ ಅಭಿರುಚಿಯು ಇನ್ನೂ ಕೆಳಮಟ್ಟಕ್ಕೆ ಹೋಗಿ ಸಾಂಸ್ಕೃತಿಕ ತಿಪ್ಪೆಗೆಸೆದ ಪದಾರ್ಥವಾಗಿ, ಕಸವಾಗಿ, ಬೂಟಾಟಿಕೆಯಾಗಿ, ಉಗ್ರ ಆವೇಷವಾಗಿ, ತಕ್ಷಣದ ಪ್ರಚೋದನೆಯಾಗಿ ಮತ್ತು ಹತಾಶವಾಗಿ ಮೇಲುಮೇಲಿನ ಆಹುತಿಯಾಗಿ ಶೃತಿ ಬದಲಿಸುತ್ತದೆ.



ರಾಜಕೀಯ ಉದ್ದೇಶದ ಸೈದ್ಧಾಂತಿಕ ತಿರುಳು

ಇಂತಹ ಕೃತ್ಯಗಳು ಸಾಮಾನ್ಯವಾಗಿ ಒಂದು ನಿಜವಾದ ಸೈದ್ಧಾಂತಿಕ ತಿರುಳನ್ನು ಹೊಂದಿರುತ್ತದೆ. ರಾಜಕೀಯಕ್ಕೆ ಹೊರತಾದ ಉದ್ದೇಶವನ್ನು ಇಟ್ಟುಕೊಂಡಿದೆ ಎಂದೆನಿಸಿದರೂ, ಮನರಂಜನೆಯ ಸಂಸ್ಕೃತಿ (ನಿಜವಾಗಿಯೂ ಮನರಂಜನೆಯ ಉದ್ದಿಮೆಯಾದ)ಯು ತನ್ನ ಪ್ರಭಾವ ಬೀರುವಲ್ಲಿ ರಾಜಕೀಯ ಉದ್ದೇಶವನ್ನಿಟ್ಟುಕೊಂಡೇ ಇರುತ್ತದೆ ಮತ್ತು ಹೆಚ್ಚಾಗಿ ಕಾಮ ಲಂಪಟತೆಯಿಂದ, ಮತೀಯತೆಯಿಂದ, ಕೊಳ್ಳುಬಾಕತನದಿಂದ, ಸರ್ವಾಧಿಕಾರ ತನದಿಂದ, ಯುದ್ಧಖೋರತನದಿಂದ

ಮತ್ತು ಸಾಮ್ರಾಜ್ಯಶಾಹಿ ತನದಿಂದ ತುಂಬಿಹೋದ ಪ್ರತಿಮೆಗಳನ್ನು ಮತ್ತು ಮೌಲ್ಯಗಳನ್ನು ಪ್ರಚಾರ ಮಾಡುತ್ತದೆ (Monthly Review, Jel 1999)

ಬಿಲ್ ಕ್ಲಿಂಟನ್‌ಗೆ ಭಾರತದ ದೊಡ್ಡ ವಾಣಿಜ್ಯ ಪತ್ರಿಕೋದ್ಯಮವು ಹೇಗೆ ಶರಣು ಹೊಡೆಯಿತು ಎಂಬುದರ ಮೂಲಕ ಮಾಧ್ಯಮ ಸಂಸ್ಕೃತಿಯನ್ನು ಉತ್ತೇಜಿಸುವ ಜಾಗತೀಕರಣವು ತನ್ನ ಗುಣವನ್ನು ಬಟ್ಟ ಬಯಲುಮಾಡಿಕೊಂಡಿದೆ. ಕ್ಲಿಂಟನ್ನನ್ನು ಚಂದ್ರಬಾಬುನಾಯ್ಡುನೋ ಅಥವಾ ಕೃಷ್ಣನೋ ಯಾರು ತಮ್ಮ ರಾಜ್ಯಕ್ಕೆ ಕರೆದೊಯ್ಯುತ್ತಾರೆ ಎಂಬಂತಹ ಸುದ್ದಿಗಳಿಂದ ಪತ್ರಿಕೆಗಳು ತುಂಬಿಹೋಗಿದ್ದವು. ಕೊನೆಗೂ ಹೈದಾರಾಬಾದ್ ಗೆದ್ದು ಬೆಂಗಳೂರು ಸೋತಿತು. ಆದರೆ ಈ ಅವಧಿಯಲ್ಲೇ ಆಂಧ್ರದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು ಮತ್ತು ಕರ್ನಾಟಕದಲ್ಲಿ ದಲಿತರನ್ನು ಸಜೀವವಾಗಿ ಸುಡಲಾಯಿತು. ಇಂತಹ ಸುದ್ದಿಗಳು ಸುದ್ದಿಗಳೇ ಅಲ್ಲವೇನೊ ಅನ್ನುವ ರೀತಿಯಲ್ಲಿ ಪ್ರಕಟವಾಗಿದ್ದವು, ಕ್ಲಿಂಟನ್ ಭೇಟಿಗಾಗಿ ಹೈದ್ರಾಬಾದಿನಿಂದ ಬಿಕ್ಷುಕರನ್ನು ಓಡಿಸಲಾಗುತ್ತಿದೆ ಎಂಬ ಸುದ್ದಿಗಳು ತಲೆಬರಹದ ಸುದ್ದಿಗಳಾದವು. ಮಾಧ್ಯಮ ಸಂಸ್ಕೃತಿಯು ಜನರನ್ನು ಈ ಮಟ್ಟದಲ್ಲಿ ಅವರ ನಿಜವಾದ ಕಷ್ಟಕೋಟಲೆಗಳಿಂದ ವಿಮುಕ್ತರನ್ನಾಗಿಸಲು ಪ್ರಯತ್ನಿಸಿದೆ.

ಜನಪದ ಪ್ರಾಕಾರಗಳು ಹೆಚ್ಚಿನ ಲಾಭ ಗಳಿಸಿಕೊಟ್ಟರೆ, ಆಗ ಖಂಡಿತವಾಗಿ ಜಾಗತೀಕರಣದ ಸಾಂಸ್ಕೃತಿಕ ಸಾಮ್ರಾಟರು ಅದನ್ನು ಉತ್ತೇಜಿಸಿ ಬೆಳೆಸುತ್ತಾರೆ. ರಮಾನಂದ ಸಾಗರರ 'ರಾಮಾಯಣ'ದ ವಿಶ್ವವ್ಯಾಪೀ ಹಕ್ಕುಗಳನ್ನು ರೂಪರ್ಟ್ ಮುರ್ಡೂಕ್ ಖರೀದಿಸಿದ್ದಾರೆ ಎಂಬುದನ್ನು ಗಮನಿಸಿ!

ಕೋಮುವಾದವು, ಪ್ರೊಫೆಸರ್ ಫಣಿಕ್ಕರ್ ಎತ್ತಿತೋರಿಸಿದಂತೆ, ಚರಿತ್ರೆಯನ್ನು ತಿರುಚುವ ಸಂದರ್ಭದಲ್ಲೇ ಭಾರತದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯನ್ನು ಕೊಂಡೊಯ್ದು, ಅತ್ಯಂತ ಅಸಹನೆಯ ಹಿಂದುರಾಷ್ಟ್ರವನ್ನು ಸ್ಥಾಪಿಸಲು ತನ್ನ ಕೋಮುವಾದಿ ಯೋಜನೆಗೆ ಜೋಡಿಸಲು ನೋಡುತ್ತಿದೆ. ಪ್ರೊ. ನಿನಾನ್ ಕೋಶಿ ಮತ್ತು ಮೋಹನ್ ಥಂಪಿ ಹೇಳಿರುವಂತೆ, ಕೋಮುವಾದವು, ಭಾರತೀಯ ಸಂಸ್ಕೃತಿಯ 'ಗತವೈಭವ'ವನ್ನು ಮತ್ತು 'ಪರಂಪರೆ'ಯನ್ನು ಕಾಪಾಡಬೇಕಾದ ಅಗತ್ಯತೆಯ ಬಗ್ಗೆ ಮಾತನಾಡುತ್ತಾ ಜಾಗತೀಕರಣವನ್ನು ವಿರೋಧಿಸುವ ಸೋಗನ್ನು ಹಾಕುತ್ತಾ ಭ್ರಮೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ.

ಅಭಿರುಚಿಯ ಏಕರೂಪ

ಜಾಗತೀಕರಣದ ಸಂಸ್ಕೃತಿಯು ಪರಂಪರೆಗೆ ವಿರೋಧವಾಗಿದೆ ಎಂದು ತಿಳಿಯುವುದು ಸಂಪೂರ್ಣವಾಗಿ ತಪ್ಪಾಗುತ್ತದೆ. ಅದರ ಬದಲಿಗೆ, ಅದು ಪಾರಂಪರಿಕ ಪ್ರಾಕಾರಗಳನ್ನು ತನ್ನದನ್ನಾಗಿ ಮಾಡಿ ಕೊಳ್ಳುತ್ತದೆ. ಇಂದು ಎಂಟಿವಿ(ಮ್ಯೂಸಿಕ್ ಟೆಲಿವಿಷನ್)ಯ ವಿವಿಧ ಜಾಲಗಳನ್ನು ವೀಕ್ಷಿಸಿ ಭಾಂಗ್ರಾ, ದಾಂಡಿರಾಸ್ ಮುಂತಾದ ಭಾರತೀಯ ಜನಪದ ಪ್ರಾಕಾರಗಳನ್ನು ಜನಪ್ರಿಯ ಸಂಸ್ಕೃತಿ ಅಪ್ಪಿಕೊಂಡಾಗಿದೆ. ಅದರ ಪ್ರಭಾವ ಎಷ್ಟಾಗಿದೆಯೆಂದರೆ ಸಂಗೀತವನ್ನು ಆಸ್ವಾದಿಸುವ ಅಥವಾ ಮೆಚ್ಚುವ ಕಲ್ಪನೆಯನ್ನೇ ಸಂಪೂರ್ಣವಾಗಿ ಮಾರ್ಪಡಿಸಿದೆ. ಈ ಪ್ರಕಾರವಾಗಿ, ನಾವು ಹಿಂದೆ ನಮ್ಮ ಪೀಳಿಗೆಯುವರು ಹೇಳುತ್ತಿದ್ದಂತೆ ಸಂಗೀತವನ್ನು ಕೇಳುವ ಬದಲಾಗಿ ಇಂದು ನನ್ನ ಮಗಳು ಸಂಗೀತವನ್ನು ನೋಡುತ್ತಾಳೆ. ನಾವು ಈ ಹಿಂದೆ ಚರ್ಚಿಸಿದಂತೆ ಜನಪರ ಪ ನ್ನು ತನ್ನದಾಗಿಸಿಕೊಳ್ಳುವ ಮೂಲಕ ಸಾರ್ವಜನಿಕ ಅಭಿರುಚಿಯನ್ನು ಏಕರೂಪಗೊಳಿಸಲಾಗಿದೆ. ಬಹುದೊಡ್ಡ ಸಂಖ್ಯೆಯ ಜನ ಸಮುದಾಯಕ್ಕೆ ನೀಡಲು ಯಥಾವತ್ತಾಗಿ ನಕಲಿ ಮಾಡುವ ತಂತ್ರಜ್ಞಾನದ ಮೂಲಕ ಇಂದು ಮನರಂಜನಾ ಉದ್ದಿಮೆಯು - ಜಾಗತೀಕರಣ ಸಂಸ್ಕೃತಿಯ ಬೆನ್ನೆಲುಬಾದ ಈ ಉದ್ದಿಮೆಯು ಅತ್ಯಂತ ಹೆಚ್ಚಿನ ಲಾಭವನ್ನು ಗಳಿಸುತ್ತಿದೆ.

ಮುಂದುವರಿದು, ಜನಪದ ಪ್ರಾಕಾರಗಳು ಹೆಚ್ಚಿನ ಲಾಭ ಗಳಿಸಿಕೊಟ್ಟರೆ, ಆಗ ಖಂಡಿತವಾಗಿ ಜಾಗತೀಕರಣದ ಸಾಂಸ್ಕೃತಿಕ ಸಾಮ್ರಾಟರು ಅದನ್ನು ಉತ್ತೇಜಿಸಿ ಬೆಳೆಸುತ್ತಾರೆ. ರಮಾನಂದ ಸಾಗರರ 'ರಾಮಾಯಣ'ದ ವಿಶ್ವವ್ಯಾಪೀ ಹಕ್ಕುಗಳನ್ನು ರೂಪರ್ಟ್ ಮುರ್ಡೂಕ್ ಖರೀದಿಸಿದ್ದಾರೆ ಎಂಬುದನ್ನು ಗಮನಿಸಿ!

ಶಿವಸೇನೆ ಮತ್ತು ಮೈಕೆಲ್ ಜಾಕ್ಸನ್


ವಾಸ್ತವವಾಗಿ, ಅದರ ಪ್ರತಿರೂಪ ಕೂಡ ಅಷ್ಟೇ ಸತ್ಯ! ಅಲ್ಲೆಲ್ಲಾದರೂ ಲಾಭ ಕಾಣುತ್ತದೆಯೆಂದಾದರೆ ಭಾರತೀಯ ಸಂಸ್ಕೃತಿಯನ್ನು ಮತ್ತು ಜನಪದ ಕಲೆಗಳನ್ನು ಗುತ್ತಿಗೆ ತೆಗೆದುಕೊಂಡವರಂತೆ ಆಡುವ ಸ್ವಘೋಷಿತ ರಕ್ಷಕರು, ಪಾಶ್ಚಾತ್ಯ ಪ್ರಾಕಾರಗಳನ್ನು ಯಾವುದೇ ಕಣ್ಣು ಮಿಟುಕಿಸದೇ ಅಪ್ಪಿಕೊಳ್ಳುತ್ತಾರೆ. ಜಾಗತೀಕರಣ ಸಂಸ್ಕೃತಿಯ ತುತ್ತತುದಿಯಲ್ಲಿರುವ ಮೈಕೆಲ್ ಜಾಕ್ಸನ್‌ಗೆ ಅಸಹ್ಯ ಬರುವ ರೀತಿಯಲ್ಲಿ ರತ್ನಗಂಬಳಿ ಹಾಸಿ ಸ್ವಾಗತ ನೀಡಿದ ಬಾಳಾ ಠಾಕರೆಯ ಶಿವಸೇನೆಯನ್ನು ನೋಡಿ! ಅವನ ಅಶ್ಲೀಲಕರ ಮೈಕುಣಿಸುವ ಸುತ್ತಾಟಗಳು ಈ ಕೋಮುವಾದಿ ಶಕ್ತಿಗಳಿಗೆ ಪಾಕಿಸ್ತಾನದ ಗುಲಾಮ್ ಅಲಿಯ ಗಜಲ್‌ಗಿಂತ ಹೆಚ್ಚು ಪ್ರಿಯವಾದವು. ಆದ್ದರಿಂದಲೇ ಮುಂಬಯಿಯಲ್ಲಿ ಗುಲಾಮ್ ಅಲಿಯವರ ಕಾರ್ಯಕ್ರಮ ಆಗಲು ಶಿವಸೇನೆಯ ಬಾಳಾ ಠಾಕರೆ ಬಿಡಲಿಲ್ಲ.



ಬಾಳಾಠಾಕ್ರೆ ಮೆಚ್ಚುವ ಸಂಸ್ಕೃತಿ!

ಒಗ್ಗೂಡಿದ ಹಿತಾಸಕ್ತಿಗಳು

ಇಲ್ಲೇ ಇರುವುದು. ಜಾಗತೀಕರಣ ಮತ್ತು ಕೋಮುವಾದಿಗಳ ಹಿತಾಸಕ್ತಿ ಒಗ್ಗೂಡುವುದು ಇಲ್ಲೇ. ಉಭಯತ್ರರೂ ಸಾರ್ವಜನಿಕ ಅಭಿರುಚಿಯ ಏಕರೂಪೀಕರಣವನ್ನು ಬಯಸುತ್ತಾರೆ. ಮೊದನೆಯವರು ತಮ್ಮ ಸಾಂಸ್ಕೃತಿಕ ಅಧಿಪತ್ಯವನ್ನು ಬಲಪಡಿಸಿಕೊಂಡು ಹೆಚ್ಚಿನ ಲಾಭ ಗಳಿಸುತ್ತಾರೆ. ಎರಡನೆಯವರು ಇವುಗಳ ಜತೆಯಲ್ಲೇ ಅತ್ಯಂತ ಅಸಹನೀಯ ದೈವವಾದಿ ಪ್ರಭುತ್ವವನ್ನು - ಹಿಂದು ರಾಷ್ಟ್ರವನ್ನು - ಕಟ್ಟಲು ದಾರಿ ಸುಗಮ ಮಾಡಿಕೊಳ್ಳುತ್ತಿದ್ದಾರೆ. ಅವರ ಘೋಷಣೆಯಾದ 'ಒಂದು ರಾಷ್ಟ್ರ, ಒಂದು ಜನಾಂಗ, ಒಂದು ಸಂಸ್ಕೃತಿ' ಗೆ ನಿಜವಾಗಿಯೂ ಒಂದು ಘನತೆ ಮತ್ತು ಅರ್ಥ ಬರಬೇಕಾದರೆ, ಭಾರತದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯ ಭದ್ರ ಬುನಾದಿಯುನ್ನು ಅಲ್ಲಗಳೆದು ಏಕರೂಪಿಕರಣ ಗೊಳಿಸುವುದರಿಂದ ಮಾತ್ರ ಸಾಧ್ಯ. ಮತ್ತು ಜಾಗತೀಕರಣ ಮತ್ತು ಕೋಮುವಾದ ಎರಡೂ ಜನರ ಗಮನವನ್ನು ಅದರ ದಿನನಿತ್ಯದ ಸಮಸ್ಯೆಗಳಿಂದ ಬೇರೆಡೆ ಸೆಳೆದು ಮತ್ತು ಪ್ರಧಾನವಾಗಿ ಇವತ್ತಿನ ಶೋಷಣಾಪೂರಿತ ವ್ಯವಸ್ಥೆಯ ವಿರುದ್ಧದ ಅದರ ಹೋರಾಟವನ್ನು ದುರ್ಬಲಗೊಳಿಸುತ್ತವೆ. ಇಬ್ಬರೂ ಸಂಸ್ಕೃತಿಯನ್ನು ಬಳಸಿ ತಮ್ಮ ಕಾರ್ಯವನ್ನು ಸಾಧಿಸುತ್ತಾರೆ. ಜಾಗತೀಕರಣವು ಹೇಗೆ 'ಜನಪ್ರಿಯ ಸಂಸ್ಕೃತಿ'ಯನ್ನು ಉತ್ಪಾದಿಸುತ್ತದೆ ಮತ್ತು ಕಾರ್ಯಾಚರಣೆ ನಡೆಸುತ್ತದೆ ಎಂಬುದನ್ನು ನಾವೀಗಾಗಲೇ ಗಮನಿಸಿದ್ದೇವೆ. ಕೋಮುವಾದವು ತನ್ನ ಈ ಉದ್ದೇಶವನ್ನು ಭಾವೋದ್ವೇಗದ ವಿಷಯಗಳನ್ನು ಎತ್ತಿ ಜನರ ಗಮನವನ್ನು ನಿರಂತರವಾಗಿ ಬೇರೆಡೆ ಸೆಳೆದು, ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಜನರನ್ನು ಒಡೆಯಲು ಅವರು ಎಂತೆಂತಹ ವಿಷಯಗಳನ್ನು ಎತ್ತಿದ್ದರು ಎಂಬುದನ್ನು ನೆನಪಿಸಿಕೊಳ್ಳೋಣ. ಅಯೋಧ್ಯಾದ ಮಂದಿರದಿಂದ ಪ್ರಾರಂಭವಾಗಿ, 370ನೇ ವಿಧಿ, ಏಕರೂಪ ನಾಗರಿಕ ಸಂಹಿತೆ, ಪಾಕಿಸ್ತಾನದ ಕ್ರಿಕೆಟ್ ತಂಡದ ಭಾರತ ಭೇಟಿ, ಎಂ.ಎಫ್. ಹುಸೇನ್‌ರ ವರ್ಣಚಿತ್ರಗಳು, ದೀಪಾಮೆಹ್ತಾರ ಚಲನಚಿತ್ರ, ಸರಸ್ವತಿ ವಂದನ, ಮತಾಂತರಗಳು ಇತ್ಯಾದಿ ಈ ಎಲ್ಲಾ ವಿಷಯಗಳು ಜನರ ದೈನಂದಿನ ಸಮಸ್ಯೆಗಳಿಂದ ಹೊರತಾದುವೇ ಆಗಿವೆ. ಅವರ 'ಸಾಂಸ್ಕೃತಿಕ ನಿರ್ಮಾಣ'ದಲ್ಲಿ ಜನರನ್ನು ಬಾಧಿಸುವ ಬಡತನ ನಿರುದ್ಯೋಗ, ಅನಕ್ಷರತೆ, ಸಂಕಷ್ಟಗಳು ಮುಂತಾದವು ಸಮಸ್ಯೆಗಳೇ ಅಲ್ಲ, ಕೋಮುವಾದದ ಸಾಂಸ್ಕೃತಿಕ ಯೋಜನೆಯ ಬಹುಮುಖ್ಯ ಸ್ಥಂಭವಾವುದೆಂದರೆ ಜನರ ಗಮನವನ್ನು ಬೇರೆಡೆ ಸೆಳೆಯುವುದು ಮತ್ತು ತಮ್ಮ ಬದುಕಿನ ದಯನೀಯ ಸ್ಥಿತಿಯ ವಿರುದ್ಧದ ಜನರ ಹೋರಾಟವನ್ನು ದುರ್ಬಲಗೊಳಿಸುವುದು.



ಜಾಗತೀಕರಣ ಮತ್ತು ಕೋಮುವಾದ ಎರಡೂ ಜನರ ಗಮನವನ್ನು ಅದರ ದಿನನಿತ್ಯದ ಸಮಸ್ಯೆಗಳಿಂದ ಬೇರೆಡೆ ಸೆಳೆದು ಮತ್ತು ಪ್ರಧಾನವಾಗಿ ಇವತ್ತಿನ ಶೋಷಣಾಪೂರಿತ ವ್ಯವಸ್ಥೆಯ ವಿರುದ್ಧದ ಅದರ ಹೋರಾಟವನ್ನು ದುರ್ಬಲಗೊಳಿಸುತ್ತವೆ. ಇಬ್ಬರೂ ಸಂಸ್ಕೃತಿಯನ್ನು ಬಳಸಿ ತಮ್ಮ ಕಾರ್ಯವನ್ನು ಸಾಧಿಸುತ್ತಾರೆ.

'ಪಾಶ್ಚಾತ್ಯ' ಸಂಸ್ಕೃತಿಗೆ ವಿರೋಧ ಎಂಬ ಮೇಲ್ಮೇಲೆ ಕಾಣಿಸಿಕೊಳ್ಳುವ ಕೋಮುವಾದದ ವಿರೋಧ ಕೇವಲ ಕಣ್ಣೊರೆಸುವ ತಂತ್ರವಷ್ಟೆ. ಒಟ್ಟಿನಲ್ಲಿ ಜಾಗತೀಕರಣದ ಮತ್ತು ಕೋಮುವಾದದ ಹಿತಾಸಕ್ತಿ ಒಂದೇ. ಆದ್ದರಿಂದ ಪ್ರಾಯೋಗಿಕವಾಗಿ ಒಂಧ ವಿರುದ್ಧದ ಹೋರಾಟವನ್ನು ಮತ್ತೊಂದರ ವಿರುದ್ಧದ ಹೋರಾಟದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಅವರ ಹಿತಾಸಕ್ತಿಗಳು ಒಂದುಗೂಡುವುದನ್ನು ಬೇರೆ ಕ್ಷೇತ್ರಗಳಲ್ಲೂ ನಾವು ಕಾಣಬಹುದು. ಇಂದು ಕೋಮುವಾದವು ಜಾಗತೀಕರಣ ಪ್ರಕ್ರಿಯೆಯುಲ್ಲಿ ಸಾಮ್ರಾಜ್ಯಶಾಹಿಯ ಅತ್ಯಂತ ಆಪ್ತ ಮಿತ್ರನಾಗಿ, ಬೆಂಬಲಿಗನಾಗಿ ಹೊರಹೊಮ್ಮಿದೆ. ಭಾರತದ ಆಳುವವರ್ಗದ ಮತ್ತು ಅದರ ನಾಯಕರಾದ ದೊಡ್ಡ ಬಂಡವಾಳಿಗರ ಹಿತಾಸಕ್ತಿಯ ರಕ್ಷಕನಾಗಿ ಇಂದು ಕೋಮುವಾದವು ತನ್ನನ್ನು ತಾನು ತೋರಿಸಿಕೊಂಡಿದೆ. ಆದ್ದರಿಂದ, ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವನ್ನು ಕೋಮುವಾದದ ವಿರುದ್ಧದ ಹೋರಾಟದಿಂದ ಬೇರ್ಪಡಿಸಲು ಸಾಧ್ಯವಿಲ್ಲ.


ಮುಕ್ತಾಯ ಹೇಳುವುದಕ್ಕಿಂತ ಮುಂಚೆ ಇನ್ನೊಂದು ವಿಷಯವನ್ನು ಪರಿಗಣಿಸಬೇಕಿದೆ. ಈ ಶಕ್ತಿಗಳು ಒದಗಿಸುತ್ತಿರುವುದು ಸಂಸ್ಕೃತಿಯ ರೀತಿಗಳನ್ನು ನಾವು ಟೀಕಿಸಿದಾಗಲೆಲ್ಲ ಜನರೇ ಇಂತಹ ಸಂಸ್ಕೃತಿಯನ್ನು ಇಷ್ಟಪಡುತ್ತಾರೆ ಎಂಬ ಪ್ರತಿಕ್ರಿಯೆಯನ್ನು ನಾವು ಎದುರಿಸಬೇಕಾಗಿದೆ. ಜಾಗತೀಕರಣದ 'ಜನಪ್ರಿಯ ಸಂಸ್ಕೃತಿ'ಯು ಜನರ ಅಭಿರುಚಿಯ ಪ್ರತಿ' ಂಬ ಎಂದು ನಮಗೆ ಹೇಳಲಾಗುತ್ತಿದೆ.

ಸುಮಾರು ನೂರೈವತ್ತು ವರ್ಷಗಳ ಹಿಂದೆ ಮಾರ್ಕ್ಸ್, ಬಂಡವಾಳದ ವಿಶ್ಲೇಷಣೆ ಮಾಡುವಾಗ ಅತ್ಯಂತ ಮಾರ್ಮಿಕವಾಗಿ ಗಮನಿಸಿದ್ದಾರೆ : "ಅಗತ್ಯಕ್ಕೆ ತಕ್ಕುದಾದ ವಸ್ತುವನ್ನು ಉತ್ಪಾದನೆಯು ಒದಗಿಸುತ್ತದೆ ಮಾತ್ರವಲ್ಲ, ವಸ್ತುವಿನ ಅಗತ್ಯತೆಯನ್ನು ಸೃಷ್ಟಿಸುತ್ತದೆ. ಬಳಕೆಯು ಯಾವಾಗ ತನ್ನ ಅತ್ಯಂತ ಪ್ರಾಥಮಿಕ ಉತ್ಪನ್ನದಿಂದ ಮತ್ತು ಸಮೀಪದಿಂದ ಹೊರಹೊಮ್ಮುತ್ತದೋ ಈಗ ಅದು ತಾನೇ ತಾನಾಗಿ ಆ ವಸ್ತುವಿನಿಂದ ಹುಟ್ಟಿದ ಬಯಕೆಯಾಗಿರುತ್ತದೆ. ಆ ವಸ್ತುವಿನ ಅಗತ್ಯತೆ ಹುಟ್ಟಿದ್ದೇ ಆ ವಸ್ತುವಿನ ಕಲ್ಪನೆಯಿಂದ. ಒಂದು ಕಲಾಕೃತಿಯು ಸೌಂದರ್ಯದ ಅಭಿರುಚಿ

ಹೊಂದಿರುವ ಮತ್ತು ಸೌಂದರ್ಯವನ್ನು ಆನಂದಿಸುವ ಸಾರ್ವಜನಿಕರನ್ನು ಸೃಷ್ಟಿಸುತ್ತದೆ. ಅದೇ ರೀತಿಯಲ್ಲಿ ಬೇರೆ ವಸ್ತುಗಳೂ ಕೂಡ. ಆದ್ದರಿಂದ ಉತ್ಪಾದನೆಯು ಒಂದು ಗಿರಾಕಿಗೆ ಒಂದು ವಸ್ತುವನ್ನು ಮಾತ್ರ ಸೃಷ್ಟಿಸದೆ ಆ ವಸ್ತುವಿಗೆ ಒಬ್ಬ ಗಿರಾಕಿಯನ್ನು ಸೃಷ್ಟಿಸುತ್ತದೆ. (ಕಾರ್ಲ್‌ಮಾರ್ಕ್ಸ್‌ರ Introduction to Economic Manscrits 1857-58)

ಇಂದು ನಮಗೆ ಇದು ಮೇಲೆದ್ದು ಕಾಣುತ್ತಿದೆ. ಈ ವ್ಯವಸ್ಥೆ ಉತ್ಪಾದಿಸುವ ವಸ್ತುಗಳಿಗೆ ಗಿರಾಕಿಗಳನ್ನು ಪ್ರತಿವರ್ಷ ಬಿಲಿಯಾಂತರ ಡಾಲರುಗಳನ್ನು ಖರ್ಚು ಮಾಡಿ ಜಾಹಿರಾತುಗಳ ಮೂಲಕ ಸೃಷ್ಟಿಸುತ್ತಾರೆ. ಇದೇ ರೀತಿ ಸಂಸ್ಕೃತಿ ಕೂಡ! ಸಾಮುದಾಯಿಕ ಬಳಕೆಯ ಉತ್ಪನ್ನವನ್ನು ಸ್ವಾಗತಿಸಲು ಅಥವಾ ಕೊಳ್ಳಲು ವೀಕ್ಷಕರನ್ನು ಮೊದಲು ಸೃಷ್ಟಿಸಲಾಗುತ್ತಿದೆ. ವಿಮರ್ಶಾತ್ಮಕ ಶಕ್ತಿಯನ್ನು ಅಳಿಸಿಹಾಕದಿದ್ದರೂ ಮಂಕಾಗಿಸುವ ಜಾಹೀರಾತುಗಳ ಮೂಲಕ ಸಾರ್ವಜನಿಕ ಅಭಿರುಚಿಯನ್ನು ಏಕರೂಪೀಕರಣಗೊಳಿಸಲಾಗುತ್ತದೆ. ಆದ್ದರಿಂದ ಈ ಸಂಸ್ಕೃತಿ ಜನರು ಬಯಸಿದ್ದು ಅಲ್ಲ. ಅಭಿರುಚಿಯನ್ನು ಸೃಷ್ಟಿಸಿ ಯಾವುದೇ ವಿಮರ್ಶೆಯಿಲ್ಲದೆ ಒಪ್ಪಿಕೊಳ್ಳಲು ಈ ಸಂಸ್ಕೃತಿಯನ್ನು ಮಂಥನ ಮಾಡಿ ಹೊರತರಲಾಗಿದೆ. ಹೀಗಿರುವಾಗ ಈ ಸಾಂಸ್ಕೃತಿಕ ಧಾಳಿಯನ್ನು ಎದುರಿಸುವುದಾದರೂ ಹೇಗೆ? ಜನರ ನಿಜವಾದ ಜನಪ್ರಿಯ ಸಂಸ್ಕೃತಿಯನ್ನು ದೂರ ಓಡಿಸುವ ಧಾಳಿ ಇದಾಗಿದೆ. ಮೊದಲನೆಯದಾಗಿ, ***ಜನರ ಸಮಸ್ಯೆಗಳನ್ನು ಸಾಂಸ್ಕೃತಿಕ ಅಜೆಂಡಾವಾಗಿ ಮತ್ತೆ ತರಬೇಕು. ಜನರ ಈ ಸಮಸ್ಯೆಗಳನ್ನು ಮರೆಮಾಚುವ ಮತ್ತು ಅಳಿಸಿ ಹಾಕುವ ತಂತ್ರಗಳೇ ಜಾಗತೀಕರಣ ಮತ್ತು ಕೋಮುವಾದದ ಸಂಸ್ಕೃತಿಗೆ ಮೂಲ ಬಂಡವಾಳ. ಅವರ ಸಾಂಸ್ಕೃತಿಕ ಅಧಿಪತ್ಯವನ್ನು ಎದುರಿಸಲು ನಾವು ಇದನ್ನು ಮಾಡಲೇಬೇಕಾಗಿದೆ.***

ಇದಲ್ಲದೆ, ***ಈಗಿರುವ ಪ್ರಾಕಾರಗಳನ್ನೇ ಬಳಸುವ ಮತ್ತು ಹೊಸ ರೀತಿಯಲ್ಲಿ ಬಳಕೆಮಾಡುವ ಜತೆಯಲ್ಲೇ, ಜನಪ್ರಿಯ ಸಂಸ್ಕೃತಿಯ ಹೊಸ ಪ್ರಾಕಾರಗಳನ್ನು ಸೃಷ್ಟಿ ಮಾಡಬೇಕು. ಜನರನ್ನು ಅದರಲ್ಲೂ ಮಕ್ಕಳು ಮತ್ತು ಯುವಜನರನ್ನು ಟಿ.ವಿ. ಸೆಟ್ಟುಗಳಿಗೆ ಕಟ್ಟಿ ಹಾಕುವ ಮೂಲಕ ಸಹಜ ಸಾಮಾಜಿಕ ಸಂವಾದಗಳನ್ನೇ ನಿಧಾನವಾಗಿ ಆದರೆ ಖಂಡಿತವಾಗಿ ನಾಶ ಮಾಡುತ್ತಿರುವ ಈ ವಿದ್ಯುನ್ಮಾನ ಮಾಧ್ಯಮದ ಶಕ್ತಿಯನ್ನು ಎದುರಿಸಲು ಇದು ಅತ್ಯಗತ್ಯ ವಾಗಿದೆ.*** ಈ ಸಂದರ್ಭದಲ್ಲಿ, ನಮ್ಮ ಚರ್ಚೆಯ ಪ್ರಾರಂಭಕ್ಕೆ ಮತ್ತು ಬರ್ಲಿನ್‌ನಲ್ಲಿನ ನಮ್ಮ ಅನುಭವಕ್ಕೆ ಮತ್ತೆ ಹಿಂದಿರುಗೋಣ.






ಜಾನಪದ ಪ್ರಕಾರಗಳು ಹಲವು, ವೈವಿಧ್ಯಮಯ

ಇದರರ್ಥ ಈಗಿರುವ ಪ್ರಾಕಾರಗಳನ್ನೆಲ್ಲ ತ್ಯಜಿಸಿಬಿಡಬೇಕೆಂದು ನಾವು ಹೇಳುತ್ತಿಲ್ಲ ಅಥವಾ ಬೇರೆ ಪ್ರಾಕಾರಗಳನ್ನು ಸೃಷ್ಟಿಸಿದ ಕೂಡಲೇ ನಮ್ಮ ಸಮರವನ್ನು ನಾವು ಗೆದ್ದವೆಂತಲೂ ಹೇಳುತ್ತಿಲ್ಲ. ಎಲ್ಲಾ ಹೊಸ ಪ್ರಾಕಾರಗಳನ್ನು ಮತ್ತು ಅನ್ವೇಷಣೆಗಳನ್ನು ಜಾಗತೀಕರಣದ ಸಾಂಸ್ಕೃತಿಕ ಸಾಮ್ರಾಟರು ಬಹಳ ಬೇಗ ತಮ್ಮದಾಗಿಸಿಕೊಳ್ಳುತ್ತಾರೆ. ನೆನಪಿನಲ್ಲಿಡಬೇಕಾದ ಅಂಶವೆಂದರೆ ಜನರ ಸಮಸ್ಯೆಗಳನ್ನು ವಸ್ತುವನ್ನಾಗಿ ಕೇಂದ್ರ ಬಿಂದುವಿಗೆ ತರಬೇಕು ಮತ್ತು ಪ್ರಾಕಾರಗಳಲ್ಲಿ ಹೊಸ ಹೊಸ ಅನ್ವೇಷಣೆಗಳು ಆಗಬೇಕು. ಹೀಗೆ ಮಾಡುವುದರ ಮೂಲಕ ಮಾತ್ರ ನಾವೀಗ ಸಾಂಸ್ಕೃತಿಕ ಧಾಳಿಯನ್ನು ಎದುರಿಸುವ ಹೋರಾಟವನ್ನು ಬಲಿಷ್ಠಗೊಳಿಸಬಹುದು.

ಇಂದಿನ ವಿಶ್ವದಲ್ಲಿ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವಲ್ಲಿ ಜಾಗತೀಕರಣ, ವಾಣಿಜ್ಯೀಕರಣ ಮತ್ತು ಕೋಮುವಾದೀಕರಣ ಇವು ಒಂದಕ್ಕೊಂದು ಸಂಬಂಧವಿಲ್ಲದ ಅಂಶಗಳೇನಲ್ಲ.




ಅನು: **ಟಿ.ಸುರೇಂದ್ರರಾವ್**

(ಪೀಪಲ್ಸ್ ಡೆಮಾಕ್ರಸಿ, ಏಪ್ರಿಲ್ 2000)

ದೇಶ ವಿಭಜನೆಯ ದುರಂತ ಫಿಲಂಗಳಲ್ಲಿ .....

ಶರತ್‌ಚಂದ್ರ



ಸ್ವಾತಂತ್ರ್ಯದ ಸಂದರ್ಭದಲ್ಲಿ ಆದ ಮತ್ತು ನಂತರ ಭಾರೀ ಕೋಮುದಂಗೆಗಳು ಮಾರಣಹೋಮಕ್ಕೆ ದೇಶ ವಿಭಜನೆ ನಮ್ಮ ದೇಶದ ಕಳೆದ ಶತಮಾನದಲ್ಲಿ ಕಂಡ ಅತ್ಯಂತ ದೊಡ್ಡ ದುರಂತ. ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನವನ್ನು ಅಲ್ಲೋಲ ಕಲ್ಲೋಲ ಗೊಳಿಸಿದ ಭೀಕರ ಘಟನಾವಳಿ. ಎರಡೂ ದೇಶಗಳ ಗಡಿ ಪ್ರದೇಶದಲ್ಲಿ ಭಾರಿ ಸಂಖ್ಯೆಯ ನಿರಾಶ್ರಿತರು ಭೀಕರ ಮಾನವೀಯ ಬಾಂಧವ್ಯಗಳ ಹಿತಕ್ಕೆ ದಾರಿ ಮಾಡಿಕೊಡುವ ಮೂಲಕ ದುಃಸ್ವಪ್ನವಾಗಿರುವ ಘಟನೆ. ಸ್ವಾಭಾವಿಕವಾಗಿಯೇ ಇದು ನಮ್ಮ ಅದರಲ್ಲೂ ವಿಭಜನೆಯಿಂದ ನೇರವಾಗಿ ಪರಿಣಾಮಕ್ಕೊಳಗಾದ ಪ್ರದೇಶದ ಭಾಷೆಗಳಾದ ಹಿಂದಿ, ಉರ್ದು, ಪಂಜಾಬಿ, ಬಂಗಾಳಿ - ಸಾಹಿತ್ಯದಲ್ಲಿ ಇದು ಪ್ರತಿಬಿಂಬಿತವಾಗಿದೆ. ವಿಭಜನೆಯ ಸಂದರ್ಭದ ಮಾನವೀಯ ದುರಂತವನ್ನು ಹಲವು, ಕಥೆ ಕಾದಂಬರಿಗಳು ಬಿಂಬಿಸಿವೆ.

ಹಾಗೆ ಈ ಮಾನವೀಯ ದುರಂತ ಮರುಕಳಿಸದೆ ಎಚ್ಚರವಾಗಿರುವಂತೆ ಸಾಹಿತ್ಯ ಕೃತಿಗಳು ಅದನ್ನು ಒಂದು ಕಡೆ ಜೀವಂತವಾಗಿಟ್ಟಿವೆ.ಎರಡೂ ದೇಶದ ಆಳುವವರೂ, ಮತಾಂಧ ಶಕ್ತಿಗಳು, ಅವರ ಸಾಮ್ರಾಜ್ಯಶಾಹಿ ಬೆಂಬಲಿಗರು ಈ ದುರಂತದ ದುಃಸ್ವಪ್ನವನ್ನು ಇನ್ನೊಂದು ರೀತಿಯಲ್ಲಿ ಜೀವಂತವಾಗಿ ಇಟ್ಟಿದ್ದಾರೆ. ಅದರ ಪುನರಾವರ್ತನೆಗೆ ಪ್ರಯತ್ನಿಸುತ್ತಿದ್ದಾರೆ. ಬಾಬರಿ ಮಸೀದಿಯ ನಾಶದ ಮೂಲಕ ಮುಸ್ಲಿಂ ಮೂಲಭೂತವಾದಿಗಳು, ಸಿಖ್ ಪ್ರತ್ಯೇಕವಾದಿಗಳು ಅಂತಹುದೇ ಕೋಮು ದಳ್ಳುರಿಯನ್ನು ಪುನಃ ಹಚ್ಚಲು ಹೆಣಗುತ್ತಿದ್ದಾರೆ. ಈ ಸಂದರ್ಭದಲ್ಲಿ ಈ ದುರಂತದ ನೆನಪು ಹಲವು ರೀತಿಯಲ್ಲಿ ಮರುಕಳಿಸುತ್ತಿದ. ಒಂದು ಕಡೆ ವಿಭಜನೆಯ ಮಾನವೀಯ ದುರಂತ ಬಿಂಬಿಸಿದ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಫಿಲಂಗಳಾಗಿ ಮಾಡಲಾಗುತ್ತಿದೆ. ಇನ್ನೊಂದು ಕಡೆ ಇಂದಿನ ಸಂದರ್ಭದಲ್ಲಿ ವಿಭಜನೆಯಂತಹ ದುರಂತ ನಿರ್ಮಿಸುವ ಶಕ್ತಿಗಳ ಬಗ್ಗೆ ಫಿಲಂಗಳು ಪ್ರತಿಸ್ಪಂದಿಸುತ್ತಿವೆ. ಇಂತಹ ಫಿಲಂಗಳು ವಿಭಜನೆಯ ದುರಂತದ ನೆನಪನ್ನು ಇಂದಿನ ಸಂದರ್ಭದ ಜತೆ ಮಾಡುತ್ತಿವೆ. ಇಂತಹ ಫಿಲಂಗಳ ವಿಶ್ಲೇಷಣೆ ಈ ಲೇಖನದ ಉದ್ದೇಶ.

ದೇಶ ವಿಭಜನೆಯ ಬಗೆಗೆ ಆರು ಫಿಲಂಗಳು

ತಮಸ್, ಗರಂ ಹವಾ, 1947 Earth, ಟ್ರೈನ್ ಟು ಪಾಕಿಸ್ತಾನ್, ವಿಭಜನೆಯ ಸಮಯದ ಕೆಲವು ಶ್ರೇಷ್ಠ ಸಾಹಿತ್ಯ ಕೃತಿಗಳ ಫಿಲಂ ರೂಪ. ಹೇ ರಾಮ್ ಮತ್ತು ಗದರ್ ಎರಡನೇ ರೀತಿಯ ಫಿಲಂಗಳು. ಇವುಗಳಲ್ಲಿ ಗರಂ ಹವಾ ಮೊದಲನೆಯದು - 70 ರ ದಶಕದ ಮಧ್ಯದಲ್ಲಿ ತಯಾರಿಸಿದ್ದು. ತಮಸ್ 5 ಗಂಟೆಗಳ ಟೆಲಿವಿಷನ್ ಧಾರವಾಹಿಯಾಗಿ 1988 ರಲ್ಲಿ ದೂರದರ್ಶನದಲ್ಲಿ ಪ್ರಸಾರವಾಗಿ ವಿವಾದಾತ್ಮಕವಾಗಿಯ ಇತ್ತು. 1947 Earth, ಟ್ರೈನ್ ಟು ಪಾಕಿಸ್ತಾನ್, ಹೇರಾಮ್ ಮತ್ತು ಗದರ್ ಇತ್ತೀಚಿಗೆ (ಅಂದರೆ ಒಂದೆರೆಡು ವರ್ಷಗಳಲ್ಲಿ) ತಯಾರಿಸಲಾದ ಫಿಲಂಗಳು. ಗದರ್ ಅದರಲ್ಲಿ ಇತ್ತೀಚಿನದು.

'ತಮಸ್' ಖ್ಯಾತ ಹಿಂದಿ ಕತೆಗಾರ ಭೀಷ್ಮಸಹಾನಿಯವರ ಕಾದಂಬರಿ ಆಧಾರಿತ ಫಿಲಂ. ಗರಂ ಹವಾ ಸಹ ಹಿಂದಿ (ಲೇಖಕ ಇಸ್ಮತ್ ಚುಗ್‌ತಾಯ್) ಕತೆ ಆಧಾರಿತ. 1947 Earth ಇಂಗ್ಲೀಷ್ ಕಾದಂಬರಿ 'ದಿ ಐಸ್‌ಕ್ಯಾಂಡಿ ಮ್ಯಾನ್' ಆಧಾರಿತ. 'ಟ್ರೈನ್ ಟು ಪಾಕಿಸ್ತಾನ್' ಕುಶವಂತ್ ಸಿಂಗ್‌ರ ಪ್ರಸಿದ್ಧ ಕಾದಂಬರಿ. 'ಹೇ ರಾಮ್' ಮತ್ತು 'ಗದರ್' ಇವೆರಡು ಸಾಹಿತ್ಯ ಕೃಷಿ ಆಧಾರಿತ ಫಿಲಂಗಳಲ್ಲ. ಇವೆಲ್ಲವೂ ಪ್ರಸಿದ್ಧ ಫಿಲಂ ನಿರ್ದೇಶಕರ ಕೃತಿಗಳೇ ಸತ್ಯು (ಗರಂ ಹವಾ), ಗೋವಿಂದ ನಿಹಲಾನಿ(ತಮಸ್), ದೀಪಾ ಮೆಹ್ತಾ(1947 Earth) ಪಮೇಲಾ ರೂಕ್ಸ್ (ಟ್ರೈನ್ ಟು ಪಾಕಿಸ್ತಾನ್) ಮತ್ತು ಕಮಲ್ ಹಾಸನ್ (ಹೇರಾಮ್).

ಏಕೀ ಆಸಕ್ತಿ?

ಈ ಆರು ಫಿಲಂಗಳಲ್ಲಿ ನಾಲ್ಕು ಫಿಲಂಗಳು ಇತ್ತೀಚಿಗೆ ಮಾಡಲ್ಪಟ್ಟಿವೆ ಎಂಬುದೇ ಗಮನಾರ್ಹವಾದ ಅಂಶ. ಇದ್ದಕ್ಕಿದ್ದ ಹಾಗೆ ಏಕೀ ಆಸಕ್ತಿ ದೇಶದ ವಿಭಜನೆಯ ದುರಂತದಲ್ಲಿ? ಇದಕ್ಕೆ ಹಲವು ಕಾರಣಗಳಿದ್ದ ಹಾಗೆ ಕಾಣ್ತದೆ. ದೇಶದ ಜನಮಾನಸವನ್ನು ಅಲುಗಾಡಿಸಿದ ದುರಂತದಬಗ್ಗೆ ಫಿಲಂಗಳು ಸಾಮಾನ್ಯವಾಗಿ ಬಹಳ ಸಮಯದ ನಂತರವೇ ಆಗುತ್ತವೆ. ದೇಶದ ವಿಭಜನೆಯ ಸಮಯದಲ್ಲಿ ಧುತ್ತೆಂದು ಎದುರಾಗಿದ್ದ ಜಾತ್ಯಾತೀತತೆ ಮತ್ತು ಧರ್ಮ-ಆಧಾರಿತ ದೇಶದ ಪರಿಕಲ್ಪನೆ ನಡುವಿನ ಪ್ರಶ್ನೆ ಪುನಃ ಎದುರಾಗಿರುವುದು ಇನ್ನೊಂದು ಕಾರಣವಿರಬಹುದು ಈ ಆಸಕ್ತಿ ಪುನಃ ಕೆರಳಲು.

ಇಂತಹ ಮಹಾನ್ ದುರಂತದ ಸುತ್ತಮುತ್ತ ಫಿಲಂ ಮಾಡುವುದು ಕತ್ತಿಯ ಅಲಗಿನ ಮೇಲೆ ನಡೆದಂತೆ. ದುರಂತದ ಮತ್ತು ಅದು ಮರುಕಳಿಸಬಾರದು ಎಂಬ ಬಗ್ಗೆ ಫಿಲಂಕಾರನಲ್ಲಿ ಮಾನವೀಯ ಕಾಳಜಿ ಇಲ್ಲದಿದ್ದರೆ ಫಿಲಂ ಜನ ಮರೆತಿರುವ ಆ ಮಹಾ ದುಃಸ್ವಪ್ನವನ್ನು, ಅದರ ಜತೆಗಿನ ಆಳವಾದ ಗಾಯಗಳನ್ನು ಹಸಿಗೊಳಿಸಿದಂತಾಗಬಹುದು. ಈ ದುರಂತದ ಹಲವು ಆಯಾಮಗಳನ್ನು ಸಮಗ್ರವಾಗಿ ಮಾನವೀಯ ದೃಷ್ಟಿಯಿಂದ ನೋಡದಿದ್ದರೆ **ಹಲವು ವಿಕೃತಿಗಳಿಗೆ ಕಾರಣವಾಗಬಹುದು.** ವಿಭಜನೆಯ ನಂತರ ಹುಟ್ಟಿದ ಮತ್ತು ಈದುರಂತದ ಬಗ್ಗೆ ಹೆಚ್ಚೇನೂ ಗೊತ್ತಿಲ್ಲದಿರುವ (ಅದರ ಕಹಿ, ದುಃಸ್ವಪ್ನಕಾರಿ ನೆನಪೂ ಸಹ ಇಲ್ಲದಿರುವ) ಪೀಳಿಗೆಯೇ ಬಹುಸಂಖ್ಯಾತರಿರುವ ಇಂದಿನ ಸಂದರ್ಭದಲ್ಲಿ ಇದು ಇನ್ನೂ ಹೆಚ್ಚು ಮಹತ್ವದ್ದು.

'ತಮಸ್' ತೋರಿದ ಬೆಳಕು

ಈ ದೃಷ್ಟಿಯಿಂದ ನೋಡಿದರೆ ವಿಭಜನೆಯ ದುರಂತವನ್ನು ಎಲ್ಲಾ ಆಯಾಮಗಳೊಂದಿಗೆ ಬಿಂಬಿಸುವ ಮತ್ತು ನೋಡುಗನಲ್ಲಿ ಆ ಬಗ್ಗೆ ಸರಿಯಾದ ದೃಷ್ಟಿಕೋನ ಉಂಟುಮಾಡುವಲ್ಲಿ ಅತ್ಯಂತ ಯಶಸ್ವಿ ಮತ್ತು ಉತ್ತಮ ಪ್ರಯತ್ನವೆಂದರೆ 'ತಮಸ್' ಎನ್ನಬಹುದು. 'ಚರಿತ್ರೆಯಿಂದ



ತಮಸ್ ಚಿತ್ರದ ಒಂದು ದೃಶ್ಯ

ಪಾಠ ಕಲಿಯದವರು ಅದನ್ನು ಮರುಕಳಿಸುವುದಕ್ಕೆ ಬಾಧ್ಯರಾಗುತ್ತಾರೆ' ಎಂಬ ನುಡಿಯೊಂದಿಗೆ ಆರಂಭವಾಗುವ ಟಿ.ವಿ. ಧಾರವಾಹಿ, ಆ ಮಾತನ್ನು ಪ್ರಭಾವಕಾರಿಯಾಗಿ ದೃಶ್ಯಮಾಧ್ಯಮದ ಎಲ್ಲಾ ಸಾಧ್ಯತೆಗಳನ್ನು ಬಳಸಿಕೊಂಡು ಹೇಳಿದೆ. ಭಿಷ್ಮ ಸಾಹನಿಯವರ ಕಾದಂಬರಿಯನ್ನು ಮೀರಿನಿಂತು, ಸೃಜನಾತ್ಮಕವಾಗಿ ಹಲವು ಆಯಾಮಗಳನ್ನು ಸೇರಿಸಿದೆ.

ಕಾಂಟ್ರಾಕ್ಟರ್ ಹೇಳಿದ ಹಾಗೆ ಒಂದು ಹಂದಿಯನ್ನು ಸಾಯಿಸುವ ಕಾಯಕದಲ್ಲಿ ತೊಡಗಿದ ಅಸ್ಪೃಶ್ಯ ನೂಥೂನ ದೃಶ್ಯದಿಂದ ಆರಂಭವಾಗುವ ಧಾರವಾಹಿ ಅದು ಹೇಗೆ ಮರುದಿನ ಮಸೀದಿಯ ಎದುರು ಪ್ರತ್ಯಕ್ಷವಾಗಿ ಇಡೀ ಪಟ್ಟಣ (ಜಲಾಲಬಾದ್)ದಲ್ಲಿ ಕೋಮು ದಳ್ಳುರಿಯನ್ನು ಹೇಗೆ ಹತ್ತಿಸುತ್ತದೆ. ಎಲ್ಲಾ ಕೋಮಿನ ಮತಾಂಧರು ಸಂಘಟಿತರಾಗಿ ಹೇಗೆ ಕೋಮು ದಳ್ಳುರಿಯನ್ನು ಹಚ್ಚುತ್ತಾ, ಹೆಚ್ಚಿಸುತ್ತಾ ಹೋಗುತ್ತಾರೆ ಎಂಬುದನ್ನು 'ತಮಸ್' ಪ್ರಭಾವಶಾಲಿಯಾಗಿ ಚಿತ್ರಿಸಿದೆ. ಹಿಂದೂ, ಸಿಖ್, ಮುಸ್ಲಿಮ್ ಎಲ್ಲಾ ಮತಗಳ ಎಲ್ಲಾ ರೀತಿಯ ಸಶಕ್ತ (ಮತಾಂಧ, ಜಾತ್ಯಾತೀತ, ಇವೆರಡರ ನಡುವೆ ಓಲಾಡುತ್ತಿರುವ) ಪಾತ್ರಗಳು 'ತಮಸ್' ನಲ್ಲಿ ಬಂದು ಉಳಿದೆಲ್ಲಾ ಫಿಲಂಗಳಿಗಿಂತ 'ವ್ಯಾಪಕ ಕ್ಯಾನವಾಸ್' ನ್ನು ಬಳಸುತ್ತದೆ. ಒಂದು ಕಡೆ ಕೋಮುದಳ್ಳುರಿಯ ವಾತಾವರಣದಲ್ಲಿಯೂ ಇತರ ಕೋಮಿನ ಜನಗಳಿಗೆ ಸೋದರತ್ವ ತೋರಿಸುವ, ಅವರನ್ನು

ಹಿಂಸಾಚಾರದಿಂದ ರಕ್ಷಿಸುವ ಮಾನವೀಯತೆ, ಇನ್ನೊಂದು ಕಡೆ ಎಲ್ಲರನ್ನು ಒಂದಲ್ಲ ಒಂದು ಗಳಿಗೆಯಲ್ಲಿ ಕೋಮುದಳ್ಳುರಿ 'ಪೈಶಾಚಿಕ ಪ್ರವೃತ್ತಿ' ಗೆ ತಳ್ಳುವುದನ್ನು 'ತಮಸ್' ತೋರಿಸಿ ಸಂಕೀರ್ಣ ಚಿತ್ರ ಕೊಡುತ್ತದೆ. ಯಾವದೇ ಭೀಕರ ದುರಂತದಲ್ಲಿ ಕಂಡುಬರುವ ಮನುಜನ ಮೂಲ 'ಒಳಿತು' 'ಕೆಡುಕು'ಗಳ ಆಳವಾದ ಶೋಧನೆಯಲ್ಲೂ 'ತಮಸ್' ತೊಡಗುತ್ತದೆ.

'ತಮಸ್' ಟೀವಿ ಧಾರಾವಾಹಿ ಮತ್ತು ಫಿಲಂ ಎರಡೂ ಆಗಿ ಬಂದದ್ದರಿಂದಲೋ ಏನೋ ವ್ಯಾಪಕವಾಗಿ ಜನರನ್ನು ತಲುಪಿದೆ. ಜನರನ್ನು ತಟ್ಟುವಲ್ಲಿ, ಸರಿಯಾದ ಸ್ಪಂದನ ಒದಗಿಸಿಕೊಳ್ಳುವಲ್ಲೂ ಅತ್ಯಂತ ಯಶಸ್ವಿ ಚಿತ್ರ. ಅದಕ್ಕಿಂತ ಮೊದಲು ಬಂದ 'ಗರಂ ಹವಾ' ಆಗಲಿ, ಆಮೇಲೆ ಬಂದುವುಗಳಾಗಲಿ ಜನರನ್ನು ತಲಪುವಲ್ಲಿ 'ತಮಸ್' ನಷ್ಟು ಪರಿಣಾಮಕಾರಿಯಾಗಲಿಲ್ಲ.

'ಗರಂ ಹವಾ' ಮುಸ್ಲಿಮನ ಉಭಯ ಸಂಕಟ

ಆಗ್ರಾದಲ್ಲಿ ಹಲವು ಪೀಳಿಗೆಗಳಿಂದ ನೆಲೆಸಿದ್ದ ಮುಸ್ಲಿಂ ಪಾದರಕ್ಷೆ-ಕಾರ್ಖಾನೆ ಒಡೆಯ ಸಲಿಂ ಮಿರ್ಜಾ ವಿಭಜನೆಯ ಸಮಯದಲ್ಲಿ ಎಲ್ಲರಂತೆ ಉಭಯ ಸಂಕಟಕ್ಕೆ ಸಿಕ್ಕಿ ಹಾಕಿಕೊಂಡಿರುವುದರ ಚಿತ್ರಣ 'ಗರಂ ಹವಾ'ದಲ್ಲಿ ಮೂಡಿಬಂದಿದೆ. ವಿಭಜನೆಯ ದುರಂತದ ಮೇಲೆ ಬಂದ ಮೊದಲ (1975) ಮಹತ್ವದ ಚಿತ್ರವಾಗಿರುವ ಹೆಗ್ಗಳಿಕೆ 'ಗರಂ ಹವಾ'ದ್ದು. ವಿಭಜನೆಯ ದುರಂತದ ಬಗೆಗಿನ ಇತರ ಫಿಲಂಗಳೆಲ್ಲಾ ಪಂಜಾಬಿನ ಕಥೆಯನ್ನು ಹೇಳಿದರೆ, ವಿಭಜನೆಯ ಗೆರೆಯಿಂದ ದೂರವಿದ್ದರೂ ಆ ದುರಂತಕ್ಕೆ ಬಲಿಯಾದ ಉತ್ತರ ಪ್ರದೇಶದಲ್ಲಿ 'ಗರಂ ಹವಾ' ನಡೆಯತ್ತದೆ. ಸಲಿಮ್ ಮಿರ್ಜಾ ತನ್ನ ಸ್ವಂತ ಸೋದರ, ಇತರ ಹಲವು ಸಂಬಂಧಿಗಳಂತೆ ತನ್ನ ಸ್ವಂತ ಊರು ತೊರೆದು ಗೊತ್ತಿಲ್ಲದ ಜಾಗದಲ್ಲಿ ಧರ್ಮದ ಆಧಾರದ ಮೇಲೆ ತನ್ನ ಹೊಸ ದೇಶ ಸ್ವೀಕರಿಸಲು ನಿರಾಕರಿಸುವ ಧೈರ್ಯ ತೋರುತ್ತಾನೆ. ಆದರೆ ಅವನ ನಿರ್ಧಾರದ ಮೇಲೆ ಪ್ರಹಾರದ ಮೇಲೆ ಪ್ರಹಾರವಾಗುತ್ತದೆ. ಪಾಕಿಸ್ತಾನಕ್ಕೆ ಹೋದ ಮಗಳಿಗೆ 'ನಿಶ್ಚಯ' ವಾದ ಹುಡುಗ ಮದುವೆಯಾಗಲು ವಾಪಸು ಬಂದಾಗ ಪೋಲೀಸರು ಆತನನ್ನು ಬಂಧಿಸುವುದು, ಮಗಳು ಆತ್ಮಹತ್ಯೆ ಮಾಡಿಕೊಳ್ಳುವುದು, ಪಾಕಿಸ್ತಾನಕ್ಕೆ ಹೋದ ಹಿರಿಯ ಸೋದರನ ಹೆಸರಲ್ಲಿ ಇರುವುದರಿಂದ ಹೊಸಕಾನೂನು ಪ್ರಕಾರ ಹಿರಿಯರ ಮನೆಯಿಂದ ಹೊರ ತಳ್ಳಲ್ಪಡುವುದು, ಹಿರಿಯ ಮನೆ ಬಿಡಲಾರದೆ ತಾಯಿ ಪ್ರಾಣ ಬಿಡುವುದು, ಮುಸ್ಲಿಮನೆಂಬ ಒಂದೇ ಕಾರಣಕ್ಕೆ ಎಲ್ಲರ ಸಂಶಯದ ಕಣ್ಣಿಂದ ವ್ಯವಹಾರ ಕುಸಿಯುವುದು, ಮುಸ್ಲಿಮ್ ಆದ ಕಾರಣ ಇಂಟರ್‌ವ್ಯೂಗೂ ಅನರ್ಹನಾದ ಮಗ - ಇವೆಲ್ಲಾ ಸಲಿಂ ಮಿರ್ಜಾರ ನಿರ್ಧಾರವನ್ನು ಸಡಿಲಿಸುತ್ತದೆ. ಆತ ಪಾಕಿಸ್ತಾನಕ್ಕೆ ವಲಸೆ ಹೋಗಲು ತಯಾರಾಗುತ್ತಾನೆ. ಆದರೆ ಸ್ಟೇಶನ್‌ಗೆ ಹೋಗುವಾಗ ಒಂದು ಮೆರವಣಿಗೆ ಅಡ್ಡ ಬರುತ್ತದೆ. ಎಲ್ಲಾ ಬಡವರ ಸಂಕಟದ ಬಗ್ಗೆ ಪ್ರತಿಭಟಿಸುವ ಈ ಮೆರವಣಿಗೆಯಲ್ಲಿ ಸಲಿಂ ಮಿರ್ಜಾನ ತನ್ನ ಮಗನ ಜತೆ ಶಾಮೀಲಾಗುವ ಆಶಾಭಾವನೆಯಿಂದ ಫಿಲಂ ಕೊನೆಗೊಳ್ಳುತ್ತದೆ.

'ತಮಸ್'ನ ವ್ಯಾಪಕ ಕ್ಯಾನ್‌ವಾಸ್ ಇಲ್ಲದಿದ್ದರೂ, ವಿಭಜನೆ ಸರಾಸರಿ ಭಾರತೀಯ ಮುಸ್ಲಿಮರನ್ನು ತಟ್ಟಿದ ಬಗೆಯನ್ನು 'ಗರಂ ಹವಾ' ಮನಮುಟ್ಟುವಂತೆ ಹೇಳುತ್ತದೆ. ಇಂದಿಗೂ ಭಾರತೀಯ ಮುಸ್ಲಿಮರು ಎದುರಿಸುವ ಉಭಯ ಸಂಕಟವನ್ನು ಧ್ವನಿಸುತ್ತದೆ. 'ಗರಂ ಹವಾ' ದೊಡ್ಡ ರೀತಿಯಲ್ಲಿ ಜನರನ್ನು ಮುಟ್ಟದಿದ್ದರೂ, ವಿಭಜನೆಯ ದುರಂತವನ್ನು ನೆನಸಿಕೊಳ್ಳುತ್ತಲೇ ಅದು ಮರುಕಳಿಸದಂತೆ ಸಂಯಮದಿಂದ ಫಿಲಂ ತಯಾರಿಸುವುದು ಹೇಗೆ ಎಂದು ತೋರಿಸಿದ ಮೊದಲ ಚಿತ್ರ. ಇಂತಹ ಮಹಾನ್ ದುರಂತದ ಬಗ್ಗೆ 25 ವರ್ಷಗಳ ನಂತರವೂ ಯಾರೂ ಫಿಲಂ ಮಾಡುವ ಧೈರ್ಯ ತೋರದಿರುವ ಸಂದರ್ಭದಲ್ಲಿ, ಅಂತಹ ಧೈರ್ಯ ತೋರಿದ ಮೊದಲ ಚಿತ್ರ.

ಮಾನವೀಯ ದುರಂತದ ಚಿತ್ರಣ '1947 Earth'

'1947 Earth' ಲಾಹೋರ್‌ನಲ್ಲಿರುವ ಒಂದು ಸಣ್ಣ ಪಾರ್ಸಿ ಕುಟುಂಬದಲ್ಲಿ ಬೆಳೆಯುತ್ತಿರುವ 8 ವರ್ಷದ ಹುಡುಗಿ ಲೆನ್ನಿಯ ದೃಷ್ಟಿಯಿಂದ ಬಿರುಗಾಳಿಯಾಗಿ ಬಂದಪ್ಪಳಿಸಿದ ವಿಭಜನೆ ಉಂಟು ಮಾಡುವ ದುರಂತದ ಚಿತ್ರಣ. ಈ ಬಿರುಗಾಳಿ ಅಪ್ಪಳಿಸುವ ಮೊದಲು ಲೆನ್ನಿಯ ಮನೆ ಒಂದು ಮಿನಿ ಭಾರತ. ಸುಂದರ ಹಿಂದೂ ಆಯಾ ಶಾಂತಾ, ಮುಸ್ಲಿಂ ಅಡುಗೆಯವ, ಇಮಾಮ್‌ದಿನ್, ದಿನಾ ಬರುವ 'ಐಸ್ ಕ್ಯಾಂಡಿ ಮ್ಯಾನ್' ದಿಲ್ ನವಾಜ್, 'ಮಸಾಜ್' ಮಾಡುವವ ಹಸನ್ - ಇವರೆಲ್ಲರೂ ಲೆನ್ನಿಯ ಮನೆಯಲ್ಲಿ ಮಾತ್ರವಲ್ಲ ಪಕ್ಕದ ಪಾರ್ಕಿನಲ್ಲಿ, ದಾಬಾಗಳಲ್ಲಿ ಒಬ್ಬರಿಗೊಬ್ಬರು ಛೇಡಿಸುತ್ತಾ ಲೇವಡಿ ಮಾಡುತ್ತಾ ಸಂತೋಷದಿಂದಿದ್ದವರು. ವಿಭಜನೆ ಮತ್ತು ಕೋಮು ದಳ್ಳುರಿ ಲೆನ್ನಿಯ ಮನೆಯ ಸುತ್ತಮುತ್ತ ತಲುಪಲು ಆರಂಭವಾಗುತ್ತದೆ. ನಗರದಲ್ಲಿ ಮುಸ್ಲಿಮರಿಂದ ಹಿಂದೂ-ಸಿಖ್ಖರ, ಸಿಖ್ಖರಿಂದ ಮುಸ್ಲಿಮರ ನರಮೇಧ ಆದರೂ ಲೆನ್ನಿಯ ಸಣ್ಣ ಜಗತ್ತಿನ ಮೇಲೂ ಪರಿಣಾಮ ಬೀರುವುದಿಲ್ಲ. ಗುರುದಾಸ್‌ಪುರದಿಂದ ತನ್ನ ಕುಟುಂಬ ಲಾಹೋರ್‌ಗೆ ಬರುವ ಟ್ರೈನ್‌ನ್ನು ಎದುರುಗೊಳ್ಳಲು ಹೋದ 'ಐಸ್ ಕ್ಯಾಂಡಿ ಮ್ಯಾನ್' ದಿಲ್ ನವಾಜ್ ವಾಪಸು ಬಂದಾಗ 'ರಾಕ್ಷಸ ಪ್ರವೃತ್ತಿ'ಯನ್ನು ತಡೆದುಕೊಳ್ಳುವುದು ಕಷ್ಟವಾಗುತ್ತಿದೆ ಎನ್ನುತ್ತಾನೆ. ಅಷ್ಟು ಭೀಕರವಾಗಿರುತ್ತದೆ ಟ್ರೈನ್‌ನಲ್ಲಿ ಆತ ನೋಡಿದ ಹೆಣಗಳ ರಾಶಿಯ ದೃಶ್ಯ. ಲೆನ್ನಿ, ಶಾಂತಾ ಮತ್ತು ಅವಳ ಗೆಳೆಯರ ಪುಟ್ಟ ಜಗತ್ತು ತತ್ತರಿಸಲು ಆರಂಭವಾಗುತ್ತದೆ. ಹೊರಗಿನ ತೂಫಾನ್ ಮನೆಯೊಳಗೆ ಆರಂಭವಾಗುತ್ತದೆ. ಕೊಲೆ, ದಿಲ್ ನವಾಜ್ ಸಹ ಇರುವ ಮತಾಂಧ ಮುಸ್ಲಿಮ ಯುವಕರ ಗುಂಪೊಂದು ಲೆನ್ನಿಯನ್ನು ಮನೆಯೊಳಗಿಂದ ಶಾಂತಾಳನ್ನು ಎಳೆದೊಯ್ಯುವ ಭೀಕರ ಕೃತ್ಯದೊಂದಿಗೆ ಕೊನೆಗೊಳ್ಳುತ್ತದೆ. '1947 Earth' ವಿಭಜನೆ ಹೇಗಾಯಿತು? ಯಾಕಾಯಿತು? ಎನ್ನುವುದಕ್ಕಂತ ಅದು 'ಐಸ್ ಕ್ಯಾಂಡಿ'ಯಂತಿದ್ದ ದಿನ್ ನವಾಜ್ ರಂತಹವರನ್ನು 'ರಾಕ್ಷಸ'ನಾಗಿಸುವ ಮಾನವೀಯ ದುರಂತದ ಬಗ್ಗೆ ಹೆಚ್ಚು ಮಿಡಿಯುತ್ತದೆ.

ಜನರನ್ನೇ ಮುಟ್ಟದ 'ಟ್ರೈನ್ ಟು ಪಾಕಿಸ್ತಾನ್'

ಅತ್ಯಂತ ಕಡಿಮೆ ಜನರನ್ನು ಮುಟ್ಟಿದ, ಕನಿಷ್ಟ ಪ್ರಚಾರ ಪಡೆದ ಚಿತ್ರ 'ಟ್ರೈನ್ ಟು ಪಾಕಿಸ್ತಾನ'. ಈ ಲೇಖಕ ಸಹ ಈ ಫಿಲಂನ್ನು ನೋಡಲಾಗಲಿಲ್ಲ. ಕಾದಂಬರಿಯ ಪರಿಚಯ ಮಾತ್ರ ಇರುವುದು. ಫಿಲಂ ಕಾದಂಬರಿಯ ಯಥಾವತ್ ಚಿತ್ರಣವೆನ್ನಲಾಗಿದೆ. ಈ ಕಥಾನಾಯಕ ಮನೋ ಮಜ್ರಾ ಎಂಬ ಪಂಜಾಬಿನ ಭಾಗದ ಮೆಜಿಸ್ಟ್ರೇಟ್. ಸಿಖ್ ಜಮೀಂದಾರರು, ಮುಸ್ಲಿಮ್ ಗೇಣಿದಾರರು ಇರುವ ಈ ಪ್ರದೇಶದಲ್ಲಿ ಲೇವಾದೇವಿಗಾನರ ಲೂಟಿ ಮತ್ತು ಕೊಲೆ ಆಗುತ್ತದೆ. ಮೇಜಿಸ್ಟ್ರೇಟ್ ಆ ಪ್ರದೇಶಕ್ಕೆ ದುಡಿಯುವವರು ಧರ್ಮದ ಆಧಾರದ ಮೇಲೆ ಕಾದಾಡಬಾರದು ಎಂಬ ಸಂದೇಶ ಸಾರಲು ಬಂದಿರುವ ಇಕ್ಬಾಲ್ ಎಂಬ ಕಮ್ಯುನಿಸ್ಟ್ ಕಾರ್ಯಕರ್ತನನ್ನು ಸಂಶಯದ ಮೇಲೆ ಬಂಧಿಸುತ್ತಾನೆ. ಸ್ಥಳೀಯ ಸಿಖ್ ದರೋಡೆಗಾರರೇ ಈ ಲೂಟಿ, ಕೊಲೆ ನಡೆಸಿರಬೇಕು ಎಂದು ಗೊತ್ತಿದ್ದರೂ ಮ್ಯಾಜಿಸ್ಟ್ರೇಟ್ ಇಕ್ಬಾಲ್‌ನ್ನು ಮುಸ್ಲಿಂ ಮತಾಂಧರ ಜತೆ ಸೇರಿರುವವನು ಎಂದು ಬಂಧಿಸುತ್ತಾನೆ. ಈ ಮ್ಯಾಜಿಸ್ಟ್ರೇಟ್‌ನ ಕೆಲಸ ಆ ಪ್ರದೇಶದಲ್ಲಿ ಕಾನೂನು, ವ್ಯವಸ್ಥೆ ಕಾಪಾಡುವುದಾದರೂ, ತನ್ನಮಗಳು, ಹೆಂಡತಿ ಕಳೆದುಕೊಂಡ ಈತ ನಿಷ್ಪಕ್ಷಪಾತನೇನಲ್ಲ. ಪಾಕಿಸ್ತಾನಕ್ಕೆ ಬರುವ, ಹೋಗುವ ಟ್ರೈನ್‌ಗಳು ಸಿಖ್ಖರ, ಹಿಂದೂಗಳ, ಮುಸ್ಲಿಮರ ಹೆಣಗಳನ್ನು ಹೊತ್ತು ತರುವ ಪ್ರಕ್ಷುಬ್ಧ ವಾತಾವರಣದಲ್ಲಿ ಆತನ ಸಂಶಯಗಳು, ನಿರ್ಣಯಗಳು ನಿಷ್ಪಕ್ಷಪಾತವಾಗಿರುವುದು ಹೇಗೆ? ವಿಭಜನೆಯ ದುರಂತದ ಇನ್ನೊಂದು ಮಾನವೀಯ ಮಗ್ಗುಲ ಬಗ್ಗೆ ಈ ಚಿತ್ರ ಹೇಳುತ್ತದೆ. ಆದರೆ ಈ ಫಿಲಂಗೆ ಜನರನ್ನು ಇತರ ಚಿತ್ರಗಳಷ್ಟೂ ತಲುಪದ್ದು ದುರದೃಷ್ಟಕರ.

ಅತ್ಯಂತ ಸಮಕಾಲೀಕ 'ಹೇ ರಾಮ'

ದೇಶ ವಿಭಜನೆಯ ದುರಂತದ ಬಗ್ಗೆ ಹೇಳುತ್ತಾ ವರ್ತಮಾನದಲ್ಲಿ ಅಂತಹ ದಳ್ಳುರಿಯನ್ನು ಹಬ್ಬಲು ಪ್ರಯತ್ನಿಸುತ್ತಿರುವ 'ಸಂಘ ಪರಿವಾರ'ದ ಪಿತೂರಿ ಜತೆ ಅದರ ಸಂಬಂಧಗಳನ್ನು ಸಮಕಾಲಿಕವಾಗಿ ಹೇಳುವ ಸಮರ್ಥ ಚಿತ್ರ 'ಹೇ ರಾಮ್'. ಬಾಬ್ರಿ ಮಸೀದಿಯ ನಾಶದ ಸಂದರ್ಭದಲ್ಲಿನ ಕೋಮು ಗಲಭೆಗಳ ಸಂದರ್ಭದಲ್ಲಿ ಮರಣಶಯ್ಯೆಯಲ್ಲಿರುವ ಸಾಕೇತ ರಾಮನ 'ಫ್ಲಾಷ್‌ಬ್ಯಾಕ್' ನಂತೆ ಆರಂಭವಾಗುತ್ತದೆ 'ಹೇ ರಾಮ್'. 'ಫ್ಲಾಷ್ ಬ್ಯಾಕ್' ನಲ್ಲೇ ಹರಪ್ಪ ಮೊಹಂಜದಾರೋ ನಾಗರಿಕತೆ (ಭಾರತ-ಪಾಕಿಸ್ತಾನಗಳ ಸಾಮಾನ್ಯ ಪ್ರಾಚೀನ ನಾಗರಿಕತೆ) ಅಧ್ಯಯನದಲ್ಲಿ ತೊಡಗಿರುವ ಸಾಕೇತರಾಮ್ ವಿಭಜನೆ ಹರಿಯಬಿಟ್ಟ ಕೋಮುದಳ್ಳುರಿಯಲ್ಲಿ ಸಿಕ್ಕಿಬಿದ್ದು ಹಿಂದೂ ಕೋಮುವಾದಿ ಶಕ್ತಿಗಳಿಂದ ಗಾಂಧೀಜಿಯ ಕೊಲೆಗೆ ಹೊರಟವನಾಗಿ ಪರಿವರ್ತಿತನಾಗುವ ದಾರುಣ ಕಥೆ ಹೇಳಲಾಗುತ್ತದೆ. ಹಳೆಯ ಮಿತ್ರ ಅಮ್ಜಾದ್ ಖಾನನ ಅಪರಿಮಿತ ಮೈತ್ರಿಭಾವ, ಗಾಂಧೀಜಿಯ ಜತೆ ಸಂಪರ್ಕದಿಂದ ಸಾಕೇತರಾಮ ಗಾಂಧೀಜಿಯ ಕೊಲೆಯ ಯೋಚನೆ ಬಿಟ್ಟರೂ, ಆತನ ಕಣ್ಣೆದುರಲ್ಲೇ ಕೊಲೆ ನಡೆದು ಹೋಗುತ್ತದೆ. ಕೋಮು ಶಕ್ತಿಗಳ ಈ ಭೀಕರ ಫ್ಯಾಸಿಸ್ಟ್ ಕೃತ್ಯದಿಂದ ನಡುಗಿ ಹೋದ ಸಾಕೇತರಾಮ ತನ್ನ ಮಾನವೀಯ ನಿಲುವಿಗೆ ವಾಪಸಾಗುತ್ತಾನೆ. ಆದರೆ ಆತ ಸತ್ತು ಹೆಣ ಹೊರಗೆ ಇಡುವಾಗ ಬಾಬ್ರಿ ಮಸೀದಿಯ ನಾಶದ ಸಂದರ್ಭದ ಕೋಮುಗಲಭೆಯಿಂದ ಹೊರಿಸಲಾದ ಕರ್ಫ್ಯೂ ಅಡ್ಡಿಯಾಗುತ್ತದೆ. ಈ ವಿಶಿಷ್ಟ ಕಥಾನಕ ಶೈಲಿಯಿಂದ 'ಹೇ ರಾಮ' ಗೆ 'ತಮಸ್' ಗಿಂತಲೂ ಹೆಚ್ಚಿನ ವ್ಯಾಪಕ ಆಯಾಮ ದೊರಕಿದೆ. ದೇಶದ ವಿಭಜನೆಯ ಮಾರಣಹೋಮ, ಬಾಬ್ರಿಮಸೀದಿ ಧ್ವಂಸದಿಂದ ಆರಂಭವಾದ ಕೋಮುವಾದಿ ಶಕ್ತಿಗಳಿಂದ ಅಧಿಕಾರ ಕುಸಿತಕ್ಕೆ ವ್ಯವಸ್ಥಿತ ಸಾಂಸ್ಕೃತಿಕ , ರಾಜಕೀಯ ಪ್ರಯತ್ನ - ಇವೆರಡರ ಹಿಂದಿದ್ದ ಹಿಂದೂ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ಭೀಕರ ವಿರಾಟ್ ಸ್ವರೂಪವನ್ನು ಅದರ ಎಲ್ಲಾ ಆಯಾಗಳೊಂದಿಗೆ ತೋರಿಸುತ್ತದೆ 'ಹೇ ರಾಮ್'. ಈ ದೃಷ್ಟಿಯಿಂದ 'ತಮಸ್'ಗಿಂತಲೂ ಹೆಚ್ಚಿನ ಮಹತ್ವದ ಚಿತ್ರ.


ಆದರೆ 'ಹೇ ರಾಮ್' ಅದರ ಮೂಲ ಸಂದೇಶವನ್ನು ಜನರಿಗೆ ತಿಳಿಸುವಲ್ಲಿ ಸ್ವಲ್ಪ ಮಟ್ಟಿಗೆ ಸೋತಿದೆ. 'ತಮಸ್' ನಷ್ಟು ಯಶಸ್ವಿಯಾಗಿಲ್ಲ. ಸಾಮಾನ್ಯ ಚಿತ್ರ ನೋಡುಗನಿಗೆ ಗೊತ್ತಿರದ ಚಾರಿತ್ರಿಕ, ಸಾಂಸ್ಕೃತಿಕ ಘಟನೆ/ ಸಂಕೇತಗಳ ಬಳಕೆ ಮುಂತಾದವುಗಳಿಂದ 'ಹೇ ರಾಮ್' ನ ಮೂಲ ಸಂದೇಶ ಬಹು ಜನರಿಗೆ ತಲುಪಿಲ್ಲ ಮಾತ್ರವಲ್ಲ ಕೋಮುವಾದಿ ಅಪಪ್ರಚಾರ (ಹಲವೊಮ್ಮೆ ಉದ್ದೇಶಪೂರ್ವಕ), ತಿರುಚುವಿಕೆಯಿಂದ 'ಹೇ ರಾಮ್' ಕೋಮು ಸಂಕೇತ ಬೀರುವಂಥದ್ದು ಎಂದು ಅರ್ಥ ಮಾಡಿಕೊಂಡವರೂ ಇದ್ದಾರೆ. ಆದರೆ ನಿಷ್ಪಕ್ಷಪಾತವಾಗಿ ಪೂರ್ವಾಗ್ರಹವಿಲ್ಲದೆ ನೋಡಿದ ಯಾರಿಗಾದರೂ 'ಹೇ ರಾಮ' ಭಾರತದಲ್ಲಿ ಹಿಂದೂ ಕೋಮುವಾದಿ ಫ್ಯಾಸಿಸಂನ ಅಪಾಯದ ಬಗ್ಗೆ ಹೇಳುವ ಆಳವಾದ ಕಾಳಜಿ ಇರುವ ವ್ಯಾಪಕ ರಾಜಕೀಯ, ಸಾಂಸ್ಕೃತಿಕ ಮಹತ್ವದ ಚಿತ್ರ ಎಂದು ಒಪ್ಪಿಕೊಳ್ಳಲೇಬೇಕು.



'ಗದರ್' ದುರಂತ ಮರುಕಳಿಸುವ ಪ್ರಯತ್ನ

'ಗದರ್' ಇವೆಲ್ಲಕ್ಕಿಂತ ವಿಭಿನ್ನವಾಗಿ ಈ ಲೇಖನದ ಆರಂಭದಲ್ಲಿ ಹೇಳಿದ ಎಲ್ಲಾ ಎಚ್ಚರಗಳನ್ನು ಮರೆತು, ವಿಭಜನೆಯ ದುರಂತವನ್ನು ಸೂಪರ್ ಹಿಟ್ ಫಾರ್ಮುಲಾ ಮಾಡಲು ಹೊರಟ ಚಿತ್ರ. ಒಂದು ರೀತಿಯಲ್ಲಿ ಹೇಳಬೇಕಾದರೆ ಈ ಐದು ಚಿತ್ರಗಳ ಜತೆ

ಉಲ್ಲೇಖಿಸಬಹುದಾದ ಚಿತ್ರವೇ ಅಲ್ಲ. ಆದರೆ ಇಂದು ಹರಡುತ್ತಿರುವ ಮುಸ್ಲಿಮ್ ದ್ವೇಷಿ, ಪಾಕ್-ದ್ವೇಷಿ ಜ್ವರದ ವಾತಾವರಣದಲ್ಲಿ ದೇಶದ ಬಹುಸಂಖ್ಯಾತ ಜನ ದೇಶದ ವಿಭಜನೆಗೆ ಕಾರಣವಾದ ಕೋಮುದಳ್ಳುರಿ ಬಗ್ಗೆ ನೋಡಿ ಮೆಚ್ಚಿರುವ, ಏಕಮಾತ್ರ ಚಿತ್ರ ಇದು. ವಾಸ್ತವವಾಗಿ ಇದು ಅದರ ತಲೆಬರಹ ಹೇಳುವಂತೆ ಪ್ರೇಮಕಥೆಯೂ ಅಲ್ಲ, ಕ್ರಾಂತಿಕಾರಿಯೂ(ಗದರ್) ಅಲ್ಲ. ದೇಶದ ವಿಭಜನೆಯ ದುರಂತದ ಬಗೆಗೂ ಇಲ್ಲ. ಮೊದಲ ಅರ್ಧದಲ್ಲಿ ದೇಶದ ವಿಭಜನೆ, ಕೋಮು ದಳ್ಳುರಿಯ ಬಗೆಗಿನ ಉತ್ತಮ ಚಿತ್ರದ ಭರವಸೆ ಮೂಡಿಸುತ್ತಾ, ಎರಡನೇಯ ಅರ್ಧದಲ್ಲಿ ತನ್ನ ನಿಜಸ್ವರೂಪ ಬಯಲು ಮಾಡುತ್ತದೆ. ಅತ್ಯಂತ ಕೆಳದರ್ಜೆಯ ಉದ್ರೇಕಕಾರಿ 'ದೇಶಪ್ರೇಮ' ಮುಸ್ಲಿಂ ವಿರೋಧಿ, ಪಾಕ್-ವಿರೋಧಿ ಧೋರಣೆ, ಉದ್ರೇಕಕಾರಿ ಹಿಂಸೆ, ಕೋಮುವಾದಿ ಉನ್ಮಾದವನ್ನು ಮೆರೆಸುತ್ತದೆ ಎರಡನೇ ಭಾಗ. ಎರಡನೇಯ ಭಾಗದ ಧೋರಣೆಗೆ ಮೊದಲನೆ ಭಾಗ ನೆಪವಿದ್ದಂತೆ ಇದೆ. 'ಗದರ್' ಹರಡುವ ಮೌಲ್ಯಗಳು ವ್ಯಾಪಕವಾದರೆ, ವಿಭಜನೆ ತಂದ ದುರಂತ ಮರುಕಳಿಸುವ ಅಪಾಯ ಖಂಡಿತ ಇದೆ.



(1947 Earth'. 'ಹೇರಾಮ್' 'ಗದರ್' ಇವುಗಳ ಬಗ್ಗೆ ವಿವರವಾದ ವಿಮರ್ಶೆ ಐಕ್ಯರಂಗದಲ್ಲಿ ಅನುಕ್ರಮವಾಗಿ ಬಂದಿದೆ)

- **ತಮಸ್: (1988)**
  ಚಿತ್ರಕಥೆ, ನಿರ್ದೇಶಕ : ಗೋವಿಂದ ನಿಹಲಾನಿ
  ಕಲಾಕಾರರು: ಓಂಪುರಿ, ದೀಪಾ ಸಾಹಿ, ಭೀಷಮ್ ಸಾಹನಿ, ಎ.ಕೆ.ಹಾನಗಲ್, ಮನೋಹರ ಸಿಂಗ್
- **ಗರಂ ಹವಾ (1975)**
  ನಿರ್ದೇಶಕ: ಎಂ.ಎಸ್.ಸತ್ಯು
  ಚಿತ್ರಕಥೆ: ಕೈಫಿ ಆಜ್ಮಿ/ ಶಮಾ ಜೈದಿ
  ಕಲಾಕಾರರು: ಬಲರಾಜ್ ಸಾಹನಿ, ಶೌಕಲ್ ಅಜಮಿ, ದೀನಾನಾಥ, ಖದರೇ ಬೇಗಂ, ಗೀತಾ, ಫರೂಕ್ ಶೇಕ್, ಯುನೋಸ್ ಪರವೇಜ್, ಜಲಾಲ ಆಘ)
- **1947 Earth (1999)**
  ನಿರ್ದೇಶಕಿ: ದೀಪಾ ಮೆಹ್ತಾ
  ಚಿತ್ರಕಥೆ:
  ಕಲಾಕಾರರು: ಅಮೀರ್ ಖಾನ್, ನಂದಿತಾದಾಸ್, ಕುಲಭೂಷಣ ಖರಬಂದ, ರಾಹುಲ್ ಖನ್ನಾ, ಕಿಟು ಗಿದ್ವಾನಿ, ಗುಲಶನ್ ಗ್ರೋವರ್
- **ಹೇ ರಾಮ್**
  ನಿರ್ದೇಶಕ: ಕಮಲಾಹಾಸನ್
  ಚಿತ್ರಕಥೆ:
  ಕಲಾಕಾರರು: ಕಮಲಾಹಾಸನ್, ಶಾರೂಕ್‌ಖಾನ್, ರಾಣಿ ಮುಖರ್ಜಿ, ವಸುಂಧರಾ
- **ಟ್ರೈನ್ ಟು ಪಾಕಿಸ್ತಾನ್ (1998)**
  ನಿರ್ದೇಶಕಿ: ಪಮೇಲಾ ರೂಕ್ಸ್
- **ಗದರ್ (2001)**
  ನಿರ್ದೇಶಕ: ಅನಿಲ್‌ಶರ್ಮ
  ಚಿತ್ರಕಥೆ:
  ಕಲಾಕಾರರು: ಸನ್ನಿಡಿಯೋಲ್, ಅಮರೀಶ್ ಪುರಿ

ಕಾಣಿಕೆ

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು-
ನಲ್ಲೆಯೊಲವ ತೆರೆದು ತಂದ
ಮಾತದಾವುದು -
ಸವಿಯ ಹಾಡ, ಕಥೆಯ ಕಟ್ಟಿ,
ಕಿವಿಯಲೆರೆದು ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು
ಎನಿಸಿತಾವುದು -
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು-

- ಕವಿ ಶ್ರೀ

ಶುಭಾಶಯಗಳೊಂದಿಗೆ,

ಗ್ರಾಮ ಪಂಚಾಯತ ಕಾರ್ಯಾಲಯ, ಹೇರೂರ

ಹೇರೂರ, ತಾ।। ಗಂಗಾವತಿ, ಜಿ।। ಕೊಪ್ಪಳ

ಯೋಜನೆಗಳು


1. ಬಾವೆರಡ್ಡಿ ಕ್ಯಾಂಪಿನಲ್ಲಿ ವಿಶ್ವಬ್ಯಾಂಕ್ ಯೋಜನೆಯಲ್ಲಿ ನೀರು ಶೇಖರಣೆ ಟ್ಯಾಂಕ್ ನಿರ್ಮಾಣಗೊಂಡಿದೆ.
2. ಹೇರೂರು ಗ್ರಾಮದಲ್ಲಿ ಸ್ತ್ರೀ ಶೌಚಾಲಯ ಕಾರ್ಯಪೂರ್ಣಗೊಂಡಿದೆ.
3. ಬಾವೆರಡ್ಡಿ ಕ್ಯಾಂಪಿನಲ್ಲಿ ಯುವಕ ಸಂಘದ ಕಟ್ಟಡ ಪ್ರಗತಿಯಲ್ಲಿದೆ.
4. ಗೋನಾಳ ಗ್ರಾಮದಲ್ಲಿ ಎಸ್.ವೇ.ಎಸ್ ವೇ ಎರಡು ಮನೆಗಳು ಪ್ರಗತಿಯಲ್ಲಿದೆ.
5. ಹೇರೂರ ಗ್ರಾಮದಲ್ಲಿ ನೆ.ಡಿ. 3 ಕಟ್ಟುವ ಕಾರ್ಯ ಪ್ರಗತಿಯಲ್ಲಿದೆ.
6. ಬಾವೆರಡ್ಡಿ ಕ್ಯಾಂಪ್ ಜಾ।। ಕ್ಯಾಂಪುಗಳಲ್ಲಿ ಚರಂಡಿ ನಿರ್ಮಾಣ ಪ್ರಗತಿಯಲ್ಲಿದೆ.

ಅಧ್ಯಕ್ಷರು	ಉಪಾಧ್ಯಕ್ಷರು	ಕಾರ್ಯದರ್ಶಿ
ಜಿ.ಲಿಂಗಯ್ಯ	**ಕಲಿಕಮೂರ್ತಿ**	**ಶಂಕರಪ್ಪ**

ಸದಸ್ಯರು: ವಿರುಪಾಕ್ಷಗೌಡ ಹಿರೇಗೌಡ, ಹೆಚ್.ಹುಲುಗಪ್ಪ, ನಾಗಪ್ಪಭಜಂತ್ರಿ, ಯಂಕನಗೌಡ ಪ್ರೊವಿ, ಮಲ್ಲಿಕಾರ್ಜುನಗೌಡ ಮಾ।। ಪಾಟೀಲ, ಮಲ್ಲಿಕಾರ್ಜುನ ಬ್ರಹ್ಮಯ್ಯ, ಶ್ರೀಮತಿ ಲಲಿತಮ್ಮ ಸರೋಜಮ್ಮ ಹನುಮವ್ವ, ಪದ್ಮಾವತಿ, ಜಯಲಕ್ಷ್ಮಿ ಸೂರ್ಯಕಾಂತಮ್ಮ ಬಿ.ವಿರೂಪಣ್ಣ, ನಾಗೇಶ್ವರರಾವ್ ಹಾಗೂ ಸಿಬ್ಬಂದಿವರ್ಗದವರು

ಹಟ್ಟಿ ಗ್ರಾಮ ಪಂಚಾಯತ

ತಾ।। ಲಿಂಗಸ್ಗೂರು, ಜಿಲ್ಲೆ ರಾಯಚೂರು



ಮಹಮ್ಮದ್ ಶಾಲಿಂ ಸಾಬ
ಉಪಾಧ್ಯಕ್ಷರು

2000-2001ನೇ ವರ್ಷದ ಹಟ್ಟಿ ಗ್ರಾಮ ಪಂಚಾಯತಿ ಯ ಪ್ರಗತಿ, ಸಾಧನೆ

1. ಅಂಬೇಡ್ಕರ್ ನಗರ (ವಾರ್ಡ್ ನಂ.5) ದಲ್ಲಿ ರೂ. 180000 ಕಿರು ನೀರು ಸರಬರಾಜು ಯೋಜನೆ ಪೂರ್ಣಗೊಂಡಿದೆ.
2. ಮಾಹಂತ ನಗರ (ವಾರ್ಡ್ ನಂ. 6) ದಲ್ಲಿ ರೂ. 2,00,000 ದಲ್ಲಿ ಕಿರು ನೀರು ಸರಬರಾಜು ಯೋಜನೆ ಪ್ರಗತಿ ಮತ್ತು ರೂ. 4,00,000 ದಲ್ಲಿ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಮಂಜೂರಾತಿ
3. ಸಿದ್ಧಾರೂಡ ಮಠ (ವಾರ್ಡ್ ನಂ. 8) ರಲ್ಲಿ ರೂ. 2,00,000 ದಲ್ಲಿ ಕಿರು ನೀರು ಸರಬರಾಜು ಯೋಜನೆ ಪ್ರಗತಿಗೊಳಿಸಲಾಗಿದೆ.
4. ಶಾಸಕರ ಅನುದಾನದಲ್ಲಿ ರೂ. 8,600,000 ಗಳಲ್ಲಿ ಡಾಂಬರು, ರಸ್ತೆ ಕಾರ್ಯ [illegible]ರ್ಣಗೊಂಡಿದೆ.
5. ಶಾಸಕರ ಅನುದಾನದಲ್ಲಿ ರೂ. 1,50,000 ಗಳಲ್ಲಿ ಜುಮಾ ಮಸೀದಿಯಿಂದ [illegible] ನಗರದ ವರೆಗೆ ಡ್ರೇನೆಜ್ ಕಾರ್ಯ ಪೂರ್ಣಗೊಂಡಿದೆ.
6. ಶಾಸಕರ ಅನುದಾನದ ಅಡಿಯಲ್ಲಿ ಶಾದಿ ಮಹಲ ಮಂಜಿಲ್ ಪೂರ್ಣಗೊಂಡಿದೆ. (ವೆಚ್ಚದ ಹಣ ರೂ. 4,00,000)
7. ಶಾಸಕರ ಅನುದಾನದಲ್ಲಿ ರೂ. 2,00,000 ಗಳಲ್ಲಿ ಮಾಂಸದ ಮಾರುಕಟ್ಟೆ ಕಾರ್ಯ ಪೂರ್ಣಗೊಂಡಿದೆ.
8. ರಾಯಚೂರು ಮುಖ್ಯರಸ್ತೆಯಿಂದ ಪಂಚಾಯತ ಕಾರ್ಯಾಲಯದವರೆಗೆ ರಸ್ತೆ ನಿರ್ಮಾಣ ಕಾರ್ಯವಾಗಿದೆ.
9. ಪಾಮನ ಕಲ್ಲೂರು ಕ್ರಾಸ್ ಹತ್ತಿರ ರೂ. 9,00,000 ದಲ್ಲಿ ನೀರಿನ ಟ್ಯಾಂಕ್ ಕಾರ್ಯದ ಆರಂಭ ಹಂತ. ರೂ. 20,00,000 ಗಳಲ್ಲಿ ಸರಕಾರಿ ಆಸ್ಪತ್ರೆಯ ಕಾರ್ಯ ಆರಂಭ (ಶಾಸಕರ.ಅನುದಾನದ ಅಡಿಯಲ್ಲಿ)
10. ಗ್ರಾಮ ಪಂಚಾಯತ ಅನುದಾನದಲ್ಲಿ ರೂ. 1,00,000 ವೆಚ್ಚದಲ್ಲಿ ಬಸ್ ತಂಗುದಾಣ ಪೂರ್ಣಗೊಂಡಿದೆ.
11. ಗ್ರಾಮದಲ್ಲಿ ಸುಮಾರು 6 ಬೊರವೆಲ್‌ಗಳ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. (ವೆಚ್ಚದ ಅಂದಾಜು 2,00,000)
12. ಜವಾಹರ ರೋಜಗಾರ ಯೋಜನೆ ಅಡಿಯಲ್ಲಿ ರೂ. 5,00,000 ಗಳ ಕಾರ್ಯ ಪ್ರಗತಿಯಲ್ಲಿದೆ.
13. ಸ್ವಚ್ಛತಾ ಗ್ರಾಮ ಯೋಜನೆ ಅಡಿಯಲ್ಲಿ ರೂ. 20,00,000 ಗಳ ಕಾಮಗಾರಿ ಮಂಜೂರಾಯಿತಿ
14. ಜವಾಹರ ರೋಜಗಾರ ಯೋಜನೆ ಅಡಿಯಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಗಳ ಎಂಟು ಜನ ಫಲಾನುಭವಿಗಳಿಗೆ ನಜೀರ್ ನಿವಾಸ ಮನೆ ಹಂಚಲಾಗಿದೆ.
15. ಕಾರಾ ನಗರದಲ್ಲಿ ರೂ. 2,00,000 ವೆಚ್ಚದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.
16. ಶಾಶ್ವತ ಕುಡಿಯುವ ನೀರಿನ (ಕೃಷ್ಣನದಿಯ) ವ್ಯವಸ್ಥೆಗಾಗಿ ಶಾಸಕರ ಬೆಂಬಲದೊಂದಿಗೆ ಮುಖ್ಯಮಂತ್ರಿಗಳಿಗೆ ಮನವಿ.

ದಸರಾ ಶುಭಾಶಯಗಳೊಂದಿಗೆ

ಗ್ರಾಮ ಪಂಚಾಯತ ಕಾರ್ಯಾಲಯ, ಹಣವಾಳ

ತಾ॥ ಗಂಗಾವತಿ, ಜಿ॥ ಕೊಪ್ಪಳ

ಸಾಧನೆಗಳು

1. 10ನೇ ಹಣಕಾಸು ಯೋಜನೆಯಲ್ಲಿ ಶರಣಬಸವೇಶ್ವರ ದೇವಸ್ಥಾನದಿಂದ ಬಸ್‌ಸ್ಟಾಪ್‌ವರೆಗೆ ಚರಂಡಿ ನಿರ್ಮಾಣ ಮಾಡಿದ್ದು ಇದನ್ನು ಇನ್ನೂ ಮುಂದುವರಿಸಿ ಪೂರ್ತಿಗೊಳಿಸಲಾಗುವುದು.
2. ಜವಾಹರ ಗ್ರಾಮ ಸಮೃದ್ಧಿ ಯೋಜನೆಯಲ್ಲಿ 22.5 ಹಣದಲ್ಲಿ ಹಣವಾಳ ಗ್ರಾಮದಲ್ಲಿ ಒಂದು ಮನೆ ಮತ್ತು ಗಾಂಧಿನಗರ ಗ್ರಾಮದಲ್ಲಿ ಒಂದು ಮನೆ ನಿರ್ಮಾಣ ಹಂತದಲ್ಲಿದೆ.
3. ಜವಾಹರ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ಹಣವಾಳ ಗ್ರಾಮದಲ್ಲಿ ಎರಡು ಅಂಗಡಿ ಮಳಿಗೆಗಳನ್ನು ಕಟ್ಟಿಸಿ ಪೂರ್ತಿಗೊಳಿಸಲಾಗಿದೆ.
4. 1.5 ಲಕ್ಷ ಅಭಿವೃದ್ಧಿ ಆಯವ್ಯಯದಲ್ಲಿ ಹದಿನಾರು ಸಂತೆ ಮಳಿಗೆಗಳಿಗೆ ಬಾಗಿಲು ಹಚ್ಚಿಸಿ ಬಾಡಿಗೆಗೆ ಕೊಡಲು ಉದ್ದೇಶಿಸಲಾಗಿದೆ.
5. ಗುಳದಾಳದಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದೆ.
6. ಹಣವಾಳ ಗ್ರಾಮದಲ್ಲಿ ಮಹಿಳೆಯರ ಶೌಚಾಲಯ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ

ಸದಸ್ಯರು: ಶ್ರೀ ದುರುಗಪ್ಪ, ಶ್ರೀಮತಿ ಮರಿತಂಗೆಮ್ಮ, ಶ್ರೀ ವಿರೂಪಾಕ್ಷಪ್ಪ ಎಜಕೆಟ್ಟಿ, ಶ್ರೀ ಮಲ್ಲಯ್ಯ ಕಂಪ್ಲಿ, ಶ್ರೀ ದಾನ ಸಿದ್ದರಾಮಯ್ಯ ಜಾಜಿ, ಶ್ರೀ ಸಿವರಾಯಪ್ಪ ಕುರಿತ, ಶ್ರೀಮತಿ ಹಂಪಮ್ಮ ಆಳ್ಳುಳ್ಳಿ, ಶ್ರೀಮತಿ ಗುತ್ತೆಮ್ಮ ಶ್ರೀಮತಿ ಗುರಮ್ಮ ಶ್ರೀಮತಿ ಲಕ್ಷ್ಮಿ ಕೇಶವರಾಮು, ಶ್ರೀ ಹುಲಿಗೆಪ್ಪ ಧರ್ಮಾಜಿ



ಶ್ರೀಮತಿ ಭೀಮವ್ವ
ಅಧ್ಯಕ್ಷರು



ಈರಣ್ಣ ಕುರಿ
ಉಪಾಧ್ಯಕ್ಷರು



ತಿಮ್ಮಾರೆಡ್ಡಿ
ಕಾರ್ಯದರ್ಶಿ

ಶುಭಾಶಯಗಳೊಂದಿಗೆ,

ನಗರಸಭೆ ಕಾರ್ಯಾಲಯ, ವಿಜಾಪುರ

ಪಕ್ಷಿನೋಟ

ವಿಜಾಪುರ ನಗರವು ಜಗತ್ತಿನ ಇತಿಹಾಸದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಕಲ್ಯಾಣದ ಚಾಲುಕ್ಯರಿಂದ 4ನೇ ಶತಮಾನದಲ್ಲಿ ಸ್ಥಾಪಿತವಾದ ಈ ನಗರವು ಅಂದಿನ ಕಾಲದಲ್ಲಿ ವಿಜಯಪೂರ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಚಾಲುಕ್ಯ ಮೂಲದ ವಿಕ್ರಮಾದಿತ್ಯನು ವಿಜಯಪೂರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ತದನಂತರ ಹಲವಾರು ರಾಜವಂಶದವರು ಆಳಿದರು. ಅವರಲ್ಲಿ ದೇವಗಿರಿ ಮೂಲದವರು ಹಾಗೂ ಆದಿಲ್ ಶಾಹಿ ವಂಶವು ಪ್ರಮುಖವಾದವುಗಳು. ಆದಿಲ್‌ಶಾಹಿ ವಂಶವು ಈ ನಗರಕ್ಕೆ ನೀಡಿದ ಕೊಡುಗೆಗಳು ಜಗತ್ತಿನ ಇತಿಹಾಸದಲ್ಲಿಯೇ ಅವಿಸ್ಮರಣೀಯ. ಆದಿಲ್ ಶಾಹಿ ವಂಶದ ಆಳಿಕೆಯಲ್ಲಿ ಕಟ್ಟಲ್ಪಟ್ಟ ಸ್ಮಾರಕಗಳಿಂದ ವಿಜಾಪುರ ನಗರ ತನ್ನದೇ ಆದ ಸ್ಥಾನಮಾನ ಕಂಡುಕೊಂಡಿದೆ. ಗೋಳಗುಮ್ಮಟ, ಇಬ್ರಾಹಿಂರೋಜಾ, ಮುಲಕ-ಎ-ಮೈದಾನತೋಫ್, ಬಾರಾಕಮಾನ, ಜಾಮೀಯಾ ಮಸೀದಿ, ಅಸಾರ ಮಹಲ ಮುಂತಾದ ಸ್ಮಾರಕಗಳು ಇಂದಿಗೂ ಕೂಡ ಜಗತ್ ವಿಖ್ಯಾತವಾಗಿದೆ. ವಿದೇಶಿಗಳ ಪ್ರವಾಸಿಗರನ್ನು ತನ್ನತ್ತ ಆಕರ್ಷಿಸಿ ಜಗತ್ತಿನ ನಕ್ಷೆಯಲ್ಲಿ ವಿಶಿಷ್ಟ ಸ್ಥಾನದಿಂದ ಗುರುತಿಸಲ್ಪಟ್ಟಿದೆ. ವಿಜಾಪುರ ನಗರವು 135 ಚದುರ ಕಿ.ಮೀ. ಗಾತ್ರ ಹೊಂದಿದೆ. ಉತ್ತರ ಕರ್ನಾಟಕದಲ್ಲಿ ವಿಜಾಪುರ ನಗರವು ಪ್ರಸಿದ್ಧ ಐತಿಹಾಸಿಕ ನಗರವಾಗಿದ್ದು, ಪ್ರವಾಸಿಗರ ಕೇಂದ್ರ ಸ್ಥಾನವಾಗಿರುತ್ತದೆ. ನಗರವು ಶೈಕ್ಷಣಿಕವಾಗಿ ಮತ್ತು ವ್ಯಾಪಾರಿ ಕೇಂದ್ರವಾಗಿ ಅಭಿವೃದ್ಧಿಗೊಳ್ಳುತ್ತಲಿದೆ. ಈ ನಗರವು ಉತ್ತರದ ಭೀಮಾನದಿ ಹಾಗೂ ದಕ್ಷಿಣದ ಕೃಷ್ಣಾನದಿಯ ಮಧ್ಯದಲ್ಲಿ ಅಭಿವೃದ್ಧಿಗೊಂಡಿದೆ.

ವಾರ್ಷಿಕ ಆದಾಯ ಮತ್ತು ಖರ್ಚಿನ ವಿವರ

ಅ.ನಂ.	ವರ್ಷ	ಆದಾಯ	ಖರ್ಚು
1.	1995-1996	5,47,51,507-00	5,59,54,335-00
2.	1996-1997	5,43,25,186-00	5,77,99,900-00
3.	1997-1998	5,94,02,611-00	7,77,07,888-00
4.	1998-1999	7,12,66,000-00	7,76,76,945-00
5.	1999-2000	9,75,75,800-00	12,72,59,488-00

ಪೌರಾಯುಕ್ತರು
ನಗರಸಭೆ, ವಿಜಾಪುರ

ಶುಭಾಶಯಗಳೊಂದಿಗೆ,

ಕುಂದಾಪುರ ತಾಲ್ಲೂಕು ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘ (ಸಿಐಟಿಯು) ಕುಂದಾಪುರ

ಸ್ಥಾಪನೆ: 13.5.2001

<u>ಪದಾಧಿಕಾರಿಗಳು</u>

ಎಚ್.ಕರುಣಾಕರ	ಅಧ್ಯಕ್ಷರು
ಎನ್.ಉಮೇಶ್	ಉಪಾಧ್ಯಕ್ಷರು
ಜೆ.ಗೋವಿಂದ	ಉಪಾಧ್ಯಕ್ಷರು
ವಿ.ನಾರಾಯಣ	ಉಪಾಧ್ಯಕ್ಷರು
ವಿ.ಚಂದ್ರ	ಕಾರ್ಯದರ್ಶಿ
ರಮೇಶ್ ವಿ.	ಜತೆ ಕಾರ್ಯದರ್ಶಿ
ಕೆ.ಆನಂದ	ಜತೆ ಕಾರ್ಯದರ್ಶಿ
ಸುರೇಂದ್ರ.ಜಿ.ಮೆಂಡನ್	ಜತೆ ಕಾರ್ಯದರ್ಶಿ
ಕೃಷ್ಣಮೂರ್ತಿ ಗಡಾಲ್	ಜತೆ ಕಾರ್ಯದರ್ಶಿ
ನಾಗರಾಜ ನಾಯಕ್	ಕೋಶಾಧಿಕಾರಿ

ಶುಭಾಶಯಗಳೊಂದಿಗೆ,

ಗ್ರಾಮ ಪಂಚಾಯತಿ ಹೊಸೂರು ಸಿದ್ದಾಪುರ

ತಾಲ್ಲೂಕು ದೇವದುರ್ಗ, ಜಿಲ್ಲೆ ರಾಯಚೂರು

ಆಡಳಿತವರ್ಗ:

ಶ್ರೀಮತಿ ಹನುಮವ್ವ ಯಾದವ	ಅಧ್ಯಕ್ಷರು
ಶ್ರೀಮತಿ ಯಲ್ಲಮ್ಮ ಮೇಗಳಮನಿ	ಉಪಾಧ್ಯಕ್ಷರು
ಶ್ರೀಮತಿ ಹನುಮಂತಿ ಕಾವಲಿ	ಸದಸ್ಯರು
ಶ್ರೀಮತಿ ಮಲ್ಲಮ್ಮ ಕುರುಬರು	ಸದಸ್ಯರು
ಶ್ರೀಮತಿ ಗೌರಮ್ಮ ಆಯ್ಯಾಳಿ	ಸದಸ್ಯರು
ಶ್ರೀಮತಿ ಹನುಮಂತಿ ಯರಜಂತಿ	ಸದಸ್ಯರು
ಶ್ರೀ ಚಂದಪ್ಪ ಬುದ್ದಿನ್ನಿ	ಸದಸ್ಯರು
ಶ್ರೀ ರಂಗಯ್ಯ ಲಿಂಗದಳ್ಳಿ	ಸದಸ್ಯರು
ಶ್ರೀ ಯಂಕಪ್ಪ ಮುರಾಳು	ಸದಸ್ಯರು
ಶ್ರೀ ಶಿವಶರಣಪ್ಪ ಪರ್ಶಿ	ಸದಸ್ಯರು
ಶ್ರೀ ಶಿವನಗೌಡ ಮಾ.ಸಾ	ಸದಸ್ಯರು
ಶ್ರೀ ಬಸವರಾಜ ಸ್ವಾಮಿ	ಸದಸ್ಯರು
ಶ್ರೀ ಹನುಮಯ್ಯ ಹುಲಿಗುಡ್ಡ	ಸದಸ್ಯರು

ಶ್ರೀಮತಿ ಮಹಾದೇವಮ್ಮ ಯರಕಮಟ್ಟಿ,
ಜಿಲ್ಲಾ ಪಂ. ಸದಸ್ಯರು, ಜಾಲಹಳ್ಳಿ

ಶ್ರೀ ಗೋವಿಂದರಾಯ ತಾ.ಪಂ. ಸದಸ್ಯರು, ಚಿಂಚೋಡಿ

ಸಿಬ್ಬಂದಿ ವರ್ಗ

ಶ್ರೀ ಲಿಂಗಪ್ಪ	ಕಾರ್ಯದರ್ಶಿ
ಶ್ರೀ ಮಲ್ಲಪ್ಪ ಹೂಗಾರ	ಕರವಸೂಲಿಗಾರ
ಶ್ರೀ ಹನುಮಯ್ಯ ಗಾಣಧಾಳ	ಪರಿಚಾರಕ
ಶ್ರೀ ಹನುಮಯ್ಯ ಹೊ.ಸಿದ್ದಾಪುರ	ನೀರು ಸರಬರಾಜುಗಾರ
ಶ್ರೀ ಯಲ್ಲಪ್ಪ ಬೊಮ್ಮನಹಳ್ಳಿ	ನೀರು ಸರಬರಾಜುಗಾರ
ಶ್ರೀ ಹನುಮಂತ ಸೋಮನಮರಡಿ	ನೀರು ಸರಬರಾಜುಗಾರ
ಶ್ರೀ ದುರುಗಪ್ಪ ಬಿ.ಆರ್.ಗುಂಡ	ನೀರು ಸರಬರಾಜುಗಾರ
ಶ್ರೀ ದುರುಗಪ್ಪ ಹೊ.ಸಿದ್ದಾಪುರ	ವೈರ್ ಮ್ಯಾನ್

2000-01ನೇ ಸಾಲಿನ ಪ್ರಗತಿ-ಸಾಧನೆ


1. ಭಾಗ್ಯಜ್ಯೋತಿ - 34
2. ಶೌಚಾಲಯ - 38
3. ವಸತಿಯೋಜನೆ ಅಡಿಯಲ್ಲಿ ಆಯ್ಕೆಯಾದ ಮನೆಗಳು ತಾ.ಪಂ. ಸದಸ್ಯರು ಚಿಂಚೋಡಿ ಇವರಿಂದ
   ಎ. ಹೊ.ಸಿದ್ದಾಪುರ ಗ್ರಾಮಕ್ಕೆ ಪಕ್ಕ ಮನೆಗಳು - 5
   ಸೆಮಿ ಮನೆಗಳು - 3
   ಬಿ. ಸೋಮನಮರಡಿ ಗ್ರಾಮಕ್ಕೆ ಪಕ್ಕಾ ಮನೆಗಳು - 5
   ಸೆಮಿ ಮನೆಗಳು - 2
4. ರಾಜೀವ ಗಾಂದಿ ವಸತಿ ಯೋಜನೆ ಅಡಿಯಲ್ಲಿ ಶ್ರೀಮಾನ್ಯ ಶಾಸಕರಿಂದ ಮನೆಗಳ ವಿತರಣೆ - 254
5. ಗ್ರಾ.ಪಂ.ಯು. ವಿಶೇಷ ಘಟಕ ಯೋಜನೆ ಅಡಿಯಲ್ಲಿ ಆಯ್ಕೆಯಾಗಿದೆ.
6. ಸ್ವಣ ಜಯಂತಿ ಯೋಜನೆ ಫಲಾನುಭವಿಗಳು - 5
7. ಗಂಗಾ ಕಲ್ಯಾಣ ಯೋಜನೆ

ವರ್ಗ-1 ರ ಹಣದಲ್ಲಿ

1. ಬೊಮ್ಮನಹಳ್ಳಿ ಗ್ರಾಮದಲ್ಲಿ ಶ್ರೀ ಯಲ್ಲಾಲಿಂಗೇಶ್ವರ ದೇವಸ್ಥಾನದ ಹತ್ತಿರ ರಸ್ತೆ ಸುಧಾರಣೆ ಮಾಡಿಸಲಾಗಿದೆ.
2. ಹೊ.ಸಿದ್ದಾಪುರ ಗ್ರಾಮದಲ್ಲಿ ಶ್ರೀ ಎಟಕನೂರು ತಾತನಕಟ್ಟೆಗೆ ಬಂಡೆಹಾಸುವ ಕೆಲಸ ಮಾಡಿಸಲಾಗಿದೆ.
3. ಶೇಕಡ 20 ಹಣದಲ್ಲಿ ಎಸ್‌ಸಿ/ಎಸ್‌ಟಿ 60 ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ವಿತರಣೆ ಮಾಡಲಾಗಿದೆ.


2000-01ನೇ ಸಾಲಿನಲ್ಲಿ ಜವಾಹರ ಗ್ರಾಮೀಣ ಸಮೃದ್ಧಿ ಯೋಜನೆ ಅಡಿಯಲ್ಲಿ (JGSY) ಕಾಮಗಾರಿಗಳ ವಿವರ

1. ಹೊ.ಸಿದ್ದಾಪುರ ಗ್ರಾಮದಲ್ಲಿ ಬಸ್ಸು ತಂಗುದಾಣದಿಂದ ಆಗಸಿವರೆಗೆ ಕಲ್ಲು ಪಿಟ್ಟಿಂಗ್ ಕೆಲಸ ಮಾಡಿಸಲಾಗಿದೆ. (ಪೂರ್ಣಗೊಂಡಿದೆ)
2. ಸೋಮನಮರಡಿ ಗ್ರಾಮದಲ್ಲಿ ಶ್ರೀ ಮಾರುತೇಶ್ವರ ಗುಡಿಯಿಂದ ಹರಿಜನ ಓಣಿಯವರೆಗೆ ಕಲ್ಲು ಪಿಟ್ಟಿಂಗ್ ಮತ್ತು ರಕ್ಷಣೆ ಗೋಡೆ ಕಟ್ಟಿಸುವ ಕೆಲಸ
3. ಸೋಮನಮರಡಿ ಗ್ರಾಮದಲ್ಲಿ ಕಂಬಾರ ಮನೆಯಿಂದ ಮುಖ್ಯರಸ್ತೆ ಪಕ್ಕದವರೆಗೆ ಒಳ ಚರಂಡಿ ನಿರ್ಮಾಣ ಮಾಡಿಸಲಾಗಿದೆ(ಪ್ರಗತಿಯಲ್ಲಿದೆ)
4. ಹೊ. ಸಿದ್ದಾಪುರ ಗ್ರಾಮದಲ್ಲಿ ಬಸ್ ತಂಗುದಾಣ ನಿರ್ಮಾಣ(ಪ್ರಗತಿಯಲ್ಲಿದೆ)
5. ಹೊ. ಸಿದ್ದಾಪುರ ಗ್ರಾಮದಲ್ಲಿ ಶಾಲಾ ಗೇಟ್ ನಿರ್ಮಾಣ ಕೆಲಸ (ಪ್ರಗತಿಯಲ್ಲಿದೆ)
6. ಬೊಮ್ಮನಹಳ್ಳಿ ಗ್ರಾಮದಲ್ಲಿ ಶಾಲಾ ಮುಂದೆ ಚೆತ್ ಹಾಕುವ ಕೆಲಸ ಪ್ರಗತಿಯಲ್ಲಿದೆ
7. ಭೋಗಿರಾಮನಗುಂಡ ಗ್ರಾಮದಲ್ಲಿ ಶಾಲಾ ಕಾಂಪೌಂಡ್ ಕಟ್ಟಡ ನಿರ್ಮಾಣ (ಪ್ರಗತಿಯಲ್ಲಿದೆ)
8. ಹರಿಜನ ಗಿರಿಜನ ಕಲ್ಯಾಣಕ್ಕಾಗಿ 22.5
   ಎ. ಹೊ.ಸಿದ್ದಾಪುರ ಗ್ರಾಮದಲ್ಲಿ ಎಸ್‌ಸಿ/ಎಸ್‌ಟಿ ಜನರಿಗೆ ಭೂ ಅಭಿವೃದ್ದಿಗಾಗಿ
   ಬಿ. ಸೋಮನಮರಡಿ ಗ್ರಾಮದಲ್ಲಿ "
   ಸಿ. ಭೋಗಿರಾಮನಗುಂಡ "



ಹನುಮವ್ವ
ಅಧ್ಯಕ್ಷರು, ಗ್ರಾಮ ಪಂಚಾಯತ ಕಾರ್ಯಾಲಯ

ಶುಭಾಶಯಗಳೊಂದಿಗೆ,




ಗಂಗಾವತಿ ತಾಲ್ಲೂಕು ಲಿಂಗವಂತ ನೌಕರರ ಸಂಘ ಜಿಲ್ಲಾ ಕೊಪ್ಪಳ

ಶ್ರೀ ಷಡಾಕ್ಷರಯ್ಯ ಸ್ವಾಮಿ	**ಎ.ಸಿ.ಗುಂಜಳ್ಳಿ**	**ಶಿವಲಿಂಗಯ್ಯ ಸಾಲಿಮಠ**
ಅಧ್ಯಕ್ಷರು	ಖಜಾಂಚಿ	ಕಾರ್ಯದರ್ಶಿ

ಪದಾಧಿಕಾರಿಗಳು
ಹಾಗೂ
ಸರ್ವಸದಸ್ಯರು


ಶುಭಾಶಯಗಳು



ಗೋಪಿನಾಥ ಜನರಲ್ ಸ್ಟೋರ್ಸ್

ಮಾಲೀಕರು: **ತಾರಾನಾಥ.ಪಿ.ಎಸ್.**

ಸಭೆ ಸಮಾರಂಭಗಳಿಗೆ ಊಟ-ತಿಂಡಿ ತಯಾರಿಸಿ ಕೊಡಲಾಗುತ್ತದೆ



ನಂ. 13, 18ನೇ ಅಡ್ಡರಸ್ತೆ, (ಕೆ.ಇ.ಬಿ. ಕ್ಯಾಶ್ ಕೌಂಟರ್ ಎದುರು),
ಸಂಪಂಗಿರಾಮನಗರ, ಬೆಂಗಳೂರು - 560 027

✆ 2272363

WITH BEST COMPLIMENTS FROM

B.S MOHANLAL'S SONS

CLOTH MERCHANT

M.G. MARKET ROBERTSONPET KGF 563 122
PHONE : 08153 60338

For Suitings, Shirtings, Silk & Jery Sarees, Branded Jeans, T Shirts, Ready made Shirts, Cotton Trousers and other latest varieties of Ready made Garments

BEST COMPLIMENTS FROM

ROYAL ENTERPRISES

GEETHA ROAD , ROBERSTONPET K.G.F

PHONE : STD 08153 / 60677

&

ROYAL DEPARTMENTAL STORE

DR. AMBEDKAR ROAD, ROBERTSONPET
KGF 563 122

PHONE : STD 08153 / 62399

WITH BEST COMPLIMENTS FROM

SM JEWELLERS

Air Conditioned show room

For Ethinic, Rajkot Casting, Coimbatore & All varietires of KDM 91.60 Jewels and 100% pure Silver Articles.

1ST CROSS ROAD ROBERTSONPET, KGF 563 122

BEST COMPLIMENTS FROM

PRKASH HOME APPLIANCES

Prestige Cookers, Non-Stick Wares,
Vijay Appliances, Butterfly Appliances
Orient Fans, Mixer Grinders

AVENUE ROAD, ROBERTSONPET, KGF 563 122

PHONE : STD 08153 SHOP: 60773 RES : 60822

ಶುಭಾಶಯಗಳೊಂದಿಗೆ,



ಎಸ್. ಶರಣೇಗೌಡ

ಅಧ್ಯಕ್ಷರು

ರಾಯಚೂರು ಜಿಲ್ಲಾ

ಕನ್ನಡ ಸಾಹಿತ್ಯ ಪರಿಷತ್ತು

ಕೆಳಗಿನೂರ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ ನಿಯಮಿತ

ಕೆಳಗಿನೂರ, ತಾ।। ಹೊನ್ನಾವರ (ಉ.ಕ)

ಹಿಂದಿನ ಐದು ವರ್ಷಗಳಲ್ಲಿ ಸಾಧಿಸಿದ ಸಾಂಪತ್ತಿಕ ಸ್ಥಿತಿಯ ಮಾಹಿತಿ (ರಕಂ ರೂ. ಗಳಲ್ಲಿ)

	31.31997	1998	1999	2000	2001
ಶೇರುಬಂಡವಾಳ	513030	705415	828055	1093395	1478180
ನಿಧಿಗಳು	963795	1166928	1630773	2124964	3211069
ಠೇವುಗಳು (ಮೆಂಬರರಿಂದ)	3658606	5013288	6444013	8504633	10778587
ಬರತಕ್ಕ ಸಾಲಗಳು	6025834	8451819	9792417	12955823	18110230
ಕೊಡತಕ್ಕ ಸಾಲಗಳು	1542565	2232756	822515	1710460	2251255
ನಿವ್ವಳ ಲಾಭ	265742	415170	453158	586595	790350
ಆಡಿಟ್ ಕ್ಲಾಸ್	ಅ	ಅ	ಅ	ಅ	ಅ
ಸಾಲವಸೂಲಿಪ್ರಮಾಣ	98.12%	97.40%	95.16%	92.31%	95%

ಶ್ರೀ ಎಸ್.ಕೆ.ಗೌಡ
ಮುಖ್ಯ ಕಾರ್ಯನಿರ್ವಾಹಕರು

ಶ್ರೀ ದೇವಮಂಜುಗೌಡ
ಅಧ್ಯಕ್ಷರು

ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿಯಮಿತ, ಬಾಗಲಕೋಟೆ

ತಂತಿ : " ಬಸವ ಬ್ಯಾಂಕ "

ದೂರವಾಣಿ :		
ಪ್ರಧಾನ ಕಛೇರಿ	: 20341	: 21099 (ಅಧ್ಯಕ್ಷರು)
	: 23341	: (ಆಡಳಿತ ಕಛೇರಿ)
ಬ.ವಿ.ವ.ಸಂಘ ಶಾಖೆ	: 20741	
ಬಿ.ಈ.ಕಾಲೇಜ ಶಾಖೆ	: 35311	
ಮಹಿಳಾ ಶಾಖೆ	: 23141	
ಬೀಳಗಿ ಶಾಖೆ	: 25428	
ನಿಡಗುಂದಿ ಶಾಖೆ	: 30100	
ಕೆರೂರ ಶಾಖೆ	: 30341	
ಆಲಮಟ್ಟಿ ಶಾಖೆ	: 30641	
ಮುಧೋಳ ಶಾಖೆ	: 23141	

ಸ್ಥಾಪನಾ ದಿನಾಂಕ : 02-03-1917   ರಜಿಸ್ಟರ್ ನಂ : 355

ರಿಜರ್ವ ಬ್ಯಾಂಕ ಲೈಸನ್ಸ ನಂ : ಕೆ – 815 ದಿ.ಡಿ. 31-12-1986

ಶ್ರೀ ಸಂಗಪ್ಪ ಶಿ. ನಾವಲಗಿ
ಉಪಾಧ್ಯಕ್ಷರು.

ಶ್ರೀ ಪ್ರಕಾಶ ಈ. ತಪಶೆಟ್ಟಿ
ಅಧ್ಯಕ್ಷರು.

ನಿರ್ದೇಶಕರು

ಶ್ರೀ ಕಳಕಪ್ಪ ಮು. ಬಾದೋಡಗಿ
" ಬನಬಸಪ್ಪ ಸಂ. ಅರಟ್ಟಿ
" ಬಾಳಾಸಾಹೇಬ ಬೀ. ಕಲಬುರ್ಗಿ
" ಕುಮಾರ ಎಸ್. ಜಗಳೂರ
" ಸಂಗಪ್ಪ ಎಸ್. ಕಂಕಣಮೇಲಿ
" ಚಂದ್ರಶೇಖರ ತ. ಪಾಟೀಲ
" ಮನೋಹರ ಎಸ್. ಎಳಿವಿಟ್ಟಿ
ಶ್ರೀಮತಿ ಸುಮಿತ್ರಾ ಬಿ. ಶಿರೂರ
ಶ್ರೀ ರಾಮಚಂದ್ರ ಹ. ಖಾತೇದಾರ

ಅಂಕಿಗಳು ದಿನಾಂಕ 31-08-2001 ಕ್ಕೆ ಇದ್ದಂತೆ

(ಅಂಕಿಗಳು ಲಕ್ಷ ರೂ.ಗಳಲ್ಲಿ)

ಶೇರ ಬಂಡವಾಳ	96.91	ಇತರ ಬ್ಯಾಂಕುಗಳಲ್ಲಿ ಠೇವಣಿ	1413.21
ಮೀಸಲು ನಿಧಿ	244.89	ಸರಕಾರಿ ಸಿಕ್ಯೂರಿಟಿಗಳಲ್ಲಿ	606.05
ಇತರ ನಿಧಿಗಳು	539.54	ಸಾಲ ವಿತರಿಸಿದ್ದು	4090.57
ಠೇವುಗಳು	6345.96	ಕಟ್ಟಡ ವ ಪೀಠೋಪಕರಣಗಳು	111.32

ಲಾಭ ದಿನಾಂಕ 31-03-2001 ಕ್ಕೆ ಇದ್ದಂತೆ 126.90

ಹಿಂದಿನ ವರ್ಷದ ಆಡಿಟ ವರ್ಗ ಅ

" ಗ್ರಾಹಕರ ತೃಪ್ತಿಕರ ಸೇವೆಯೇ ನಮ್ಮ ಧ್ಯೇಯವು '

ಹಾರ್ದಿಕ ಶುಭಾಶಯಗಳೊಂದಿಗೆ,

ಕರ್ನಾಟಕ ರಾಜ್ಯಪ್ರಾಥಮಿಕ ಶಾಲಾ ಶಿಕ್ಷಕಿಯರ ಸಂಘ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಐಕ್ಯತಾ ವೇದಿಕೆ

ಶುಭಾಶಯಗಳೊಂದಿಗೆ,

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ರಾಮದುರ್ಗ

ನಮ್ಮ ಮಾರುಕಟ್ಟೆ ಸಮಿತಿಯು ರೈತರಿಗೆ ನೀಡುವ ಭರವಸೆಗಳು

1. ಸರಕುಗಳ ಸರಿಯಾದ ತೂಕ
2. ಕೃಷಿ ಹುಟ್ಟುವಳಿಗಳ ವರ್ಗೀಕರಣ
3. ಮುಚ್ಚುಮರೆ ಇಲ್ಲದೆ ಕ್ರಮಬದ್ಧವಾದ ವ್ಯಾಪಾರ
4. ಕಾನೂನುಬದ್ಧ ಅಧಿಕೃತ ಪೇಟೆ ರಿವಾಜುಗಳು ಹಾಗೂ ಕಡಿತಗಳು
5. ಮಾರಾಟವಾದ ತಕ್ಷಣ ಹಣ ದೊರೆಯುವ ಏರ್ಪಾಡು
6. ವ್ಯಾಪಾರದಲ್ಲಿ ತಂಟೆತಕರಾರುಗಳಿಗೆ ತೀವ್ರ ಪರಿಹಾರ
7. ಮಾರುಕಟ್ಟೆ ಧಾರಣೆ-ವ-ಉಪಯುಕ್ತ ಸುದ್ದಿ ಸಮಾಚಾರಗಳನ್ನು ಪೂರೈಸುವುದು

ಕೃಷಿ ಉತ್ಪನ್ನಗಳನ್ನು ಹೆಚ್ಚುಹೆಚ್ಚಾಗಿ ನಿಯಂತ್ರಿತ ಮಾರುಕಟ್ಟೆಗಳಲ್ಲಿಯೇ ಮಾರಾಟ ಮಾಡಿ, ಹೆಚ್ಚಿನ ಲಾಭ ಪಡೆಯಲು ರೈತ ಬಾಂಧವರಿಗೆ ಕೋರಲಾಗಿದೆ.

ಶ್ರೀ ವ್ಹಿ.ಎಸ್.ಹಿರೇಮಠ
ಕಾರ್ಯದರ್ಶಿ
ಕೃ.ಉ.ಮಾ.ಸ. ರಾಮದುರ್ಗ

ಶ್ರೀ ಎನ್.ವ್ಹಿ.ಪಾಟೀಲ
ಸನ್ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು
ಕೃ.ಉ.ಮಾ.ಸ. ರಾಮದುರ್ಗ

ಶುಭಾಶಯಗಳೊಂದಿಗೆ,

ಸವದತ್ತಿ ಬೀಜೋತ್ಪಾದಕರ ಸಹಕಾರಿ ಸಂಘ ನಿ.,

ಸವದತ್ತಿ-591126

ರಿ.ನಂ. 23190 ಸ್ಥಾಪನೆ: 30.7.1996

ಹೆಡ್‌ಪೋಸ್ಟ್ ಆಫಿಸ್ ಹತ್ತಿರ,
ಜಿ. ಬೆಳಗಾವಿ. ಕರ್ನಾಟಕ

Join

LEFT WORD BOOK CLUB

Avail substantial Discounts

Member : FBBS -Rs. 500
40% Discount

Associate Member : FBBS - Rs. 200
30% Discount

Postage Free

Write to

The Manager
Left Word Bookse
12, Rajendra Prasad Road
New Delhi - 110001
Ph : 011-3356966, 3359456

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH